# ಪ್ರಸಾದ

ಮಾಸಿಕ

ಡಿಸೆಂಬರ್ 2025

ಸಂಪುಟ 40 ಸಂಚಿಕೆ 12



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಮಳವಳ್ಳಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ಕೊಪ್ಪಳ ಶ್ರೀ ಗವಿಮಠದ ಜಗದ್ಗುರುಗಳವರು ಮಾತನಾಡುತ್ತಿರುವುದು. ಶ್ರೀ ಶಂಕರ ಎಂ. ಬಿದರಿ, ಜಗದ್ಗುರು ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು, ಕನಕಪುರ ಹಿರಿಯ ಶ್ರೀಗಳು, ಶ್ರೀ ಈಶ್ವರ್ ಖಂಡ್ರೆ ಹಾಗೂ ಶ್ರೀ ಬಿ.ವೈ. ವಿಜಯೇಂದ್ರರವರುಗಳಿದ್ದಾರೆ (20 ಡಿಸೆಂಬರ್ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 12** **ಡಿಸೆಂಬರ್ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಮಳವಳ್ಳಿಯಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು ಉದ್ಘಾಟಿಸಿದರು. ಕನಕಪುರ ಕಿರಿಯ ಶ್ರೀಗಳು, ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶ್ರೀ ಥಾವರ್ ಚಂದ್ ಗೆಹ್ಲೋತ್, ಶ್ರೀ ಎನ್. ಚಲುವರಾಯಸ್ವಾಮಿ ಹಾಗೂ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಯವರುಗಳಿದ್ದಾರೆ (16 ಡಿಸೆಂಬರ್ 2025)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ದ್ವಾ ಸುಪರ್ಣಾ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಎಲ್ಲರನ್ನೂ ನಮ್ಮವರೆಂದವರು 17
ಶ್ರೀ ಸದಾಶಿವ ಸ್ವಾಮಿಗಳು
ಶ್ರೀ ವಿರಕ್ತ ಮಠ, ಮಾದಾಪಟ್ಟಣ

ಆದಿ ಜಗದ್ಗುರು ಭವ್ಯ ಬೆಳಕು ಸ್ಫೂರ್ತಿಯ ದೀಪ 23
ಶ್ರೀಮತಿ ದ್ರೌಪದಿ ಮುರ್ಮು, ರಾಷ್ಟ್ರಪತಿಗಳು

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 26
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಸಂಗೀತ ಸದಾ ಬೆಳೆಯಲಿ 31
ಡಾ. ಟಿ.ಎಸ್. ಸತ್ಯವತಿ

ಮಾನವ ಬದುಕಿನ ಮಹಾದೀಪ 35
ನಿತೇಶ್ ಪಾಟೀಲ್

ತಿರುವಳ್ಳುವರ್ ಮತ್ತು ಸರ್ವಜ್ಞರ ಅನುಭಾವ 38
ಡಾ. ಪಿ. ಮಣಿ

ವಾರ್ತಾವಿಹಾರ 47
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ಮರುಳು ಮಾನವರ ಬಗೆಯ ನೋಡಯ್ಯ

ಮಾಯೆಯ ಕಾಲು-ಬಾಯಿಗೆ ಸಿಕ್ಕಿಕೊಂಡು
ತೊತ್ತಳದುಳಿಸಿಕೊಂಬ
ಮರುಳು ಮಾನವರ ಬಗೆಯ ನೋಡಯ್ಯ ಮನವೇ !

ಗಂಡುದೊತ್ತಿನಂತೆ – ಮಂಡೆಯ ಬೋಳಿಸಿಕೊಂಡು
ಮುಂಡೆ ಹಾರುವಿತಿಯಂತೆ – ಬೆಳುವಲ್ಲ ಮಾಡಿಕೊಂಡು
ತೆಂಗ ಪೋಟಾಡುವಂತೆ – ಕರಸ್ಥಲದಲ್ಲಿ ಲಿಂಗವ ಹಿಡಿದುಕೊಂಡು
ಠವುಳಿಕಾರನಂತೆ – ಮನವ ಕದ್ದು ಮಾತನಾಡುತ್ತ,
ಮನೆಮನೆಗೆ ಹೋಗಿ
ಹೊಟ್ಟೆಯ ಕಿಚ್ಚಿಗೆ ಸಟೆಯ ಶಾಸ್ತ್ರವ ಹೇಳುವ ಡೊಂಬರಂತೆ
ಪುಸ್ತಕವ ಹಿಡಿದುಕೊಂಡು ಪುರಜನವ ಮೆಚ್ಚಿಸುವ ಕೋಡಿಗರಂತೆ
ವೇಷಮಂ ಹಲ್ಲಣಿಸಿಕೊಂಡು,
ನಿಜವಿರಕ್ತರಂತೆ ದೇಶಮಧ್ಯದಲ್ಲಿ ಸುಳಿದು,
ವಿರಕ್ತರ ಕಂಡಲ್ಲಿ ಸಟೆಯ ಭಕ್ತಿಯ ಹೊಕ್ಕು,
ಹೂಸಕದುಪಚಾರಮಂ ನುಡಿದು –

ಮಾಡಿ ನೀಡುವ ಭಕ್ತರ ಮನೆಗೆ ಭಿಕ್ಷಮುಖದಿಂದ ಹೋಗಿ
ನಚ್ಚು ಮಚ್ಚ ನುಡಿದು
ಉಂಡು ಕೊಂಡು ದಿನಕಾಲಮಂ ನೂಂಕಿ,
ಮನೋವಿಕಾರದಿಂದ ಪರಧನ ಪರಸ್ತ್ರೀಯರಿಗಳುಪಿ,
ಭವಿ-ಭಕ್ತರೆನ್ನದೆ ಉಂಡುಟ್ಟಾಡಿ
ತೀರ್ಥ-ಪ್ರಸಾದವೆಂಬ ಅಳುಕಿಲ್ಲದೆ ಚೆಲ್ಲಾಡಿ
ನಡೆಯಲ್ಲದ ನಡೆಯ ನಡೆದು, ನುಡಿಯಲ್ಲದ ನುಡಿಯ ನುಡಿದು

ತನ್ನ ಕಪಟವನರಿಯದೆ
ಶಿವಶರಣರ ಮೇಲೆ [ಮಿಥ್ಯವನಾಡಿ] ಹಗೆಯಂ ಸಾಧಿಸಿ
ಹಸಿಯ ಮಾದಿಗರಂತೆ ಹುಸಿಯ ನುಡಿದು
ಶಿವಶರಣರ ಮೇಲೆ ಒಂದೊಂದ ನುಡಿದು ಗಳಹುತಿಪ್ಪ
ನರಕಜೀವರುಗಳಿಗೆ ಮಾಡಿದ ಪರಿಭವದ ರಾಟವಾಳವು
ಗಿಕ್ಕು ಗಿರ್ರೆಂದು ತಿರುಗುತ್ತಲಿದೆಯಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

> ತತ್ರ ತಾವತ್ ವೃಕ್ಷರೂಪಕಕಲ್ಪಯಾ ವೈರಾಗ್ಯ ಹೇತೂಃ
> ಸಂಸಾರಸ್ವರೂಪಂ ವರ್ಣಯುತಿ ವಿರಕ್ತಸ್ಯ ಹಿ ಸಂಸಾರಾತ್
> ಭಗವತ್ತ್ವಜ್ಞಾನೇ ಅಧಿಕಾರಃ ನಾನ್ಯಸ್ಯ ॥

ಭಗವದ್ಗೀತೆಗೆ ಶಂಕರಾಚಾರ್ಯರು ಬರೆದ ಭಾಷ್ಯದಲ್ಲಿನ ಈ ಶ್ಲೋಕವು ಗೀತೆಯ 15ನೇ ಅಧ್ಯಾಯದ ಮೊದಲನೆಯ ಶ್ಲೋಕದ ಪೀಠಿಕಾ ತಾತ್ಪರ್ಯವಾಗಿದೆ. ಆಚಾರ್ಯರು ಊರ್ಧ್ವಮೂಲ ಅಶ್ವತ್ಥ ವೃಕ್ಷದ ರೂಪಕದ ಮೂಲಕ ಭಕ್ತಿಯೋಗ, ಜ್ಞಾನಪ್ರಾಪ್ತಿ ಮತ್ತು ಸಂಸಾರವನ್ನು ವೃಕ್ಷದ ತತ್ತ್ವದಲ್ಲಿ ವಿವರಿಸಿದ್ದಾರೆ. ಮೇಲಿನ ಶ್ಲೋಕಾರ್ಥವೆಂದರೆ "ಸಂಸಾರದಲ್ಲಿ ವಿರಕ್ತನಾದವನಿಗೆ ಮಾತ್ರ ಭಗವಂತನ ತತ್ತ್ವವನ್ನು ಅರಿತುಕೊಳ್ಳುವುದಕ್ಕೆ ಅಧಿಕಾರವಿದೆಯೇ ಹೊರತು, ಬೇರೆ ಯಾರಿಗೂ ಅಲ್ಲ." ಗೀತೆಯು ಕರ್ಮ, ಜ್ಞಾನ, ಭಕ್ತಿ, ವೈರಾಗ್ಯ ಮತ್ತು ಮೋಕ್ಷಗಳ ನಡುವಿನ ಆಂತರಿಕ ಸಂಬಂಧವನ್ನು ತಿಳಿಸುತ್ತದೆ. ಮೇಲಿನ ಶ್ಲೋಕವು ಈ ಎಲ್ಲಾ ತತ್ತ್ವಗಳ ಸಾರವನ್ನು ಒಳಗೊಂಡಿದೆ. ಸರ್ವ ಕರ್ಮಫಲಗಳೂ ಭಗವಂತನ ಅಧೀನ. ಭಕ್ತಿಯೋಗದ ಮೂಲಕ ಜ್ಞಾನಪ್ರಾಪ್ತಿ ಸಾಧ್ಯ. ಜ್ಞಾನದಿಂದ ಮಾತ್ರ ಗುಣಾತೀತ ಸ್ಥಿತಿಯನ್ನು ಪಡೆದು ಮೋಕ್ಷವನ್ನು ಹೊಂದಬಹುದು.

ವಿಶೇಷತಃ ಅರ್ಜುನನು ಕೃಷ್ಣನನ್ನು ಕೇಳದೇ ಇದ್ದರೂ, ಅರ್ಜುನನ ಹಿತಕ್ಕಾಗಿ ಮಾತ್ರವಲ್ಲ, ಸರ್ವಜೀವಿಗಳ ಹಿತಕ್ಕಾಗಿ ಕೃಷ್ಣನು ಆತ್ಮತತ್ತ್ವವನ್ನು ವಿವರಿಸುತ್ತಾನೆ. ಇದನ್ನು 'ಊರ್ಧ್ವಮೂಲ ಅಶ್ವತ್ಥ ವೃಕ್ಷ' ರೂಪಕವನ್ನು ಉಪಯೋಗಿಸಿ ಸಂಸಾರದ ಸ್ವರೂಪವನ್ನು ಶಂಕರಾಚಾರ್ಯರು ವಿವರಿಸಿದ್ದಾರೆ. ಈ ರೂಪಕದ ಮೂಲ ಉದ್ದೇಶ ವೈರಾಗ್ಯವಿಲ್ಲದೆ ಭಗವತ್ತತ್ತ್ವಜ್ಞಾನಕ್ಕೆ ಅರ್ಹತೆ ದೊರಕುವುದಿಲ್ಲ. ಇಲ್ಲಿ ಸಂಸಾರವನ್ನು ಒಂದು ವೃಕ್ಷಕ್ಕೆ ಹೋಲಿಸಲಾಗಿದೆ. ಊರ್ಧ್ವಮೂಲ = ಬೇರು ಮೇಲಿರುವುದು (ಪರಮಾತ್ಮ), ಅಧಃ ಶಾಖಾ = ಕೆಳಗೆ ಹರಡುವ ಶಾಖೆಗಳು (ಸಂಸಾರ), ಗುಣಪ್ರವೃದ್ಧಾಃ = ಗುಣಗಳಿಂದ ಪೋಷಿತವಾಗಿರುವ ಶಾಖೆಗಳು; ವಿಷಯ ಪ್ರವಾವಾಃ = ಇಂದ್ರಿಯ ವಿಷಯಗಳೇ ಮೊಗ್ಗುಗಳು.

ಸಾಮಾನ್ಯವಾಗಿ ವೃಕ್ಷಗಳಲ್ಲಿ ಬೇರು ಕೆಳಗಿರುತ್ತವೆ. ಆದರೆ ಇಲ್ಲಿ ಬೇರು ಮೇಲಿರುವುದರಿಂದ ಈ ವೃಕ್ಷವು ಅಸಹಜ, ಇದು ಅಸ್ಥಿರ ಮತ್ತು ನಶ್ವರ ಎಂಬುದನ್ನು ಸೂಚಿಸುತ್ತದೆ. ಸಂಸಾರವು ಅಶಾಶ್ವತವಾದುದು ಮತ್ತು ಕ್ಷಣಭಂಗುರವಾದುದು. ಸಂಸಾರವು ಹೊರಗೆ ಸುಂದರವಾಗಿ ಕಾಣಿಸಿದರೂ ಅದು ಬಂಧನದಿಂದ ಕೂಡಿದೆ. ವಿಷಯ

ಭೋಗಗಳು ಕ್ಷಣಿಕ ಸುಖವನ್ನು ಕೊಡುತ್ತವೆ. ಆದರೆ ಅಂತಿಮವಾಗಿ ದುಃಖವನ್ನು ತರುತ್ತವೆ. ಆದುದರಿಂದ ಸಂಸಾರದಲ್ಲಿ ರಕ್ತನಾಗದೆ, ವಿರಕ್ತನಾಗಬೇಕು. ವಿಷಯಗಳ ಲಾಲನೆ ಮತ್ತು ಭೋಗಗಳು ಅಧೋಮುಖಿಯಾದ ಜಾರುಬಂಡೆಯಂತೆ. ಒಮ್ಮೆ ಜಾರಲು ಆರಂಭಿಸಿದರೆ, ಜಾರುತ್ತಲೇ ಇರುತ್ತವೆ. ಜಾರುವಾಗ ಸುಧಾರಿಸಿಕೊಳ್ಳಲು ಅವಕಾಶವಿರುವುದಿಲ್ಲ. ಜಲಪಾತದಿಂದ ಧುಮ್ಮಿಕ್ಕುವ ಜಲಪಾತದ ನೀರಿನಂತೆ. ಅಧೋಗತವಾಗಿ ಹಾರುವ ಗೃದ್ಧದಂತೆ ಬುದ್ಧಿ–ಮನಸ್ಸು–ದೇಹ ವಿಷಯಾಸಕ್ತವಾಗುತ್ತವೆ.

ಆದುದರಿಂದ ಸಂಸಾರದಲ್ಲಿ ವಿರಕ್ತನಾಗಬೇಕು. ಸಂಸಾರವೆಂದರೆ ಕೇವಲ ಕೌಟುಂಬಿಕ ವ್ಯವಸ್ಥೆಯಲ್ಲ, ಹುಟ್ಟು–ಸಾವಿನ ಚಕ್ರದಲ್ಲಿ ಸಿಲುಕುವುದು. ಚಕ್ರದಲ್ಲಿ ಆರಂಭವೂ ಇರುವುದಿಲ್ಲ. ಅಂತ್ಯವೂ ಇರುವುದಿಲ್ಲ. ಅದೊಂದು ವರ್ತುಲ. ಪ್ರವೇಶಿಸುವುದು ಸುಲಭ. ಹೊರಬರುವುದು ಕಠಿಣ. ಸಂಸಾರವೆಂಬುದು ಸರಳ ರೇಖೆಯಲ್ಲ. ಈ ರೇಖೆ ಲಂಬಾಕೃತಿಯಲ್ಲಾಗಲಿ–ಅಡ್ಡಾಕೃತಿಯಲ್ಲಿ ಇರುವುದಿಲ್ಲ. ಈ ಆಕೃತಿಗಳಲ್ಲಿ ಆರಂಭದಲ್ಲಾಗಲಿ ಅಂತ್ಯವಿರುತ್ತದೆ. ಒಮ್ಮೆ ವಿಷಯಾಸಕ್ತಿಯನ್ನು ಹೊಂದಿದರೆ ಮತ್ತೆ ಮತ್ತೆ ಅದರಲ್ಲಿಯೇ ತಲ್ಲೀನತೆಯನ್ನು ಉಂಟುಮಾಡುತ್ತದೆ. ಈ ಸಂಸಾರದ ವಿರಕ್ತಿಯೇ ಭಗವಂತನನ್ನು ಅರಿಯುವುದಕ್ಕೆ ರಹದಾರಿ. ಈ ರಹದಾರಿಯಲ್ಲಿರುವವನ ಮನಸ್ಸು ಸ್ಥಿರವಾಗಿರುತ್ತದೆ. ವೈರಾಗ್ಯವಿಲ್ಲದೆ ಜ್ಞಾನ ಸಾಧ್ಯವಿಲ್ಲ. ಇದನ್ನೇ ಆಚಾರ್ಯರು "ವಿರಕ್ತಸ್ಯ ಹಿ ಸಂಸಾರಾತ್ ಭಗವತ್ತತ್ವಜ್ಞಾನೇ ಅಧಿಕಾರಃ" ಎಂದು ಹೇಳಿದ್ದಾರೆ.

ವೈರಾಗ್ಯವೆಂದರೆ ಲೋಕತ್ಯಾಗವಲ್ಲ, ಎಲ್ಲದರಲ್ಲೂ ನಿರಾಸಕ್ತಿಹೊಂದಿ ಯಾವ ಕಾರ್ಯವನ್ನು ಮಾಡದೆ ಸೋಮಾರಿಯಾಗುವುದಲ್ಲ. ಬದಲಿಗೆ ಅತಿಯಾದ ಆಸಕ್ತಿಯ ತ್ಯಾಗ, ಅಹಂಕಾರದ ನಾಶ, ಫಲಾಪೇಕ್ಷೆಯಿಲ್ಲದ ನಿವೃತ್ತಿ. ಇದರಿಂದ ಮನಸ್ಸು ಶುದ್ಧವಾಗುತ್ತದೆ. ಶುದ್ಧ ಮನಸ್ಸಿನಲ್ಲಿ ಜ್ಞಾನ ಪ್ರಕಾಶಮಾನವಾಗುತ್ತದೆ. ಇದರರ್ಥ "ಭಕ್ತಿಯೋಗೇನ ಮಾಂ ಯೇ ಸೇವಂತೇ" ಭಗವಂತನನ್ನು ಭಕ್ತಿಯೋಗದ ಮೂಲಕ ಸೇರಬಹುದು ಎಂದು. ಆದರೆ ಭಕ್ತಿಯೋಗವೆಂದರೆ ಕೇವಲ ಪೂಜೆ–ಅರ್ಚನೆ–ಜಪ ಮಾತ್ರವಲ್ಲ. ಇವೆಲ್ಲವೂ ಸೋಪಾನಗಳೇ ಹೊರತು, ಆತ್ಯಂತಿಕ ಸಾಧನ ಅಥವಾ ಸಾಧನೆಯಲ್ಲ. ಅತಿಯಾದ ಭೌತಿಕ ಪೂಜೆಯೂ ಶ್ರೇಯಸ್ಕರವಾದುದಲ್ಲ. ಅದು ಮೌಢ್ಯವಾಗಬಹುದು. ಅಥವಾ ಅದೇ ಬಂಧನವೂ ಆಗಬಹುದು. ಭೌತಿಕ ಪೂಜೆ ಬೌದ್ಧಿಕವಾಗಬೇಕು. ಬೌದ್ಧಿಕವೆಂದರೆ ಅರಿವು. ಅರಿವೆ ಜ್ಞಾನಕ್ಕೆ ದಾರಿಯಾಗುತ್ತದೆ. ಅದುವೇ ಅನುಭಾವ. ಈ ಅನುಭಾವಾತ್ಮಕ ಜ್ಞಾನವೇ ಆತ್ಮ–ಪರಮಾತ್ಮ ಭಕ್ತ–ಭಗವಂತನ ಸಮ್ಮಿಲನಕ್ಕೆ ಇಂಬು ನೀಡುತ್ತದೆ. ಇದನ್ನರಿತು ಬಾಳುವುದು ಶ್ರೇಯಸ್ಕರವಾದುದು.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿಯ ಬಿಡು ನಾಲಿಗೆ
ವಿಚಾರವಿಲ್ಲವೆ ಪರರ ದೂಷಿಸಲು ಚಾಚಿಕೊಂಡಿರುವಂತಹ ನಾಲಿಗೆ

ಶ್ರೀ ಪುರಂದರದಾಸರ ಈ ಸುಪ್ರಸಿದ್ಧವಾದ ಪದ ನಾಲಿಗೆಯ ಉಪಯೋಗದ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತದೆ. ಎಲ್ಲ ಕಾಲಗಳಲ್ಲೂ ಇಡೀ ಜಗತ್ತಿನಲ್ಲಿ ನಾಲಿಗೆಯ ಈ ಉಪಯೋಗ ಅಥವಾ ದುರುಪಯೋಗ ಒಂದು ಚರ್ಚೆಯ ವಸ್ತುವಾಗಿದೆ.

ನೋವಿರುವ ಹಲ್ಲಿನ ಕಡೆಗೇ ನಾಲಿಗೆ ಮತ್ತೆ ಮತ್ತೆ ಹೊರಳುತ್ತಿರುತ್ತದೆ. ನಾಲಿಗೆ ನೋವಿರುವ ಹಲ್ಲಿನ ಕಡೆ ಅಪ್ರಜ್ಞಾಪೂರ್ವಕವಾಗಿ ಹೊರಳುವುದು ನೋವನ್ನು ಹೆಚ್ಚಿಸಲಿಕ್ಕಲ್ಲ, ಬದಲಿಗೆ ಉಪಶಮನಗೊಳಿಸಲು. ಇದರಲ್ಲಿ ಮತ್ತೊಂದು ಸ್ವಾರಸ್ಯವಿದೆ. ನಾಲಿಗೆ ಇರುವುದು ನಾವು ತಿನ್ನುವ ಆಹಾರವನ್ನು ಸವಿಯಲು. ಅದಕ್ಕೆ ಮುಖ್ಯವಾಗಿ ಅದು ದ್ರವಿಸುವ ಲಾಲಾರಸ ಅಥವಾ ಜೊಲ್ಲು ನಾವು ತಿನ್ನುವ ಆಹಾರದ ಜೊತೆ ಸೇರಿದಾಗ ಪಚನಕ್ರಿಯೆ ಸುಗಮವಾಗುತ್ತದೆ. ಆದರೆ ನಾಲಿಗೆಯ ಈ ಪ್ರಾಕೃತಿಕ ಕ್ರಿಯೆಯನ್ನು ಕಡೆಗಣಿಸಿ ನಾಲಿಗೆ ಇರುವುದು ಕೇವಲ ಮಾತನಾಡುವುದಕ್ಕೆ ಎಂದು ನಾವು ಭಾವಿಸಿದ್ದೇವೆ. ನಾಲಿಗೆಯ ಪ್ರಾಥಮಿಕ ಕೆಲಸ ಆಹಾರದ ಸೇವನೆ; ಆನುಷಂಗಿಕವಾದ ಕ್ರಿಯೆ ಮಾತನಾಡುವುದು. ಆದರೆ ಲೋಕ ಈ ಕ್ರಿಯೆಗಳನ್ನು ಅದಲುಬದಲು ಮಾಡಿದೆ. ಸಮಸ್ಯೆಯ ಮೂಲ ಇರುವುದು ಇಲ್ಲೇ, ನಾಲಿಗೆಯ ಮೂಲದಲ್ಲೇ!

ಮಹಾಭಾರತದ ಯುದ್ಧಪೂರ್ವ ಸಂದರ್ಭದಲ್ಲಿ ದುರ್ಯೋಧನ ಹಾಗೂ ಅರ್ಜುನರಿಬ್ಬರೂ ಕೃಷ್ಣನ ಸಹಾಯ ಕೋರುವುದಕ್ಕಾಗಿ ದ್ವಾರಕೆಗೆ ತೆರಳಿದರು. ಶ್ರೀಕೃಷ್ಣ ಆಗ ಮಲಗಿಕೊಂಡಿದ್ದ. ಅರ್ಜುನ ಕೃಷ್ಣನ ಕಾಲ ಬಳಿ, ದುರ್ಯೋಧನ ತಲೆಯ ಬಳಿ ಕುಳಿತರು. ಎದ್ದ ತಕ್ಷಣ ಕೃಷ್ಣ ಅರ್ಜುನನನ್ನು ಕಂಡು ಮಾತನಾಡಿದ. ಅನಂತರ ದುರ್ಯೋಧನನನ್ನು ಮಾತನಾಡಿಸಿದ. ಇಬ್ಬರೂ ಸಹಾಯವನ್ನು ಕೋರಿದರು. ಆಗ ಕೃಷ್ಣ "ಒಂದು ಅಕ್ಷೋಹಿಣಿ ನಾರಾಯಣೀ ಸೇನೆ ಮತ್ತು ಬಲರಾಮದೇವರು ಎಲ್ಲರೂ ಒಂದು ಕಡೆ. ಯಾವುದೇ ಆಯುಧವನ್ನು ಬಳಸದ ನಾನು ಒಂದು ಕಡೆ. ನಿಮಗೆ ಯಾವುದು ಬೇಕು ಆಯ್ಕೆ ಮಾಡಿಕೊಳ್ಳಿ" ಎಂದ. ಅರ್ಜುನ ಕೃಷ್ಣನನ್ನು, ದುರ್ಯೋಧನ ನಾರಾಯಣೀ ಸೇನೆಯನ್ನು ಆಯ್ಕೆ ಮಾಡಿಕೊಂಡರು. ಆದರೆ ಕೃಷ್ಣನ ಮರ್ಮ ದುರ್ಯೋಧನನಿಗೆ ತಿಳಿಯಲಿಲ್ಲ. ಮಹಾಭಾರತದಲ್ಲಿ ಭೀಷ್ಮ, ದ್ರೋಣ, ಕರ್ಣ, ಅರ್ಜುನ ಮುಂತಾದ ಅತಿರಥ

ಮಹಾರಥರಿದ್ದರು. ಅವರ ಬಳಿ ಅಗಾಧವಾದ ಶಸ್ತ್ರಾಸ್ತ್ರಗಳಿದ್ದವು. ಆದರೆ ಯುದ್ಧದಲ್ಲಿ ಬಳಕೆಯಾದ ಅತಿ ಅಪಾಯಕಾರಿ ಆಯುಧವೆಂದರೆ ನಾಲಿಗೆ. ಅದನ್ನು ಎಲ್ಲರೂ ಮರೆತಿದ್ದರು; ಕೃಷ್ಣ ತನ್ನ ನಾಲಿಗೆಯನ್ನೇ ಮಹಾನ್ ಆಯುಧವನ್ನಾಗಿಸಿದ ಪರಿಣಾಮವಾಗಿ ಯುದ್ಧದಲ್ಲಿ ಪಾಂಡವರಿಗೆ ಜಯವಾಯಿತು. ಜಗತ್ತಿನಲ್ಲಿ ನಾಲಿಗೆಗಿಂತ ಅಪಾಯಕಾರಿಯಾದ ಆಯುಧ ಮತ್ತೊಂದಿಲ್ಲ.

ನಾಲಿಗೆಯ ಎರಡು ರೀತಿಯ ಉಪಯೋಗಗಳು, ಅವುಗಳ ಪರಿಣಾಮಗಳನ್ನು ಅರಿತೂ ಸಹ ನಾವು ಅದರ ದುರುಪಯೋಗಕ್ಕೆ ಸದಾ ಎಳಸುತ್ತೇವೆ. ಕೆಡುಕಿನಲ್ಲಿ ಇರುವ ಸುಖ, ಒಳಿತಿನಲ್ಲಿ ಇರಲಾರದು ಎಂದು ಲೋಕ ಸಾಮಾನ್ಯವಾಗಿ ಭಾವಿಸಿದೆ. ಇಂದು ಸಾಮಾಜಿಕ ಸಂಬಂಧಗಳು ಹಾಗೂ ಬದುಕಿನ ವ್ಯವಸ್ಥೆಗೆ ನಾಲಿಗೆಯೇ ಆಧಾರವಾದರೂ, ಅದು ನಿಜವನ್ನು ನುಡಿದಿದ್ದಕ್ಕಿಂತ ಸುಳ್ಳು ಹೇಳಿದ್ದೇ ಹೆಚ್ಚು. ನಿಜವೆಂಬುದು ವರ್ಣರಹಿತವಾದದ್ದು. ಸುಳ್ಳು ರಂಜಕವಾದದ್ದು ಮತ್ತು ಸಹಸ್ರಮುಖಿಯಾದದ್ದು. ಮನುಷ್ಯ ಯಾವಾಗಲೂ ವರ್ಣರಂಜಿತನಾಗಿರಲು ಬಯಸುತ್ತಾನೆಯೇ ಹೊರತು ವರ್ಣರಹಿತವಾಗಿ ಇರಲಾರ. ಜಗತ್ತಿನಲ್ಲಿರುವ ಎಲ್ಲ ತತ್ವಗಳು, ಮತಗಳು, ಜಾತಿ, ಪಂಥಗಳು ಎಲ್ಲವೂ ಈ ನಾಲಿಗೆಯ ಮೂಲಕವೇ ಹುಟ್ಟಿದ ಸಂಗತಿಗಳು. ಈ ವರ್ಣರಂಜಿತ ಅಂಶಗಳು ಆತ್ಯಂತಿಕ ಸತ್ಯವೂ ಅಲ್ಲ. ಧರ್ಮ ನಿಜವಾದ ಅರ್ಥದಲ್ಲಿ ವರ್ಣರಹಿತ. ಸಕಲ ಮನುಷ್ಯರಿಗೂ ಅಪ್ಯಾಯಮಾನ. ಆದರೆ ಧರ್ಮ ಇಂದು ಒಂದು ಪಂಥದ, ಮತದ ಮಟ್ಟಕ್ಕೆ ಕುಸಿದಿರುವುದು ಮಾನವತೆಯ ಪಾಲಿನ ದುರಂತ.

ಇತ್ತೀಚೆಗೆ ನಮ್ಮ ತತ್ವಜ್ಞಾನಿಗಳು/ಪ್ರವಾದಿಗಳ ಹಾಗೆ ಮಾತನಾಡುವ ಜನರು ತಾವು ನಂಬಿರುವ ಮತ/ಪಂಥಗಳ ಸಮರ್ಥನೆ ಮಾಡುವ ಸಂದರ್ಭದಲ್ಲಿ ಬಳಸುವ ಆತ್ಮಸ್ತುತಿ ಹಾಗೂ ಪರನಿಂದೆಯನ್ನು ನೋಡಿದರೆ ನಾಲಿಗೆಯ ಜೊಲ್ಲು ಆಹಾರವನ್ನು ಅರಗಿಸುವುದಕ್ಕಿಂತಲೂ ಎದುರಿನವರ ಪಾಲಿನ ಎಂಜಲಾಗಲು ಬಳಕೆಯಾಗಿರುವುದೇ ಹೆಚ್ಚು. ಮನುಷ್ಯನಿರ್ಮಿತವಾದ ಎಲ್ಲ ಮತ–ಪಂಥಗಳೂ ತಮ್ಮವೇ ಆದ ಇತಿಮಿತಿಗಳಿಂದ ಕೂಡಿವೆ. ಅದನ್ನು ಯಾರೇ ಪ್ರತಿಪಾದಿಸಿದ್ದರೂ ಅದರ ಅಂತಿಮ ಫಲ ಅಷ್ಟೇ. ಉಪನಿಷತ್ತಿನಲ್ಲಿ ಆಚಾರ್ಯರುಗಳು ಕಂಡುಕೊಂಡ ಸತ್ಯದ ಸ್ವರೂಪ ಭಿನ್ನವಾದದ್ದು. ಹಾಗೆಂದ ತಕ್ಷಣ ಉಪನಿಷತ್ತು ಕೂಡ ಒಂದು ಮತ/ಪಂಥಕ್ಕೆ ಸೇರಿಲ್ಲವೇ ಎನ್ನಬಹುದು. ಹೌದು, ಸೇರಿವೆ. ಆದರೆ ಉಪನಿಷತ್ತುಗಳು ರಚನೆಯಾದ ಕಾಲದಲ್ಲಿ ಇಂದಿನ ನಮ್ಮ ಕುಲ, ಮತ/ಪಂಥಗಳು ಇನ್ನೂ ಹುಟ್ಟಿರಲಿಲ್ಲ. ಅವು ಯಾವುದೇ ನಿರ್ದಿಷ್ಟ ಸಮುದಾಯಕ್ಕೆ ಮಾತ್ರ ಅನ್ವಯವಾಗುವ ಅಂಶಗಳಲ್ಲ. ಅಲ್ಲಿ ಪ್ರಕೃತಿ ಆರಾಧನೆಗಳ ಪ್ರಸ್ತಾಪ ಮಾತ್ರ ಇದೆ. ಪ್ರಕೃತಿಯ ತತ್ವಗಳೇ ಪರಮ ತತ್ವಗಳೆಂದು ಉಪನಿಷತ್ತುಗಳು ಪ್ರತಿಪಾದಿಸುತ್ತದೆ. ಈ ಪ್ರಕೃತಿಯ ತತ್ವಗಳು ಯಾರಿಗಾದರೂ ಎಲ್ಲ ಕಾಲಕ್ಕೂ ಅನ್ವಯವಾಗುವಂತಹದ್ದು. ಗಾಳಿ, ನೀರು, ಆಕಾಶ, ಅಗ್ನಿ, ವಾಯು ಎಲ್ಲರಿಗೂ ಒಂದೇ ಆಗಿವೆ.

ಆದರೆ ನಮ್ಮ ನಾಲಿಗೆ ತನ್ನ ಮೂಲಭೂತ ಪ್ರಾಕೃತಿಕ ಕಾರ್ಯವನ್ನು ಮರೆತು ರಂಜನೆಯ ಚಪಲಕ್ಕೆ ಬಿದ್ದು ತಾನೇ ಸೃಷ್ಟಿಸಿಕೊಂಡ ಜೇಡರ ಬಲೆಯಿಂದ ಹೊರಬರಲಾರದೆ ಒದ್ದಾಡುತ್ತಿದೆ. ಅಕ್ಕಮಹಾದೇವಿ ಹೇಳುವಂತೆ ನಮ್ಮ ಪರಿಸ್ಥಿತಿ "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ, ತನ್ನ ನೂಲು ತನ್ನನ್ನೇ ಸುತ್ತಿ, ಸುತ್ತಿ ಸಾವಂತೆ" ಆಗಿದೆ. ಇದರಲ್ಲೊಂದು ವಿಶೇಷ ಅಂಶವನ್ನು ಗಮನಿಸಬಹುದಾಗಿದೆ. ವಾಸ್ತವವಾಗಿ ಜೇಡವು ತನ್ನ ಎಂಜಲಿನಿಂದ ಬಲೆ ನೇಯುತ್ತದೆ. ಆ ಬಲೆಯಲ್ಲಿ ಅದರ ಆಹಾರವಾದ ಕ್ರಿಮಿಕೀಟಗಳು ಸುಲಭವಾಗಿ ಸಿಕ್ಕಿಕೊಳ್ಳುತ್ತವೆ. ಆದರೆ ಅದಕ್ಕೆ ತಾನೇ ನೇಯ್ದ ಬಲೆಯಲ್ಲಿ ತಾನೇ ಸಿಲುಕಿ ಸಾಯಬಹುದು ಎಂಬ ಅರಿವಿರುವುದಿಲ್ಲ. ತನ್ನ ದೇಹದಲ್ಲಿರುವ ಸಾಮರ್ಥ್ಯವೆಲ್ಲ ಮುಗಿಯುವವರೆಗೆ ಬಲೆ ನೇಯುವ ಜೇಡನಿಗೆ ಅದು ಮುಗಿದ ಮೇಲೆ ತನ್ನ ಸಾವು ಶತಸ್ಸಿದ್ಧ ಎಂದು ಗೊತ್ತಾದರೂ ಏನೂ ಮಾಡಲಾಗದೆ, ತನ್ನ ಬಲೆಯಲ್ಲಿ ಸಿಲುಕಿಕೊಳ್ಳುವುದು ಅದರ ಕರ್ಮ. ನಾವೂ ಹಾಗೆಯೇ, ನಮ್ಮ ಪ್ರಾಕೃತಿಕ ಜಾತಿ, ಮತ, ಪಂಥಗಳ ಜೇಡರಬಲೆಯಲ್ಲಿ ಸಿಲುಕಿ ಅದನ್ನೇ ನೆನೆನೆನೆದು ಸಾವಿನರಮನೆಯತ್ತ ತೆರಳುತಿದ್ದೇವೆ.

**ಡಾ. ಎಂ.ಎನ್. ನಂದೀಶ್ ಹಂಚೆ**

ಗುರುವಾಗಿ ಬಂದು ತನುವ ಕೊರೆದಡೂ ಕೇಳೆ
ಲಿಂಗವಾಗಿ ಬಂದು ಮನದಲ್ಲಿ ಕುಳ್ಳಿರ್ದು ನಿಜಾಂಗವ ತೋರಿದಡೂ ಕೇಳೆ
ಜಂಗಮವಾಗಿ ಬಂದು ಬಯಲ ಬೆಳಗಿನಲ್ಲಿ ಒಳಗಾಗೆಂದಡೂ ಒಲ್ಲೆ
ಅದೆಂತೆಂದಡೆ ;
ಕುಟಿಲದಲ್ಲಿ ಬಂದು ವ್ರತವ ಕೆಡಿಸಿಹೆನೆಂದಡೆ
ಕುಟಿಲದ ದೇವರುಂಟೆ
ವ್ರತ ಮೊದಲು ಘಟ ಕಡೆಯಾಗಿ ಘಟಿಸುವೆನಲ್ಲದೆ
ಮೂರು ಕಿಸುಕುಳಕಾಗಿ ಘಟವ ಹೊರೆದಡೆ ಆಚಾರವೆ ಪ್ರಾಣವಾದ
ರಾಮೇಶ್ವರಲಿಂಗಕ್ಕೆ ದೂರ

**ಅಕ್ಕಮ್ಮ**

ಪ್ರವಚನಸಾರ

# ದ್ವಾ ಸುಪರ್ಣಾ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ನೂರಾರು ಜನ ಸಂತರು. ಶರಣರು ದೇವನನ್ನು ವರ್ಣಿಸಿದ್ದಾರೆ; ದೇವನನ್ನು ನೇರವಾಗಿ ವರ್ಣಿಸುವ ಬದಲು ಉಪಮೆ, ದೃಷ್ಟಾಂತಗಳಿಂದ ಕೇಳುಗನ ಮನಸ್ಸಿನ ಮೇಲೆ ಬಿಂಬಿಸುವಂತೆ ಉಪದೇಶಿಸಿದ್ದಾರೆ. ಹೇಳುವ ಮಾತು ಕೇಳುಗನ ಮನಸ್ಸಿನ ಮೇಲೆ ಸ್ಪಷ್ಟವಾಗಿ ಮೂಡಬೇಕಾದರೆ, ಈ ಅಲಂಕರಣದ ಭಾಷೆ ಅವಶ್ಯ! ಉದಾಹರಣೆಗಾಗಿ ಶಂಕರಾಚಾರ್ಯರಿಗೆ ಜಗತ್ತು ಮಿಥ್ಯೆಯಾಗಿದೆ ಎಂದು ಕಂಡುಬಂತು. ಆದರೆ ಅದನ್ನು ತಿಳಿಸುವುದು ಹೇಗೆ? ಒಂದು ವಸ್ತು ಸತ್ಯವಾದರೂ ಆಗಿರಬೇಕು. ಅಸತ್ಯವಾದರೂ ಆಗಿರಬೇಕು. ಎರಡೂ ಅಲ್ಲ ಎನ್ನುವುದನ್ನು ತಿಳಿಸುವುದು ಹೇಗೆ? ಅಂಥ ಕಲ್ಪನೆ ಹೇಗೆ ಮಾಡುವುದು? ಅದಕ್ಕಾಗಿ ಅವರು ದೃಷ್ಟಾಂತ ರೂಪಕ ಬಳಸಿದರು. ಅದೇ ಹಗ್ಗ-ಹಾವು. ಹಗ್ಗದಲ್ಲಿ ಹಾವಿನ ಭಾಸ. ಭ್ರಾಂತಿಯ ಹಾವಿನ ಅಸ್ತಿತ್ವ ಎಂಥದು? ಅದು ಹಗ್ಗದಂತೆ ಸತ್ಯವಲ್ಲ. ಎಂದೂ ಇಲ್ಲದ ವಸ್ತುವಿನಂತೆ ಅಸತ್ಯವಲ್ಲ. ಅಂದರೆ ಹಾವು ಸದಸತ್-ವಿಲಕ್ಷಣ. ಹಾಗೆ ಜಗತ್ತಿನ ಅಸ್ತಿತ್ವವೂ ಸಹ. ಈ ದೃಷ್ಟಾಂತವು ಸೂಕ್ಷ್ಮ ಕಲ್ಪನೆಯನ್ನು ಸ್ಫುಟಗೊಳಿಸುತ್ತದೆ.

ಅಸತ್ಯ ಎಂದರೆ ಎಂದೂ ಇಲ್ಲದಿರುವುದು. ಉದಾ : ಗೋಲಾದ ಚೌಕ, ಚೌಕಾದ ತ್ರಿಕೋನ ಇತ್ಯಾದಿ. ಗೋಲಾದ ಚೌಕ ಅನ್ನುವುದು ಶಬ್ದ ಮಾತ್ರ, ವಸ್ತು ಶೂನ್ಯ. ಕೇವಲ ವಿಕಲ್ಪ. ಶಾಬ್ದಿಕ ಅರ್ಥ ಇದೆ, ಆದರೆ ವಸ್ತು ಇಲ್ಲ. ಶಬ್ದಕ್ಕೆ ಅರ್ಥ ಇದೆ. ಭಾವಕ್ಕೆ ನಮಗೆ ಬರುವುದಿಲ್ಲ. ವಸ್ತು ಅಲ್ಲಿ ಇಲ್ಲ. ವಸ್ತು ಇರದೆ ಕೇವಲ ಶಾಬ್ದಿಕವಾಗಿ ಒಂದು ವಸ್ತು ಇದ್ದರೆ ಅದು ಅಸತ್ಯ. ಹಾವು ಹಾಗೆ ಅಸತ್ಯವಲ್ಲ, ಅದು ಕಾಣುತ್ತದೆ. ಆದರೆ ಸ್ಫುಟವಾದ ದೃಶ್ಯವಸ್ತುಗಳಂತೆ ಸತ್ಯವೂ ಅಲ್ಲ.

ಈ ಜಗತ್ತು ಸತ್ಯವೂ ಅಲ್ಲ, ಅಸತ್ಯವೂ ಅಲ್ಲ. ಈ ಜಗತ್ತು ಸಂಪೂರ್ಣವಾಗಿ ಇಲ್ಲ ಎಂದಲ್ಲ, ಅಥವಾ ಶಾಶ್ವತವಾಗಿ ಇದೆ ಎಂತಲೂ ಅಲ್ಲ. ಸತ್=ಶಾಶ್ವತ ವಸ್ತು ಅಲ್ಲದ್ದರಿಂದ ಸದ್‌ವಿಲಕ್ಷಣ. ಇಲ್ಲದ ವಸ್ತುವಿನಂತೆ ಇಲ್ಲವಾದುದಲ್ಲವಾದುದರಿಂದ ಅಸದ್ ವಿಲಕ್ಷಣ. ಹಾಗೆ ಸತ್ಯಕ್ಕೆ ಅಸತ್ಯಕ್ಕೆ ವಿಲಕ್ಷಣವಾದ ಅಸ್ತಿತ್ವವನ್ನು ಶಂಕರರು ಜಗತ್ತಿಗೆ ಕಲ್ಪಿಸಿದರು. ಈ ಅಸ್ತಿತ್ವವನ್ನು ನಮ್ಮ ಗಮನಕ್ಕೆ ತರುವುದಕ್ಕಾಗಿ ಯೋಗ್ಯ ಹಾಗೂ ಸಮರ್ಥ ದೃಷ್ಟಾಂತ

ಬಳಸಿದರು. ಈ ಜಗತ್ತು ಬರೀ ತೋರಿಕೆಯಲ್ಲಿದೆ, ನೈಜವಾಗಿಲ್ಲ ಎಂಬ ಮಾತನ್ನು ಮನಮುಟ್ಟುವ ಹಾಗೆ ಹೇಳಿದರು.

ಪರದೇಶದಲ್ಲೂ ಇಂಥ ಚಿಂತನೆಯಿದೆ. ವಸ್ತುವಿನಲ್ಲಿ ಗುಣಗಳಿವೆ. ಗುಣಗಳಿಗೆ ಆಧಾರವಾಗಿ ಒಂದು ಮೂಲ ಸತ್ ಇದೆ. ಅದು ಸಬ್‌ಸ್ಟೆನ್ಸ್ ಗುಣ ಸಮುದಾಯದ ತೋರಿಕೆ ಅಪಿಯರೆನ್ಸ್. ಇರುವ ಅಸ್ತಿತ್ವ ಕಾಣದು, ಕಾಣುವ ತೋರಿಕೆ ಇರದು. ಏನು ಇದೆ ಅದು ಕಾಣಿಸುವುದಿಲ್ಲ. ಏನು ಇಲ್ಲ ಅದು ಕಾಣಿಸುತ್ತದೆ. ಹೂವಿನ ಸಬ್‌ಸ್ಟೆನ್ಸ್ ಇದೆ; ಕಾಣಿಸದು. ಗುಣ ಸಮುದಾಯ ಅಸತ್! ಸ್ವ ಅಸ್ತಿತ್ವ ರಹಿತ. ಆದರೆ ಅದು ಕಾಣಿಸುವುದು. ವಿಜ್ಞಾನಿಯೂ ಇಂಥದೇ ಮಾತನ್ನು ಹೇಳುತ್ತಾನೆ. ಟೇಬಲ್ ಎನ್ನುವುದು ಪ್ರಚಂಡ ಸಂಖ್ಯೆಯ ಅಣುಸಮೂಹ ಅಷ್ಟೇ. ನಮಗೆ ತೋರುವ ಟೇಬಲ್ ಕೇವಲ ತೋರಿಕೆ ಅಷ್ಟೆ. ಅಂದರೆ ಟೇಬಲ್ ಇದೆ ಎಂದಲ್ಲ. ಇಲ್ಲವೆಂತಲೂ ಅಲ್ಲ. ಇನ್ನೊಂದು ಉದಾಹರಣೆ ನೋಡಿ. ನೀರಿನಲ್ಲಿ H ಮತ್ತು O ಮೂಲ ಘಟಕ. ಅವು ಅಣುಗಳು. ಅಣುಗಳು ಶಕ್ತಿಯ ಗುಳ್ಳೆಗಳು. ಅವು ಇವೆ. ಆದರೆ ಅವುಗಳ ಸಮೂಹದಲ್ಲಿ ತೋರಿದ 'ನೀರು' ಎನ್ನುವುದು ನಮ್ಮ ಅನುಭವಕ್ಕೆ ಬರುವ ಪ್ರಿಯವಸ್ತು. ಆದರೆ ಅದರಲ್ಲಿರುವುದೆಲ್ಲ ಬರೀ ಶಕ್ತಿ!! ನೀರು ಇದೆ ಎಂದರೆ ಇದೆ; ಇಲ್ಲವೆಂದರೆ ಇಲ್ಲ. ಎಲ್ಲವೂ ಹೀಗೆಯೇ. ಆದ್ದರಿಂದ ಶಂಕರರು ಜಗತ್ತನ್ನು 'ಮಾಯಿಕ' ಎಂದು ವರ್ಣಿಸಿದರು ದೃಷ್ಟಾಂತದ ಮೂಲಕ!

ಬಸವಣ್ಣನವರು ಹೇಳುತ್ತಾರೆ.

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೆ ಚಿಂತೆ

ಚಕೋರ ಪಕ್ಷಿ ಹೇಗೆ ಚಂದ್ರಮನ ಚಿಂತಿಸುತ್ತದೆಯೋ ಅಂಬುಜ ಭಾನುವ ಚಿಂತಿಸುವುದೋ ಹಾಗೆ ಬಸವಣ್ಣನವರು ದೇವನ ನೆನೆಸುತ್ತಾರೆ. ದೃಷ್ಟಾಂತಗಳು ಹೇಳಬೇಕಾದ್ದನ್ನು ಸ್ಪಷ್ಟಪಡಿಸುತ್ತವೆ.

ಬಂಧನಕ್ಕೆ ಬಂದ ಗಿಳಿ ತನ್ನ ಬಂಧುಗಳ ನೆನೆಸುತ್ತದೆ. ಸುಂದರವಾದ ಪಂಜರ, ಅದರೊಳಗೆ ಗಿಳಿ. ಅದಕ್ಕೆ ಹಣ್ಣು ಹಂಪಲ, ನೀರು; ಎಲ್ಲ ಕೊಡುತ್ತೇವೆ, ಪ್ರೀತಿಸುತ್ತೇವೆ; ಆದರೆ ಅದನ್ನೆಲ್ಲಾ ಅನುಭವಿಸಿಯೂ ತನ್ನ ಹೃದಯದಲ್ಲಿ ಗಿಳಿ ಅರಣ್ಯವನ್ನು ನೆನೆಸುತ್ತದೆ. ಮಾವಿನ ಮರದಲ್ಲಿ ಕುಳಿತು ತನ್ನ ಬಂಧುಬಾಂಧವರನ್ನು ನೆನೆಸುತ್ತದೆ. ಹಾಗೆ ಬಸವಣ್ಣನವರು ಎಲ್ಲದರ 'ಮಧ್ಯ', ಪ್ರೇಮಪಂಜರದ ಮಧ್ಯ ಕೂಡಲಸಂಗಮನನ್ನು ನೆನೆಸುತ್ತಾ ಇದ್ದರು. ಒಂದು ವೇಳೆ ದೃಷ್ಟಾಂತ ಬಳಸದಿದ್ದರೆ ಬಸವಣ್ಣನವರ ಭಾವ ತೀವ್ರತೆ ನಮಗೆ ಗೊತ್ತಾಗುತ್ತಿರಲಿಲ್ಲ. ಆದ್ದರಿಂದ ಅಧ್ಯಾತ್ಮಸಾಹಿತ್ಯದೊಳಗೆ ದೃಷ್ಟಾಂತ ಬಳಸುವ ಪದ್ಧತಿ

ಬಹಳ ಬಳಕೆಗೆ ಬಂತು. ಬಹಳ ಪರಿಣಾಮಕಾರಿಯಾಗಿ ಬಳಸಿದರು. ಅದು ಅವರ ಅತ್ಯಂತ ಸೂಕ್ಷ್ಮವಾದ ಆಲೋಚನೆಗಳನ್ನು, ಭಾವನೆಗಳನ್ನು ಸ್ಪಷ್ಟವಾಗಿ ಚಿತ್ರಿಸಿತು.

ಭಗವಂತ ಅಂದರೇನು? ಜೀವ ಅಂದರೇನು? ಇದನ್ನು ಚಿತ್ರಿಸುವುದಕ್ಕಾಗಿ ಉಪನಿಷತ್ತು ಒಂದು ಸುಂದರ ದೃಷ್ಟಾಂತ ಬಳಸಿದೆ.

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ
ತಯೋರೇಕಃ ಪಿಪ್ಪಲಂ ಸ್ವಾದ್ವ-
ತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ

(ಮುಂ. II, 1, 3-4)

ನಾಲ್ಕು ಸಾಲುಗಳಲ್ಲಿ ಈ ಜಗತ್ತು, ಜೀವ, ಈಶ ಹಾಗೂ ಅವರ ಸ್ಥಿತಿ ಅದ್ಭುತವಾಗಿ ಚಿತ್ರಿತವಾಗಿದೆ. ಗ್ರಂಥ ಬರೆದು ತಿಳಿಸಿದರೂ ಸ್ಪಷ್ಟವಾಗದ ಕಲ್ಪನೆಗಳನ್ನು ಸುಲಭ ದೃಷ್ಟಾಂತಗಳ ಮೂಲಕ ರೇಖಿಸಿದ್ದಾರೆ!

ಒಂದು ಗಿಡ, ಹಣ್ಣಿನ ಗಿಡ. ಅದು ವಿಶಾಲವಾಗಿ ಹರವಿಕೊಂಡಿದೆ. ಶಾಖೆಶಾಖೆಗಳು. ಅಲ್ಲಿ ಸಾವಿರ ಸಾವಿರ ಹಣ್ಣುಗಳು. ಇಂತಹ ವೃಕ್ಷದಲ್ಲಿ ಒಂದು ಪಕ್ಷಿ ಕುಳಿತಿದೆ. ಆ ಪಕ್ಷಿ ಕುಳಿತ ಶಾಖೆಯ ಕೆಳಗಿನ ಶಾಖೆಯಲ್ಲಿ ಇನ್ನೊಂದು ಪಕ್ಷಿ ಕುಳಿತಿದೆ. ಈ ಪಕ್ಷಿ ಹಣ್ಣು ತಿನ್ನುತ್ತಿದೆ. ಮೇಲಿನ ಪಕ್ಷಿ ಏನನ್ನೂ ತಿನ್ನದೆ ಬರೀ ಪ್ರಕಾಶ ಚೆಲ್ಲುತ್ತಿದೆ. ಆ ಪಕ್ಷಿಯ ಪ್ರಕಾಶದೊಳಗೆ ಗಿಡ ಕಾಣಿಸುತ್ತದೆ. ಅಲ್ಲಿರುವ ಹಣ್ಣುಗಳು ಕಾಣುತ್ತವೆ. ಕೆಳಗಿರುವ ಪಕ್ಷಿ ಕಾಣುತ್ತದೆ. ಆ ಪಕ್ಷಿಯ ಬೆಳಕಿನೊಳಗೆ ಈ ಕೆಳಗಿನ ಪಕ್ಷಿ ಹಣ್ಣುಗಳನ್ನು ತಿನ್ನುವುದರಲ್ಲಿ ಮಗ್ನವಾಗಿದೆ. ಈ ಪಕ್ಷಿಗೆ, ಆ ಪಕ್ಷಿಗೆ ಅತ್ಯಂತ ಮೈತ್ರಿ, ಬಿಟ್ಟಿರದಷ್ಟು ಗಾಢ ಮೈತ್ರಿ. ಎರಡೂ ಕೂಡಿಯೇ ಇರುತ್ತವೆ. ಆದರೆ ಸ್ವಭಾವ ಭಿನ್ನ. ಮೇಲಿನದು ಪ್ರಕಾಶ ಮಾಡುತ್ತದೆ. ಕೆಳಗಿನದು ತಿನ್ನುವಲ್ಲಿ ಮಗ್ನ. ಒಂದೇ ವೃಕ್ಷದಲ್ಲಿ ಅವು ಆಶ್ರಯ ಪಡೆದಿವೆ. ಅಲ್ಲಿ ಇರುವ ಹಣ್ಣುಗಳು ಸುರುಚಿ. ಆ ಪಕ್ಷಿ ತನ್ನನ್ನೇ ಮರೆತು ಹಣ್ಣನ್ನು ತಿನ್ನುವಲ್ಲಿ ಮೈಮರೆತು ಇರಬೇಕಾದರೆ ಆ ಹಣ್ಣಿನ ರಸವೆಷ್ಟು ಸಿಹಿ ಇರಬೇಡ! ಹಣ್ಣನ್ನು ತಿನ್ನುವುದರಲ್ಲಿ ಪಕ್ಷಿ ಮೈಮರೆತುಬಿಟ್ಟಿದೆ!

ಮೇಲಿನ ಪಕ್ಷಿಗೆ ಹಣ್ಣನ್ನು ತಿನ್ನುತ್ತಿರುವ ಪಕ್ಷಿ ಕಾಣಿಸುತ್ತದೆ. ಆ ಹಣ್ಣಿನ ರಸವನ್ನು ಹೀರಿ ಸಂತೋಷಪಡುವ ಪಕ್ಷಿ ಕಾಣಿಸುತ್ತದೆ. ಆದರೆ ತಾನು ಮಾತ್ರ ಅದರಂತೆ ಆ ಹಣ್ಣಿಗೆ ಮೋಹಗೊಂಡಿಲ್ಲ. ಇದು ಆ ಪಕ್ಷಿಯ ವಿಶೇಷತೆ. ಸಾಮಾನ್ಯವಾಗಿ ಭೋಗ ದೃಶ್ಯ ಕಂಡು ಮನ ಬಯಸುತ್ತದೆ.

ಒಬ್ಬ ಮುದುಕ ದಾರಿಯಲ್ಲಿ ಹೊರಟಿದ್ದಾನೆ. ಭಿತ್ತಿಯ ಶೃಂಗಾರ ರಸಚಿತ್ರ ನೋಡುತ್ತಾನೆ. ಆ ಚಿತ್ರ ನೋಡಿದ ಮರುಕ್ಷಣವೇ ಮುದುಕನಿಗೆ ಹಿಂದಿನ ಕಥೆ

ನೆನಪಾಗುತ್ತದೆ. ತಾನು, ತನ್ನ ಹೆಂಡತಿ, ಮೆರವಣಿಗೆ, ಎಲ್ಲಾ ನೋಡಿ ಕಣ್ಣು ತುಂಬಿ ಮೈಮರೆಯುತ್ತಾನೆ ಮುದುಕ. ಪ್ರತ್ಯಕ್ಷ ಇಲ್ಲ. ಒಂದು ದೃಶ್ಯ ನೋಡಿ ಮೈ ಮರೆತ. ದೃಶ್ಯದ ಪರಿಣಾಮ ಅಷ್ಟು ತೀವ್ರ ಮನಸ್ಸಿನ ಮೇಲೆ! ನೋಡಿದ, ಬರೀ ನೋಟದಿಂದಲೇ, ಇಲ್ಲಿ ವಯಸ್ಸಿನಲ್ಲಿ ಮನಸ್ಸು ಇಷ್ಟು ಮುಗ್ಧವಾಗುತ್ತದೆ ಅಂದ ಬಳಿಕ ಯುವಕನ ಮನಸ್ಸು ಎಷ್ಟು ಮೋಹಗೊಳ್ಳಬೇಡ? ಆದರೆ ಇಲ್ಲೊಂದೆರಡು ಪಕ್ಷಿಗಳು. ಒಂದು ಪಕ್ಷಿ ಆನಂದವಾಗಿ ತಿನ್ನುತ್ತದೆ. ಮಧುರ ಫಲ. ಒಳಗಿರುವ ತಿರುಳನ್ನು ತಿಂದು ಸಂತೋಷಪಡುತ್ತದೆ. ಇನ್ನೊಂದು ಪಕ್ಷಿ ಅದರ ಮೇಲೆ ಪ್ರಕಾಶ ಚೆಲ್ಲಿ ನೋಡುತ್ತಾ ಇದ್ದರೂ ಆ ಪಕ್ಷಿ ತಿನ್ನುತ್ತಿರುವ ಹಣ್ಣಿನ ಮೋಹ ಇಲ್ಲ ಅದಕ್ಕೆ. ಅರ್ಥಗರ್ಭಿತ ದೃಷ್ಟಾಂತ!

ಮೇಲಿರುವ ಪಕ್ಷಿ ಎಷ್ಟು ಪ್ರಕಾಶಗೊಳಿಸಿ ಎಚ್ಚರಿಸಿದರೂ ಆ ಕಡೆ ಲಕ್ಷ್ಯ ಕೊಡದಷ್ಟು ಮೈಮರೆತುಬಿಟ್ಟಿದೆ, ಹಣ್ಣು ತಿನ್ನುವುದರಲ್ಲಿ ಆ ಕೆಳಗಿರುವ ಪಕ್ಷಿ. ಹಾಗೆ ನಮ್ಮ ಸ್ಥಿತಿ. ೬೦ ವರ್ಷವಾದರೂ ಎಚ್ಚರ ಆಗಲಾರದಷ್ಟು ಮಗ್ನತೆ ಸಂಸಾರದಲ್ಲಿ. ಜೀವಪಕ್ಷಿ ಹಣ್ಣು ತಿನ್ನುವುದರಲ್ಲಿ ಮಗ್ನ! ಈ ಸಂಗತಿಯನ್ನು ಚಿಂತಿಸಬೇಕು. ಚಿಂತನ ಮಾಡಿದರೆ ನಮ್ಮ ಜೀವನ ಹೇಗಿದೆ, ದಿವ್ಯ ಜೀವನ ಹೇಗಿರುತ್ತದೆ ಎನ್ನುವುದರ ಕಲ್ಪನೆ ಬರುತ್ತದೆ. ನಾವು ಮೋಹಾವೃತರು, ಉಪಭೋಗಶೀಲರು, ಮೋಹದ ದಾಸರು! ಹೀಗಾಗಿ ಅನ್ಯ ಚಿಂತನೆಗೆ ಅವಕಾಶವಿಲ್ಲ.

ಭೋಗಮೋಹಿಯಾದ ಈ ಪಕ್ಷಿ ವೀತಶೋಕವಾಗಬೇಕಾದರೆ ಏನು ಮಾಡಬೇಕು? ಮುಂದಿನ ಎರಡು ಸಾಲುಗಳಲ್ಲಿ ಹೇಳಿದ್ದಾರೆ. ಇಂತಹ ಪಕ್ಷಿ ಎಚ್ಚರವಾಗಬೇಕು. ಮೋಹದಿಂದ ಪಾರಾಗಬೇಕು. ಮೋಹದ ಶೋಕದಿಂದ ಮುಕ್ತವಾಗಬೇಕು! ವೀತಶೋಕಿಯಾಗಬೇಕು! ಹಾಗಾಗಬೇಕಾದರೆ ಅದು ತನ್ನ ಮೇಲಿನ ಪಕ್ಷಿಯನ್ನು ನೋಡಬೇಕು. ಅದು ಈಶ. ತನ್ನಂತೆ ಅನೀಶವಲ್ಲ ಎಂಬುದನ್ನು ಗಮನಿಸಬೇಕು. ಹಣ್ಣಿನ ಆಕಾರ, ರುಚಿ, ತನ್ನನ್ನು ಹುಚ್ಚು ಮಾಡಿದೆ; ಆದರೆ ಮೇಲಿನ ಪಕ್ಷಿ ಹಣ್ಣಿನ ಪ್ರಭಾವಕ್ಕೆ ಒಳಗಾಗಿಲ್ಲ. ಹಣ್ಣಿನ ಪ್ರಭಾವದಿಂದ ಹೊರಗೆ ಇರುವುದೇ ಈಶ. ಹಣ್ಣಿನ ಪ್ರಭಾವಕ್ಕೆ ಸಿಕ್ಕಿಬಿದ್ದಿರುವುದೇ ಅನೀಶ. ಅದು ಶೋಕರಹಿತ. ತಾನು ಶೋಕಶೀಲ. ಇದನ್ನು ಚಿಂತಿಸಬೇಕು.

ಕೆಳಗಿನ ಪಕ್ಷಿ ಮೇಲಿನ ಪಕ್ಷಿಯನ್ನು ನೋಡಿ ಅದರ ಮಹಿಮೆಯನ್ನು ಗುರುತಿಸಬೇಕು. ಮಹಿಮೆ ಅಂದರೆ ಸದಾ ಪ್ರಕಾಶ ಮಾಡುತ್ತಿರುವುದು. ಎಲ್ಲಾ ಉಪಭೋಗ ವಸ್ತುಗಳು ಇದ್ದಾಗ ಆ ವಸ್ತುಗಳತ್ತ ಲಕ್ಷ್ಯ ಕೊಡದೆ ಇರುವುದು ಮಹಿಮೆ. ಈ ಕೋಣೆಯೊಳಗೆ ಯಾರಿಲ್ಲ ಎಂದು ತಿಳಿದುಕೊಳ್ಳಿ. ಹತ್ತು ಪೈಸೆ ಬಿದ್ದಿದೆ. ಅದನ್ನು ಎತ್ತಿಕೊಳ್ಳಬೇಕು ಎನ್ನಿಸುತ್ತದೆ. ಇದು ಮೋಹಮಹಿಮೆ. ಇದು ಇಲ್ಲದವರು ನಿಜವಾದ ಮಹಿಮಾನ್ವಿತರು. ಸಮಸ್ತ ರಾಜ್ಯ ಕೊಟ್ಟರೂ ಅತ್ತ ಲಕ್ಷ್ಯ ವಹಿಸದ ಸ್ಥಿತಿಯು 'ಮಹಿಮೆ.' ಅದು ವಿರಾಗಮಹಿಮೆ!

ಹಾಗೆ ಮೇಲಿನ ಪಕ್ಷಿಯ ಮಹಿಮೆ! ಅಂದರೆ ಕೇವಲ ನೋಡುತ್ತದೆ, ಆಸೆ ಪಡುವುದಿಲ್ಲ. ಇಂತಹ ಅದರ ಮಹಿಮೆಯನ್ನು ಕೆಳಗಿನ ಪಕ್ಷಿ ಗುರುತಿಸಿದರೆ ಅದು ವೀತಶೋಕವಾಗುತ್ತದೆ! ಅದರ ಮೋಹ ಮರೆಯಾಗುತ್ತದೆ. ಇದು ಸ್ವಾತಂತ್ರ್ಯ! ಮೋಹಮುಕ್ತಿ! ಆ ಮೇಲಿನ ಪಕ್ಷಿ ಹಾರಿ ಹೋಗುತ್ತದೆ. ಕೆಳಗಿನ ಪಕ್ಷಿ ಹಾರಿ ಹೋಗುತ್ತದೆ. ಎರಡೂ ಬಯಲಾಗುತ್ತವೆ. ಏನು ಉಳಿಯುತ್ತದೆ ಅದು ಅನಂತವಾದ ಆಕಾಶ!

ದೃಷ್ಟಾಂತವಿದು. ಇಲ್ಲಿ ಗಿಡ ಯಾವುದು? ಎರಡು ಪಕ್ಷಿ ಯಾವುವು? ಹಣ್ಣು ಏನು? ಆ ಬೆಳಕು ಯಾವುದು? ಬಂಧನ ಏನು? ಯಾವಾಗ ಮುಕ್ತಿ? ಎಲ್ಲಾ ಆ ದೃಷ್ಟಾಂತದ ಹಿನ್ನೆಲೆಯೊಳಗೆ ಚಿತ್ರಿಸಿಕೊಳ್ಳುವುದು ಚಿಂತನ.

ದೃಷ್ಟಾಂತ ನೋಡಿ. ಒಂದು ಗಿಡ ಹಬ್ಬಿಕೊಂಡಿದೆ. ವಿಶಾಲವಾದ ವೃಕ್ಷ. ಅಲ್ಲಿ ಪಕ್ಷಿ ಕುಳಿತಿದೆ. ಅದು ಜೀವ. ಆ ವೃಕ್ಷವೇ ದೇಹ, ಜಗತ್ತು. ಜಗತ್ತಿನಲ್ಲಿ ಜೀವಪಕ್ಷಿ ಕುಳಿತಿದೆ. ದೇಹದಲ್ಲಿ ಜೀವಪಕ್ಷಿ ಕುಳಿತಿದೆ. ಈ ಸಮಸ್ತ ವಿಶ್ವವೆಂಬ ಭವ್ಯವೃಕ್ಷದ ಮೇಲೆ ಪಕ್ಷಿ ಕುಳಿತಿದೆ. ವಿಶಾಲವಾದ ಮಹಾವಿಶ್ವದೊಳಗೆ ಸಣ್ಣ ಟೊಂಗೆ, ಅದು ದೇಹ. ಆ ದೇಹದ ಮೇಲೆ ಒಂದು ಪಕ್ಷಿ ಕುಳಿತಿದೆ.

ಭೂಮಿ, ನೀರು, ಅಗ್ನಿ, ವಾಯು, ಆಕಾಶ ಇದು ವಿಶಾಲವಾದ ವೃಕ್ಷ! ವೃಕ್ಷ ಹತ್ತು ದಿಕ್ಕಿನಲ್ಲಿ ಹರವಿದೆ. ಈ ವೃಕ್ಷದೊಳಗೆ ಶಾಖೆಗಳು, ಅಸಂಖ್ಯ ಶಾಖೆಗಳು! ಅಸಂಖ್ಯ ದೇಹಗಳು! ಆ ಪ್ರತಿ ಶಾಖೆಯೊಳಗೆ ಹಣ್ಣುಗಳು. ಶಬ್ದ, ಸ್ಪರ್ಶ, ರೂಪ, ರಸ, ಗಂಧಮಯ ಹಣ್ಣು. ಈ ಹಣ್ಣುಗಳು ಮೆತ್ತಿಬಿಟ್ಟಿವೆ. ಕಣ್ಣು ತೆರೆದರೆ ಸಾಕು ರೂಪು ಕಾಣಿಸುತ್ತದೆ. ಕಿವಿ ಕೊಟ್ಟರೆ ಧ್ವನಿ ಕೇಳಿಸುತ್ತದೆ. ಮುಟ್ಟಿದರೆ ಮಧುರ ಸ್ಪರ್ಶ. ಎಷ್ಟು ಬಗೆಯ ರಸಗಳು! ಎಷ್ಟು ಬಗೆಯ ವಾಸನೆ! ಇದರಿಂದ ಜಗತ್ತು ರಸಪೂರ್ಣ. ಒಂದು ವೇಳೆ ಶಬ್ದ, ರೂಪ, ರಸ ತೆಗೆದುಹಾಕಿದರೆ ಈ ವೃಕ್ಷ ಅಪ್ರಿಯ! ಅ-ರಸ, ನೀರಸ! ಈ ಐದು ಹಣ್ಣುಗಳು ರಸಪೂರ್ಣ, ಆಕರ್ಷಕ.

ರಾವಣ ಸಾಮಾನ್ಯ ಮನುಷ್ಯ ಅಲ್ಲ, ವಿದ್ಯಾವಂತ, ಜ್ಞಾನಿ, ಭಗವಂತನನ್ನೆ ಒಲಿಸಬಲ್ಲ ತಪಸ್ವಿ. ಇಂತಹ ಈತನನ್ನು ಮರುಳುಗೊಳಿಸಿತು ರೂಪ! ಹುಚ್ಚು ಹಿಡಿಸಿತು. ಇನ್ನು ಸಾಮಾನ್ಯ ಮನಸ್ಸಿನವರಾದ ನಮ್ಮನ್ನು ಅದೆಷ್ಟು ಹುಚ್ಚು ಹಿಡಿಸಬಾರದು?

ಜಗತ್ತು ಅನ್ನುವ ವೃಕ್ಷದೊಳಗೆ ಇಂತಹ ಐದು ಹಣ್ಣುಗಳು. ಈ ಹಣ್ಣಿನ ಟೊಂಗೆಯ ಮೇಲೆ ಜೀವ ಎನ್ನುವ ಪಕ್ಷಿ ಕುಳಿತಿದೆ. ಕುಳಿತು ತಿನ್ನುತ್ತಿದೆ ಹಣ್ಣನ್ನು ಕುಳಿತ ದಿನದಿಂದಲೇ ಹಣ್ಣು ತಿನ್ನಲು ಆರಂಭಿಸಿದೆ. ಎಂದು ಈ ಮನುಷ್ಯ ಜಗತ್ತಿಗೆ ಬಂದ, ಅಂದೇ ತಿನ್ನಲು ತೊಡಗಿದ. ತಿನ್ನುವಲ್ಲಿ ಮಗ್ನನಾಗಿದ್ದಾನೆ. ಎಷ್ಟು ಮಗ್ನನಾಗಿದ್ದಾನೆಂದರೆ ಮೇಲಿರುವ ಪಕ್ಷಿ

ಕಾಣಿಸುತ್ತಿಲ್ಲ! ತಾನು ಯಾರು ಗೊತ್ತಾಗುತ್ತಿಲ್ಲ, 'ಪುರುಷಃ ನಿಮಗ್ನಃ' ಅವನನ್ನು ಎಚ್ಚರಿಸುವುದೆ ಕಷ್ಟ; ಅಷ್ಟು ಈ ಸಂಸಾರದೊಳಗೆ ಮುಳುಗಿ ಹೋಗಿದ್ದಾನೆ!

ಬುದ್ಧ, ಮಹಾವೀರ, ಶಂಕರಾಚಾರ್ಯ, ಬಸವಣ್ಣ, ಅಲ್ಲಮಪ್ರಭು, ಸಂತರು, ಮಹಾನುಭಾವರು ಬಂದರು. ಎಚ್ಚರಿಸಬೇಕೆಂದು ಪ್ರಯತ್ನಿಸಿದರು. 'ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ನಿಬೋಧತ' ಎಂದರು. 'ಏಳಿ, ಒಂದಿಷ್ಟು ಕಣ್ಣು ಬಿಟ್ಟು ನೋಡಿ, ಶ್ರೇಷ್ಠರ ಬಲ್ಲವರ ಸಮೀಪ ಹೋಗಿ, ಜೀವನ ಉದ್ಧಾರ ಮಾಡಿಕೊಳ್ಳಿ' ಎಂದರು. ಇಷ್ಟು ಜನ ಬಂದು ಹೋದರೂ ನಾವು ಹಾಗೇ ಮಲಗಿದ್ದೇವೆ. ಅವರ ಮಾತುಗಳನ್ನು ಕಂಠಪಾಠ ಮಾಡಿದ್ದೇವೆ. ಅಸ್ಖಲಿತವಾಗಿ ನುಡಿಯುತ್ತೇವೆ. ಆದರೆ ಅಚ್ಚರಿಯೆಂದರೆ ನಾವು ಎದ್ದೇ ಇಲ್ಲ. ನಮ್ಮ ನುಡಿಯೆಲ್ಲ ನಿದ್ರೆಯಲ್ಲಿ, ಹಾಸಿಗೆಯಲ್ಲಿ!

ಒಬ್ಬ ಗುರು. ಗುರುವಿನ ಹತ್ತಿರ ಶಿಷ್ಯ. ಇಬ್ಬರೂ ಕೂಡಿ ಹೊರಟಿದ್ದರು. ಗುರುವಿಗೆ ನೀರಡಿಕೆ, ಶಿಷ್ಯ ನೀರು ತರಲು ಹೋದ. ಶಿಷ್ಯ ಗುರುವನ್ನು ಒಂದು ಮರದ ಕೆಳಗೆ ನೆರಳಲ್ಲಿ ಕೂರಿಸಿ ತಂಬಿಗೆ ತೆಗೆದುಕೊಂಡು ನೀರು ತರಲು ಹೋದ. ಹೋದ, ಬಹಳ ದೂರ ಹೋದ. ಬಾವಿಯ ಹತ್ತಿರ ಒಬ್ಬ ಹೆಣ್ಣುಮಗಳು. ಸಣ್ಣವಳು. ಆಕೆ ನೀರನ್ನು ಜಗ್ಗುತ್ತಿದ್ದಳು. ಒಳ್ಳೆಯ ನೀರು. ನೀರು ಕುಡಿವ ಬಯಕೆ. ಆಕೆ ಸುರಿದಳು ಬೊಗಸೆಗೆ, ಆ ನೀರಿನಲ್ಲಿ ಆಕೆಯ ಮುಖ! ತಾನು ಗುರುವಿನ ಶಿಷ್ಯ ಎನ್ನುವುದನ್ನು ಮರೆತ. ಗುರುವನ್ನೂ ಮರೆತ. ಆಕೆಯ ಹಿಂದೆ ಹೋದ. ಅವಳ ಮನೆಗೆ ಹೋದ. ಆಕೆಯ ತಂದೆಯನ್ನು ಸಂಧಿಸಿ ಹೇಳಿದ, ತನ್ನ ಮನದ ಇಚ್ಛೆಯನ್ನು! ಶಿಷ್ಯ ಬರುತ್ತಾನೆ, ನೀರು ತರುತ್ತಾನೆ ಎಂದು ಕುಳಿತಿದ್ದಾನೆ ಗುರು. ಶಿಷ್ಯನದು ಸುಂದರ ದೇಹ. ಅವನ ಕಂಡು ಅವನಾಸೆ ತಿಳಿದು ತಂದೆಗೆ ಆನಂದ. ಭಗವಂತನೇ ಕಳುಹಿಸಿಕೊಟ್ಟನು, ಇದು ನಿನ್ನದೇ ಮನೆ. ಇವಳು ನಿನ್ನವಳೇ ಎಂದು ಲಗ್ನ ಮಾಡಿ ಮುಗಿಸಿಬಿಟ್ಟ. ಮಕ್ಕಳಾದವು ಒಂದೆರಡಲ್ಲ! ಇನ್ನೂ ನೆನಪಿಲ್ಲ ಗುರುವಿನತ್ತ ಹೋಗಲು. ಇವನನ್ನು ಎಚ್ಚರಿಸಲು ಸಂತರು ಬಂದು ಹೋದರು. ನೆನಪಾಗದು, ಸಂಸಾರ ಹರಿಯದು. ಗುರು ದಾರಿ ಕಾಯುತ್ತ ಕುಳಿತಿದ್ದಾನೆ. ಬರುತ್ತಾನೆ ಶಿಷ್ಯ ಎಂದು!

ಅಂತಹ ವಿರಕ್ತ ಶಿಷ್ಯನೇ ಸಿಕ್ಕಿಕೊಂಡ! ಇನ್ನು ಆ ವಿಷಯವನ್ನೇ ಹುಡುಕಾಡ ಹೋದವರು? ಆ ಶಿಷ್ಯನ ಹೆಂಡತಿ ಸತ್ತಳು! ಅಷ್ಟು ಸುಂದರ ಹೆಂಡತಿ ಸತ್ತ ಕೂಡಲೇ ವಿರಕ್ತಿ ಬಂತು! ನೆನಪಾಯ್ತು; ಗುರುವನ್ನು ಕೂರಿಸಿ ಬಂದುದು ನೆನಪಾಯ್ತು. ಓಡಿ ಬಂದ; ಗುರು ನಿರೀಕ್ಷೆಯಿಂದ ಅಲ್ಲೇ ಕುಳಿತಿದ್ದ! ಶಿಷ್ಯ ಎಂದಾದರೂ ಬರಲಿ, ಬಂದೇ ಬರುತ್ತಾನೆ ಎಂದು ದಾರಿ ಕಾಯುತ್ತಿದ್ದ ಗುರು. ಅಷ್ಟು ಪ್ರೇಮ ಗುರುವಿನದು!

ಪ್ರಪಂಚದ ಈ ವಿಷಯಗಳನ್ನು ತಿನ್ನುವಾಗ, ಸಂಸಾರ ಮಾಡುವಾಗ, ಮನಸ್ಸು ಇಷ್ಟು ಮರುಳಾಗಿ ಹೋಗುತ್ತದೆ, ಮುಗ್ಧವಾಗಿ ಹೋಗುತ್ತದೆ. ಎಲ್ಲಿ ಭಗವಂತ? ಎಲ್ಲಿ ಸಂತರು?

ನಾವು ಕೆಟ್ಟವರಲ್ಲ, ನಾವು ಒಳ್ಳೆಯವರೇ. ಶಿಷ್ಯ ಒಳ್ಳೆಯವನೇ. ಜಗತ್ತಿನ ಮಾಯಾಪ್ರಭಾವವೇ ಅಷ್ಟು ಇರುವಾಗ "ಜಗವ ಸುತ್ತಿರ್ಪುದು ನಿನ್ನಯ ಮಾಯೆ". ಏನು ಮಾಡಲಾದೀತು?

ವಿಷಯಫಲ ತಿನ್ನುವಾಗ ಶೋಕವುಂಟಾಗುತ್ತದೆ. ಪ್ರಪಂಚ ಮಾಡುವಾಗ ಒಂದಿಷ್ಟು ಕಷ್ಟ ಬರುತ್ತದೆ. ಶೋಕಗೊಳ್ಳುತ್ತಾನೆ ಮನುಷ್ಯ. ಆ ಶೋಕ ನೀಗಿಸಲು ಇದು ಭಗವತ್ ಚಿಂತನ! ವ್ಯಾಕರಣದ ಚಿಂತನೆಯಲ್ಲ. ಇದು ತರ್ಕದ ಚಿಂತನೆಯಲ್ಲ, ಭಾಷಾ ಚಿಂತನೆಯಲ್ಲ. ನಮ್ಮ ಬದುಕಿನತ್ತ ನೋಡಿಕೊಳ್ಳುವ ಕ್ಷಣ ಇದು. ಬದುಕನ್ನು ಸಮೃದ್ಧಗೊಳಿಸುವ ಪದ್ಧತಿ!

ಮೇಲೆ ಕುಳಿತ ಪಕ್ಷಿ ಸಾಕ್ಷೀಪಕ್ಷಿ. ಈ ಜೀವಾತ್ಮನ ದೃಷ್ಟಿಯಿಂದ ಭಾವಕ್ಕೆ ಬಂದ ಭಗವಂತ! ನಾನು ಜೀವಪಕ್ಷಿ. ಭಗವಂತನ ದೃಷ್ಟಿಯದು ಸಾಕ್ಷೀಪಕ್ಷಿ. ಅಂತಹ ಜ್ಞಾನಪಕ್ಷಿ ಜಗತ್ತಿನ ಮೇಲೆ ಜ್ಞಾನದ ಬೆಳಕು ಚೆಲ್ಲಿದೆ. ಹಣ್ಣು ಹಂಪಲುಗಳನ್ನು; ಶಬ್ದ, ಸ್ಪರ್ಶ, ರೂಪ, ರಸಾದಿಗಳನ್ನು ಬೆಳಗಿಸುತ್ತದೆ. ಅಂತಹ ಪ್ರಕಾಶ ಚೆಲ್ಲುವ ಭಗವಂತನ ಮೇಲೆ ಶಬ್ದ, ಸ್ಪರ್ಶ, ರೂಪಗಳ ಪ್ರಭಾವ ಇಲ್ಲ. ನಾವು ಆತನನ್ನು ಬಂಗಾರದಲ್ಲಿ ಮುಚ್ಚಿದರೂ, ಎಷ್ಟು ವಸ್ತುಗಳನ್ನು ಸಮರ್ಪಿಸಿದರೂ ಭಗವಂತ ಆ ಕಡೆ ನೋಡುವುದಿಲ್ಲ. ನೀವು ಬೇಕಾದರೆ ಸಾದಾ ಅನ್ನ ಅರ್ಪಿಸಿ, ಅಥವಾ ಮೃಷ್ಟಾನ್ನ ಅರ್ಪಣ ಮಾಡಿ, ಯಾವುದನ್ನೂ ಲಿಂಗ ನೋಡುವುದಿಲ್ಲ. ಯಾವಾಗ ಈ ಜೀವ ಮೇಲ್ಮುಖ ಮಾಡಿ ಆ ಸಾಕ್ಷಿಯತ್ತ ಲಕ್ಷ್ಯ ಕೊಡುತ್ತಾನೆಯೋ ಆಗ ಎಲ್ಲೆಡೆ ಹರವಿದ ಪ್ರಕಾಶ ಕಾಣುತ್ತದೆ. ಆ ಪ್ರಕಾಶದ ದರ್ಶನದಿಂದ ಜೀವಪಕ್ಷಿಯ ಮೋಹ ಮರೆಯಾಗುತ್ತದೆ. ಶೋಕ ತಪ್ಪಿಹೋಗುತ್ತದೆ. ಜೀವಭಾವವು ಹಾರಿಹೋಗುತ್ತದೆ. ಆ ಜೀವಕಲ್ಪನೆಯೊಂದಿಗೆ ಈಶಕಲ್ಪನೆಯೂ ಮರೆಯಾಗುತ್ತದೆ. ಆಗ ಏನು ಉಳಿಯುವುದೋ ಅದು ಶುದ್ಧ ಭಗವಂತ!

□

ಬೀಸುವ ಗಾಳಿ ಧೂಳಿಯನೆತ್ತಲು
ಮಸುಳಿದನೆ ಸೂರ್ಯನು?
ಆ ಸೂರ್ಯನಂತೆ ಬೆಳಗುತ್ತಿರವೇಡಾ!
ಹಿರಿಯರ ಮನವು ಮನವಿಚ್ಛಂದವಾಗದೆ
ಒಂದೆಯಂದದಿ ಇಪ್ಪಂತಪ್ಪ ನಿಮ್ಮದೊಂದು ಸಮತೆಯ ಗುಣ
ಎನ್ನನೆಂದು ಪೊದ್ದಿಪ್ಪುದು ಕಪಿಲಸಿದ್ಧಮಲ್ಲಿಕಾರ್ಜುನಾ.

**– ಸಿದ್ಧರಾಮೇಶ್ವರ**

# ಎಲ್ಲರನ್ನೂ ನಮ್ಮವರೆಂದವರು

**ಶ್ರೀ ಸದಾಶಿವ ಸ್ವಾಮಿಗಳು**
ಶ್ರೀ ವಿರಕ್ತ ಮಠ, ಮಾದಾಪಟ್ಟಣ

ಈಗಾಗಲೇ ಕರ್ನಾಟಕದಲ್ಲಿ ಸಾಮಾನ್ಯವಾಗಿ ಸಾವಿರಾರು ಮಠಗಳು ಸಾಮಾಜಿಕ ಹಾಗೂ ಧಾರ್ಮಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದ್ದು, ಅವುಗಳಲ್ಲಿ ಶ್ರೀ ಸುತ್ತೂರು ವೀರಸಿಂಹಾಸನ ಮಠವು ಧಾರ್ಮಿಕ ಹಾಗೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ತನ್ನ ಉತ್ತುಂಗಶಿಖರವನ್ನು ಮುಟ್ಟಿದೆ. ಇಂತಹ ಸ್ಥಿತಿಯನ್ನು ಮುಟ್ಟಬೇಕಾದರೆ ಮೂಲ ಸಂಸ್ಥಾಪಕರ ತಪಸ್ಸಿನ ಫಲ, ಮಂತ್ರಮಹರ್ಷಿಗಳ ಮಂತ್ರಾನುಷ್ಠಾನ ಮತ್ತು ರಾಜೇಂದ್ರ ಸ್ವಾಮಿಗಳವರ ಧೀಶಕ್ತಿ, ಕರ್ತೃತ್ವಶಕ್ತಿ ಮತ್ತು ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರರ ಹೃದಯವೈಶಾಲ್ಯ ಮತ್ತು ಸಮಾಜಮುಖಿ ಚಿಂತನೆಗಳು ಕಾರಣವೆನಿಸುತ್ತವೆ. ಎಲ್ಲಕ್ಕೂ ಮೀರಿ ಹಿರಿಯ ಗುರುಗಳ ಆಶೀರ್ವಾದವೇ ಮುಖ್ಯ. ಇವತ್ತು ಸುತ್ತೂರು ಮಠದಲ್ಲಿ ಯಾವುದೇ ಕಾರ್ಯಕ್ರಮ ಇದ್ದರೆ ಯಾವುದೇ ಸ್ವಾಮಿಗಳು ಹೋಗುವುದಕ್ಕೆ ಬಹಳ ಸಂತೋಷ ಮತ್ತು ಸಡಗರ. ಅಲ್ಲಿ ತಮ್ಮ ತಮ್ಮ ಮಠಗಳಿಗಿಂತಲೂ ಹೆಚ್ಚು ಆತಿಥ್ಯ ಮತ್ತು ಪ್ರೀತಿ ವಿಶ್ವಾಸಗಳಿಂದ ಕಾಣುತ್ತಿರುವುದು ಮತ್ತು ಬಸವಣ್ಣನವರು ಹೇಳಿರುವಂತೆ ಇವನಾರವ, ಇವನಾರವ, ಇವನಾರವ ಎನ್ನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ ಎಂದು ಹೇಳಿರುವಂತೆ ಯಾವುದೇ ಬಡವರು, ಶ್ರೀಮಂತರು ಎನ್ನುವ ಭೇದಭಾವವಿಲ್ಲದೆ ಯಾವ ಧಾರ್ಮಿಕ ಕಾರ್ಯಕ್ರಮವಿದ್ದರೂ ಎಲ್ಲ ಸ್ವಾಮಿಗಳಿಗೂ ಆದ್ಯತೆ ಇರುವುದರಿಂದ ನಮ್ಮ ಮಠದಲ್ಲಿ ಕಾಣುವುದಕ್ಕಿಂತ ಪ್ರೀತಿ ಇಲ್ಲಿ ಸಿಗುತ್ತದೆ ಎಂಬುದೇ ನಮ್ಮೆಲ್ಲರ ಅನಿಸಿಕೆ. ಯಾವುದೇ ಧಾರ್ಮಿಕ, ಸಾಮಾಜಿಕ ಚಿಂತನೆಗಳು, ಶಿಬಿರಗಳು ನಡೆಯಬೇಕಾದರೆ ಅಲ್ಲಿ ಸ್ವಾಮಿಗಳು ಇದ್ದೇ ಇರುತ್ತಾರೆ. ಇದಕ್ಕೆಲ್ಲ ಕಾರಣ ಇಂದಿನ ಜಗದ್ಗುರುಗಳವರ ಹೃದಯವೈಶಾಲ್ಯ.

ಇನ್ನು ಪ್ರಸ್ತುತ ವಿಷಯಕ್ಕೆ ಬರೋಣ. ನಾನು ಅಂದು ಮಹಾರಾಜ ಕಾಲೇಜಿನಲ್ಲಿ 1965ರ ದಶಕದಲ್ಲಿ ಬಿ.ಎ. ಮೊದಲನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆವಾಗ ನಮ್ಮ ಗುರುಗಳಾದ ಮಾದಾಪಟ್ಟಣ ಮಠದ ಅಂದಿನ ವಿರಕ್ತ ಮಠದ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಚನ್ನಬಸವ ಸ್ವಾಮಿಗಳವರ ಆಶ್ರಯ ಪಡೆದಿದ್ದೆ. ಅವರು ಆ ಕಾಲಕ್ಕೆ ಶ್ರೀ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಲಹೆ ಮತ್ತು ಪ್ರೋತ್ಸಾಹದಿಂದ ಅಂದು ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಗ್ರಾಮವಾಗಿ ಅಲ್ಲಿ ವಿದ್ಯಾರ್ಜನೆಗೆ

ಬರುವ ವಿದ್ಯಾರ್ಥಿಗಳಿಗಾಗಿ ಒಂದು ಅನಾಥಾಲಯವನ್ನು ಸ್ಥಾಪಿಸಿದ್ದರು. ಮತ್ತು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಪ್ರೋತ್ಸಾಹ ಮತ್ತು ಸಲಹೆ ಮೇರೆಗೆ ಅನಾಥಾಲಯದ ಪ್ರಾರಂಭೋತ್ಸವಕ್ಕೆ ಅಂದಿನ ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದ ಜಿ.ವಿ. ಹಳ್ಳಿಕೇರಿಯವರ ಉದ್ಘಾಟನೆ ಹಾಗೂ ಸನ್ನಿಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ ನಮಗೆ ಹಾಸ್ಟೆಲ್‌ನ್ನು ಹೇಗೆ ನಡೆಸಬೇಕು ಮತ್ತು ಲೆಕ್ಕಪತ್ರಗಳನ್ನು ಹೇಗೆ ಇಡಬೇಕು ಎಂಬುದನ್ನು ಅವರ ಸೆಕ್ರೆಟ್ರಿಯವರ ಮುಖಾಂತರ ಸಲಹೆಗಳನ್ನು ಕೊಡಿಸುತ್ತಿದ್ದರು. ಹೀಗೆ ತಮ್ಮಂತೆ ಧಾರ್ಮಿಕ, ಸಾಮಾಜಿಕ ಕರ್ತವ್ಯಗಳನ್ನು ಒಬ್ಬ ಮಠಾಧಿಪತಿಯಾದವರು ಹೇಗೆ ಮೈಗೂಡಿಸಿಕೊಳ್ಳಬೇಕು ಎಂಬುದನ್ನು ಆಚರಿಸಿ ತೋರಿಸಿ ಇನ್ನೊಬ್ಬರಿಗೆ ಮಾರ್ಗದರ್ಶಿಗಳಾಗಿದ್ದರು ಎಂಬುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆಗ ಅಂದರೆ 1965ರಲ್ಲಿ ನಮ್ಮ ಮಠಕ್ಕೆ ಆಗಮಿಸಿದ್ದರು. ಆಗ ನನಗೆ ಅವರ ಪ್ರಥಮ ದರ್ಶನವಾಯಿತು. ಮತ್ತೆ ನಾನು 1971ರಲ್ಲಿ ವ್ಯಾಸಂಗ ಮುಗಿಸಿ 1972ರಲ್ಲಿ ಎಂ.ಎ. ಮುಗಿಸಿ ಸನ್ಯಾಸ ದೀಕ್ಷೆಯನ್ನು ಹೊಂದಿ ನಮ್ಮ ಹಿರಿಯ ಗುರುಗಳು ನನ್ನನ್ನು ಉತ್ತರಾಧಿಕಾರಿಯಾಗಿ ಮಾಡಿದರು. ಮತ್ತು ನನ್ನ ಚರಪಟ್ಟಾಧಿಕಾರ ಮಹೋತ್ಸವದಲ್ಲಿ ಜಗದ್ಗುರುಗಳು ಭಾಗವಹಿಸಿದ್ದರು. ಆಗ ನನಗೆ ಉತ್ತಮ ಶಿಕ್ಷಣ ದೊರೆತಿದ್ದರೂ ಧಾರ್ಮಿಕ ಶಿಕ್ಷಣವಂತೂ ಇರಲಿಲ್ಲ. ಆದ್ದರಿಂದ ನಾನು ಧಾರ್ಮಿಕ ಶಿಕ್ಷಣ ಮತ್ತು ಆಚರಣೆ ವಿಷಯಗಳ ಬಗ್ಗೆ ನನಗೆ ಕುಂದೂರು ಇಂದಿನ ಹಿರಿಯ ಸ್ವಾಮೀಜಿಯವರಾದ ಡಾ. ಶ್ರೀ ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳವರ ಒಂದು ಮಾರ್ಗದರ್ಶನ ಈ ಸಮಯದಲ್ಲಿ ದೊರೆಯಿತು. ಆಗ ಅವರು ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಬಳಿಗೆ ನನ್ನನ್ನು ಕರೆದುಕೊಂಡು ಹೋಗಿ ಹತ್ತಿರದಿಂದ ಪರಿಚಯ ಮಾಡಿಕೊಟ್ಟರು. ನಾನು ಮೈಸೂರಿಗೆ ಹೋದಾಗಲೆಲ್ಲಾ ಕುಂದೂರು ಶ್ರೀಗಳವರ ಜೊತೆ ಹೋಗುತ್ತಿದ್ದೆ. ಆಗ ಹಿರಿಯ ಜಗದ್ಗುರುಗಳವರ ಮಾರ್ಗದರ್ಶನ ನನಗೆ ತುಂಬಾ ಸಿಕ್ಕಿತು. ಆಗ ಅವರೊಡನೆ ನನ್ನ ಒಡನಾಟ ಜೀವನದಲ್ಲಿ ಧಾರ್ಮಿಕ ಚಿಂತನೆ ಮತ್ತು ಸಾಮಾಜಿಕ ಚಿಂತನೆ ದೊರೆತು ಒಬ್ಬ ಮಠಾಧಿಪತಿಯಾದವನು ಸಮಾಜದಲ್ಲಿ ಹೇಗೆ ವರ್ತಿಸಬೇಕು, ಸಮಾಜಮುಖಿ ಚಿಂತನೆ ಮಾಡಬೇಕು, ಕಾರ್ಯ ಮಾಡಬೇಕು, ಬಂದದ್ದನ್ನು ಸಮಾಜಕ್ಕೆ ಹೇಗೆ ಅರ್ಪಿಸಬೇಕು ಎಂಬುದನ್ನು ತಿಳಿಸುತ್ತಿದ್ದರು.

ಇಲ್ಲಿ ಒಂದು ಮಾತು ಹೇಳಬೇಕೆಂದರೆ ಸ್ವಾಮಿ ವಿವೇಕಾನಂದ ರನ್ನು ಅವರ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಅವಸಾನ ಕಾಲ ಸಮೀಪವಾದಾಗ ವಿವೇಕಾನಂದರನ್ನು ಹತ್ತಿರಕ್ಕೆ ಕರೆದು ಹೇಳಿದರಂತೆ, ಇನ್ನೇನು ನಾನು ಕೆಲವು ದಿನಗಳಷ್ಟೇ ಬದುಕುತ್ತೇನೆ. ನಿನ್ನ ಕೊನೆಯ ಆಸೆ ಏನೆಂಬುದನ್ನು ನಾನು ತಿಳಿದುಕೊಳ್ಳಬೇಕಾಗಿದೆ ಹೇಳು ಎಂದರಂತೆ. ಆಗ ವಿವೇಕಾನಂದರು ಕೇಳಿದ ಮಾತು ಗುರುಗಳೇ ನಾನು ಯಾವಾಗಲೂ ನನ್ನ ಧ್ಯಾನ ಸಮಾಧಿಯಲ್ಲೇ ಅರ್ಥಾತ್ ದೇವರ ಚಿಂತನೆಯಲ್ಲೇ, ತಪಸ್ಸಿನಲ್ಲೇ ನಾನು ಕಾಲ ಕಳೆಯಬೇಕೆಂದಿದ್ದೇನೆ. ಆದ್ದರಿಂದ ತಾವು ನನಗೆ ಆಶೀರ್ವಾದ ಮಾಡಿ ಎಂದು

ಕೇಳಿಕೊಂಡರಂತೆ. ಆಗ ಶ್ರೀ ರಾಮಕೃಷ್ಣರು ಹೇಳಿದರಂತೆ, ಛೀ ಹುಚ್ಚ ನೀನು ಜ್ಞಾನಿ ಎಂದು ತಿಳಿದುಕೊಂಡಿದ್ದೆ. ನೀನೆಷ್ಟು ಸ್ವಾರ್ಥಿ ಎಂದು ಬೈದರಂತೆ. ಆಗ ವಿವೇಕಾ ನಂದರಿಗೆ ದಿಕ್ಕೇ ತೋರಲಿಲ್ಲ. ಆಗ ಗುರುಗಳು ಹೇಳಿದ ಮಾತುಗಳಿವು. ಇಂದು ಭಾರತ ದೇಶದಲ್ಲಿ ಜನ ಅಜ್ಞಾನದಿಂದ ಬಳಲುತ್ತಿದ್ದಾರೆ ಮತ್ತು ಅಕ್ಷರವಿಲ್ಲದೆ, ಹೊಟ್ಟೆಗೆ ಅನ್ನವೂ ಇಲ್ಲದೆ ಬಳಲುತ್ತಿರುವಾಗ ನೀನು ತಪಸ್ಸು ಮಾಡಲು ಕುಳಿತುಕೊಳ್ಳುವುದು ಸರಿಯೆ? ಎಂದು ಹೇಳಿ, ನೀನು ಅಕ್ಷರವಿಲ್ಲದವರಿಗೆ ವಿದ್ಯೆ ಕೊಡಬೇಕು. ಅನ್ನವಿಲ್ಲದವರಿಗೆ ಅನ್ನ ಕೊಡಬೇಕು. ಬಡವರ ಕಣ್ಣೀರನ್ನು ನೀನು ಒರೆಸಿದಾಗ ಮಾತ್ರ ನನಗೆ ಮತ್ತು ನನ್ನ ಆತ್ಮಕ್ಕೆ ಶಾಂತಿ ಎಂದು ಹೇಳಿದರಂತೆ. ಅಂದಿನಿಂದ ಅವರು ಸಮಾಜ ಸುಧಾರಣೆ ತಮ್ಮ ಗುರಿ ಎಂದು ತಿಳಿದು ಕಾರ್ಯತತ್ಪರ ರಾದರಂತೆ. ಹಿರಿಯ ಜಗದ್ಗುರುಗಳು ವಿವೇಕಾನಂದರ ಈ ಆದರ್ಶವನ್ನು ತಮ್ಮ ಸಮಾಜ ಸುಧಾರಣೆಗೆ ಕೈಗೊಂಡರು.

ನಾನು ಮೈಸೂರಿಗೆ ಹೋದಾಗಲೆಲ್ಲಾ ಕುಂದೂರು ಶ್ರೀಗಳವರ ಜೊತೆಯಲ್ಲಿ ಶ್ರೀ ಸುತ್ತೂರು ಮಠಕ್ಕೆ ಹೋಗುತ್ತಿದ್ದೆ. ಆಗ ಗುರುಗಳು ನಮ್ಮನ್ನು ಸಂಬೋಧಿಸುತ್ತಿದ್ದು ಹೀಗೆ. Thanks ಬಂದೀರಲ್ಲ ಎಂದು ತಮಾಷೆ ಮಾಡುತ್ತಿದ್ದರು. ನಾನು ಯಾಕೆ ಬುದ್ಧಿ ತಾವು ಥ್ಯಾಂಕ್ಸ್ ಹೇಳುತ್ತೀರಲ್ಲಾ ಎಂದರೆ ನೀವು ಇಂಗ್ಲಿಷ್ ಕಲಿತವರು. ಆದ್ದರಿಂದ ನಾನು ಇಂಗ್ಲಿಷ್‌ನಲ್ಲಿ ಥ್ಯಾಂಕ್ಸ್ ಹೇಳುತ್ತಿದ್ದೇನೆ ಎಂದು ತಮಾಷೆ ಮಾಡುತ್ತಿದ್ದರು. ಅಲ್ಲಿ ಹೋದರೆ ನಮಗೆ ವಿಶೇಷ ಆತಿಥ್ಯವನ್ನು ಸ್ವೀಟ್ ಏನು ಬೇಕು ಹೇಳಿ ಎಂದು ಕೇಳುತ್ತಿದ್ದರು. ಮಧ್ಯಾಹ್ನ ಹೊತ್ತಿಗೆ ಇಲ್ಲೇ ಪೂಜೆ ಪ್ರಸಾದ ಮಾಡಿ ಹೋಗಬೇಕೆಂದು ಹೇಳುತ್ತಿದ್ದರು. ಲೇಟಾಗಿ ಊಟದ ವೇಳೆಗೆ ಹೋದರೆ ಆಗಲೂ ನಿಮಗೆ ಸ್ವೀಟ್ ಏನು ಬೇಕು. ನಾವು ಯಾವುದು ಬೇಗ ಆಗುವುದಿಲ್ಲವೋ ಅದನ್ನೇ ಒಂದೊಂದು ಸಾರಿ ಕೇಳಿಬಿಡೋದು. ಆದರೂ ನಾವು ಪ್ರಸಾದಕ್ಕೆ ಕುಳಿತುಕೊಳ್ಳುವ ವೇಳೆಗಾಗಲೇ ನಾವು ಕೇಳಿದ ಸ್ವೀಟು ಸಿದ್ಧವಾಗುತ್ತಿತ್ತು. ಇದು ಇವರ ಪ್ರಸಾದದ ಮಹಿಮೆಯಾಗಿರುತ್ತಿತ್ತು. ಮತ್ತು ಅವರ ಸಮೀಪದಿಂದ ನನಗೆ ಭಕ್ತಿ, ವಿನಮ್ರತೆ, ಸಮಾಜದ ಬಗ್ಗೆ ಚಿಂತನೆಗಳು ಅರಿವನ್ನು ಉಂಟುಮಾಡಿತು. ಮತ್ತು ಯಾವಾಗಲೂ ನಗುಮುಖ, ಶಾಂತಿ ಮತ್ತು ಸಮಾಧಾನ ಸೈರಣೆ ಇರುತ್ತಿತ್ತು. ಯಾವಾಗಲೂ ಯಾರೇ ಮಠಾಧಿಪತಿಗಳು ಬರಲಿ ತಾವು ಇರುವ ಕಡೆ ಪೂಜೆ ಮತ್ತು ಪ್ರಸಾದ ಸಿದ್ಧವಾಗಿರುತ್ತಿತ್ತು ಮತ್ತು ಬಡಬಗ್ಗರು, ಹಿಂದುಳಿದವರು, ಧೀನರನ್ನು ಕಂಡರೆ ಬಹಳ ಮರುಗುತ್ತಿದ್ದರು, ಕನಿಕರ ತೋರುತ್ತಿದ್ದರು. ಯಾರಾದರೂ ಬಡವರು ಏನಾದರೂ ಕೇಳಿಕೊಂಡರೆ ಯಾರು ಇಲ್ಲದ ವೇಳೆಯಲ್ಲಿ ಕರೆದು ಕೈಯಾರೆ ಕೊಟ್ಟು ಕಳುಹಿಸಿಬಿಡುತ್ತಿದ್ದರು. ಇದರಿಂದ ನಾನು ಉದಾರವಾಗಿ ನಡೆದುಕೊಳ್ಳಬೇಕೆಂಬುದನ್ನು ಕಲಿತುಕೊಂಡೆ. ಅವರದು ಮಾತೃಹೃದಯ. ಇಲ್ಲಿ ಒಂದು ಕಡೆ ಶ್ರೀ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ತಮ್ಮ ಪ್ರವಚನದಲ್ಲಿ ಸಂತನಾದವನು ಹೇಗೆ ಇರುತ್ತಾರೆ ಎಂಬುದನ್ನು ಹೀಗೆ ಹೇಳುತ್ತಾರೆ.

ಈ ಜಗತ್ತಿನಲ್ಲಿ ಯಾರು ದೊಡ್ಡವರು ಎಂಬುದನ್ನು ಮತ್ತು ಯಾರು ಶ್ರೇಷ್ಠ ಎಂದು ಚೀನಾ ದೇಶದ ಸಂತ, ಅನುಭಾವಿ ಹೇಳಿರುವು ದನ್ನು ಉದಾಹರಿಸುತ್ತಾರೆ. ಏನೆಂದರೆ ನಿಜವಾಗಿ ಈ ಜಗತ್ತಿನಲ್ಲಿ ದೊಡ್ಡವರಾರು? ಎಂದರೆ ಚೀನಾ ದೇಶದ ಮೆಂಗ್ ಝೂ ಎಂಬ ಅನುಭಾವಿ ಹೇಳುತ್ತಾನೆ. ಏನೆಂದರೆ? "He is great who looses not the child's heart" ಮಗುವಿನಂತ ಮುಗ್ಧ ಮನಸ್ಸು ಮತ್ತು ಪವಿತ್ರ ಹೃದಯ ಹೊಂದಿದವರೇ ದೊಡ್ಡವರು ಎಂದಂತೆ. ಶ್ರೀಗಳವರಲ್ಲಿ ಮಗುವಿನಲ್ಲಿ ಇರತಕ್ಕಂತಹ ಮುಗ್ಧ ಹೃದಯ ಮತ್ತು ಮನಸ್ಸುಗಳು ಇದ್ದುವು. ಮಗುವು ಯಾರು ಕರೆದರೂ ಹೋಗುವಂತೆ ಅವರಲ್ಲಿ ಆ ಜಾತಿ ಈ ಜಾತಿ ಎನ್ನದೆ ಕರೆದವರಲ್ಲಿ ಹೋಗುವಂತೆ ಮತ್ತು ಅದು ನಕ್ಕು ನಲಿವಂತೆ ಶ್ರೀಗಳವರು ನಮ್ಮೊಂದಿಗಿರು ತ್ತಿದ್ದರು. ಪವಿತ್ರ ಪ್ರೇಮವನ್ನು ಹಂಚುವ ಆ ಮಗುವಿನ ಮನಸ್ಸು ಪರಿಶುದ್ಧವೂ ಆಗಿರುತ್ತಿತ್ತು. ಅವರ ಮನಸ್ಸು ಹೃದಯಗಳು, ಸಣ್ಣವರಾದ ನಾವು ಯಾರ ಬಳಿಗೆ ಹೋದರೆ ದೊಡ್ಡವರಾಗುತ್ತೇವೆ ಹಾಗೆ ಸಣ್ಣವರಲ್ಲೂ ದೊಡ್ಡತನವನ್ನು ಕಾಣುತ್ತಿದ್ದರು. ಚೆಸ್ಟರ್ಸನ್ ಹೇಳುವಂತೆ "He is great who makes everybody feel great" ಸಣ್ಣವರಾದ ನಾವು ದೊಡ್ಡವರಾಗುತ್ತೇವೆಯೋ ಅವರು ದೊಡ್ಡವರು ಎಂಬುದು ಆ ಮಾತಿನ ಭಾವ. ಆದ್ದರಿಂದ ಶ್ರೀಗುರುಗಳವರ ಸಾಮೀಪ್ಯದಿಂದ ನಮ್ಮ ಕುಂದುಕೊರತೆಗಳು ಕಡಿಮೆಯಾಗುತ್ತವೆ. ನಮ್ಮ ಹಿರಿಮೆಗರಿಮೆಗಳ ಅರಿವು ಅನುಭವ ನಮಗಾಗುತ್ತದೆ. ಅದಕ್ಕೆ ಬಸವಣ್ಣನವರು ಒಂದು ವಚನದಲ್ಲಿ "ಶಿವಪಥವರಿವೊಡೆ ಗುರುಪಥವೆ ಮೊದಲು ಗುರುಪಥ ವರಿವೊಡೆ ಶರಣರ ಸಂಗವೇ ಮೊದಲು" ಎಂಬಂತೆ. ಅವರ ಸಾಮೀಪ್ಯದಿಂದ ತನು ಶುದ್ಧವಾಗುತ್ತದೆ, ಮನ ಶುದ್ಧವಾಗುತ್ತದೆ.

ಯಾವುದೇ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಿಗೆ ಶ್ರೀ ಕುಂದೂರು ಶ್ರೀಗಳವರನ್ನು ನನ್ನನ್ನು ಬಿಡದೆ ತಮ್ಮ ಕಾರಿನಲ್ಲಿಯೇ ಕರೆದುಕೊಂಡು ಹೋಗುತ್ತಿದ್ದರು. ಪ್ರಯಾಣದಲ್ಲಿ ಲೋಕಾಭಿರಾಮವಾಗಿ ಮಾತನಾಡುತ್ತಾ, ಸರಸ ಸಂಭಾಷಣೆಗಳನ್ನು ಮಾಡುತ್ತ ನೂರಾರು ಮೈಲಿ ಪ್ರಯಾಣಿಸುತ್ತಿದ್ದೆವು. ಜೊತೆಯಲ್ಲಿಯೇ ಕೂಡಿಸಿಕೊಂಡು ಪೂಜೆ, ಪ್ರಸಾದ ಮಾಡಿಸುತ್ತಿದ್ದರು ಮತ್ತು ಅವರು ಯಾವುದೇ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ ತಮ್ಮ ಭಾಷಣವನ್ನು ಶುರು ಮಾಡಬೇಕಾದರೂ ಕೆಳಕಂಡ ಸಂಸ್ಕೃತ ಶ್ಲೋಕವನ್ನು ಪಠಿಸುತ್ತಿದ್ದರು.

ಯತ್ರೈವ ಯತ್ರೈವ ಶಿರೋಮದೀಯಂ
ತತ್ರೈವ ತತ್ರೈವ ಪದದ್ವಯಂತೇ
ಯತ್ರೈವ ಯತ್ರೈವ ಮನೋಮದೀಯಂ
ತತ್ರೈವ, ತತ್ರೈವ, ತವಸ್ವರೂಪಂ

ಎಂದು ಎಲ್ಲೆಲ್ಲಿ ನನ್ನ ಶಿರಸ್ಸು ಒರಗುತ್ತದೆಯೋ ಅಲ್ಲಲ್ಲಿ ನಿನ್ನ ಪಾದಕಮಲವಿರಿಸು. ಎಲ್ಲೆಲ್ಲಿ ನನ್ನ ಮನಸ್ಸು ಪ್ರವರ್ತಿಸುತ್ತದೆಯೋ ಅಲ್ಲೆಲ್ಲಾ ನಿನ್ನ ಸ್ವರೂಪದರ್ಶನ ಮಾಡಿಸು

ಎಂದು ತಮ್ಮ ಅನುಗ್ರಹ ಭಾಷಣವನ್ನು ಮಾಡುತ್ತಿದ್ದರು. ಇದರಿಂದ ನಾವು ತಿಳಿಯುವುದೇನೆಂದರೆ ಅವರು ಗುರುವಿನ ಮೇಲೆ ಎಷ್ಟು ಭಕ್ತಿಯನ್ನಿಟ್ಟಿದ್ದರು ಎಂಬುದನ್ನು ತಿಳಿಸುತ್ತದೆ. ಮತ್ತು ಪ್ರಪ್ರಥಮವಾಗಿ ಮೈಸೂರು ಜಿಲ್ಲಾ ಮಠಾಧಿಪತಿ ಗಳ ಗೋಷ್ಠಿಯನ್ನು ಸ್ಥಾಪಿಸಿದರು. ಇದರಿಂದ ಮಠಾಧಿಪತಿಗಳ ಪರಸ್ಪರ ಸ್ನೇಹ ಸಮರಸ, ವಿಶ್ವಾಸ ಮೂಡಿಸುವುದಲ್ಲದೆ, ಸಾಮಾಜಿಕ ವಾಗಿ ಮಠಗಳು ಯಾವ ಯಾವ ಕೆಲಸವನ್ನು ಮಾಡಬೇಕು ಮತ್ತು ಸಮಾಜಸೇವೆಗೆ ಬದ್ಧಕಂಕಣವಾಗಬೇಕು ಎಂಬುದೇ ಇದರ ಉದ್ದೇಶ. ಸುಮಾರು ಅರವತ್ತು ಜನ ಮಠಾಧಿಪತಿಗಳನ್ನು ತಮ್ಮ ಜೊತೆಯಲ್ಲಿ ಪ್ರವಾಸವನ್ನು ಮಾಡಿಸಿ ಪುಣ್ಯಕ್ಷೇತ್ರಗಳಿಗೆ, ಪವಿತ್ರ ಸ್ಥಳಗಳಿಗೆ ಮತ್ತು ಸಂತರ ಕ್ಷೇತ್ರದರ್ಶನ ಮಾಡಿಸಿದರು. ಈ ಪ್ರವಾಸದಲ್ಲಿ ಅತ್ಯಂತ ಮುಖ್ಯವಾಗಿ ಒಂದು ವಿಷಯವನ್ನು ನೆನಪಿಸಿಕೊಳ್ಳದಿರಲಾರೆವು. ಅದು ಏನೆಂದರೆ, ನಾವು ಪ್ರವಾಸ ಕಾಲದಲ್ಲಿ ಹೈದರಾಬಾದ್‌ಗೆ ಹೋಗಬೇಕಾಗಿ ಬಂತು. ಅಲ್ಲಿ ಆಗ ಎಚ್. ವೀರಭದ್ರಯ್ಯನವರು ಐ.ಜಿ.ಪಿ.ಯಾಗಿ ಹೈದರಾಬಾದಿನಲ್ಲಿದ್ದರು. ಶ್ರೀ ಜಗದ್ಗುರುಗಳವರ ಆಪ್ತ ಶಿಷ್ಯರೂ ಅತ್ಯಂತ ನಿಷ್ಠರೂ ಆಗಿದ್ದರು. ಗುರುಗಳು ಅಲ್ಲಿಗೆ ಮಠಾಧಿಪತಿಗಳ ಬರುವಿಕೆಯನ್ನು ಅವರಿಗೆ ಮುಂಚಿತವಾಗಿ ಫೋನ್ ಮೂಲಕ ತಿಳಿಸಿದ್ದರು. ಆಗ ಅವರು ಜಗದ್ಗುರುಗಳು ಇರುವ ನಮ್ಮಲ್ಲಿ 60 ಮಂದಿ ಮಠಾಧಿಪತಿಗಳಿಗೂ 3 ದಿವಸ ತಂಗಿಸಿ ಷಡ್ರಸಾನ್ನ ಭೋಜನವನ್ನು ಏರ್ಪಡಿಸಿದ್ದರು. ಅವರಿಂದ ನಾವು ಬಲವಂತವಾಗಿ ಇನ್ನೇನೇನೋ ನೆಪ ಹೇಳಿ ಬಿಡಿಸಿಕೊಂಡು ಬಂದೆವು. ಗುರು ಎಂತಹ ಶಿಷ್ಯರನ್ನು ಸಂಪಾದಿಸಿದ್ದರು. ಮತ್ತು ಅವರು ಎಲ್ಲಾ ಮಠಾಧಿಪತಿಗಳಿಗೂ ಬರುವ ದಿವಸ ಪಂಚೆ, ಟವಲ್, ಕಾಣಿಕೆ, ಹೂವು, ಹಣ್ಣುಗಳನ್ನು ಪ್ರತಿಯೊಬ್ಬರಿಗೂ ತರಿಸಿಕೊಟ್ಟರು. ದೊಡ್ಡ ಬಂಗಲೆಯಲ್ಲಿ ನಮಗೆ ಆಶ್ರಯ ನೀಡಿ, 60 ಮಂಚ, 60 ಹಾಸಿಗೆ, ದಿಂಬು ಎಲ್ಲವೂ ಹೊಸದನ್ನು ತರಿಸಿದ್ದರು. ಎಂತಹ ಸೇವೆ ಅವರದು. ಗುರುಗಳಿಗೆ ಬರುವ ದಿವಸ ಪಾದಪೂಜೆ ಮಾಡಿ, ಅತ್ಯಂತ ವೈಭವದಿಂದ ಪ್ರಸಾದವನ್ನು ನೀಡಿ ನಮ್ಮನ್ನೆಲ್ಲಾ ಬೀಳ್ಕೊಟ್ಟರು. ಪ್ರವಾಸ ಹೋದ ಕಡೆಯಲ್ಲೆಲ್ಲ ಮೊದಲು ಮಠಾಧಿಪತಿಗಳಿಗೆ ವ್ಯವಸ್ಥೆ ಮಾಡಿಸಿ ತಾವು ಪೂಜೆ ಪ್ರಸಾದವನ್ನು ತೆಗೆದುಕೊಳ್ಳುತ್ತಿದ್ದರು. ಇದರಿಂದ ಎಷ್ಟು ಉದಾರಚರಿತರು, ಉದಾರಚರಿತನಾಂತು ವಸುಧೈವ ಕುಟುಂಬಕಂ ಎಂದು ಹೇಳಿದ ಹಾಗೆ ಎಷ್ಟು ಉದಾರ ಗುಣಗಳಿದ್ದವು ಎಂಬುದನ್ನು ತೋರಿಸುತ್ತಿತ್ತು. ಹಿಂದೆ ಆದಿಗುರು ಭಗವತ್ಪಾದರ ಜಯಂತಿಯನ್ನು ಮೊದಲು ಈಗಿನ ಆಸ್ಪತ್ರೆ ಇರುವ ಜಾಗದಲ್ಲಿ ನಡೆಸಲಾಗುತ್ತಿತ್ತು. ಆವಾಗ ಒಂದು ಜಯಂತಿಯಲ್ಲಿ ಶ್ರೀ ಭಗವತ್ಪಾದರ ಜಯಂತ್ಯೋತ್ಸವವನ್ನು ನನ್ನ ಕೈಯಲ್ಲಿ ಉದ್ಘಾಟನೆ ಮಾಡಿಸಿದರು. ಅಂದು ಗುರುಗಳ ಸಾನ್ನಿಧ್ಯ, ಕುವೆಂಪುರವರ ಅಧ್ಯಕ್ಷತೆ ಮತ್ತು ಜನಪದ ಸಾಹಿತಿ ತರಿಕೆರೆ ಮಲ್ಲಪ್ಪನವರ ಭಾಷಣವಿತ್ತು. ಯಾವ ಮಠಾಧಿಪತಿಯಾಗಲಿ ಜ್ಞಾನ ಬೆಳೆಸಿಕೊಳ್ಳಲಿ ಎಂಬ ಉದ್ದೇಶವೇ ಅಡಗಿತ್ತು. ಮತ್ತು ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಅಖಿಲ ಭಾರತ ವೀರಶೈವ ಮಠಾಧೀಶ್ವರರ ಗೋಷ್ಠಿಗೆ ನಮ್ಮಲ್ಲಿನ

50ಕ್ಕೂ ಹೆಚ್ಚು ಮಿಗಿಲಾಗಿ ಮಠಾಧಿಪತಿಗಳನ್ನು ಜೊತೆಯಲ್ಲಿ ಕರೆದುಕೊಂಡು ಮೈಸೂರು ಸೀಮೆಯ ಮಠಾಧಿಪತಿಗಳ ಪರಸ್ಪರ ಸ್ನೇಹ ಸೌಹಾರ್ದ ದಿಂದ ಕೂಡಿರುತ್ತಾರೆ ಎಂಬುದನ್ನು ಅಲ್ಲಿ ಮನಗಾಣಿಸಿಕೊಟ್ಟರು. ಒಮ್ಮೆ ಹುಬ್ಬಳ್ಳಿಗೆ ಹೋಗುವಾಗ ನನ್ನನ್ನು ಮತ್ತು ಕುಂದೂರು ಮಠದ ಶ್ರೀಗಳನ್ನು ತಮ್ಮ ಕಾರಿನಲ್ಲೇ ಕರೆದುಕೊಂಡು ಹೋಗುತ್ತಿದ್ದರು. ಆಗ ರಾಣಿಬೆನ್ನೂರು ಹತ್ತಿರ ಒಬ್ಬ ಜಂಗಮರು ಕಾಲ್ನಡಿಗೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಆಗ ಡ್ರೈವರ್‌ಗೆ ಕಾರನ್ನು ತಟ್ಟನೆ ನಿಲ್ಲಿಸೆಂದರು. ನಾವೆಲ್ಲರು ಏಕೆಂದು ನೋಡಿದರೆ ಜಂಗಮರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದದ್ದು ನಮಗೆ ಕಂಡಿತು. ಆಗ ಗುರುಗಳು ಅವರನ್ನು ಹತ್ತಿರಕ್ಕೆ ಕರೆದು ನಡೆದು ಏಕೆ ಹೋಗುತ್ತಿದ್ದೀರಿ ಎಂದು ಕೇಳಿದಾಗ ಅವರು ಬಸ್‌ಗೆ ದುಡ್ಡಿಲ್ಲವೆಂದರು. ಎಲ್ಲಿಗೆ ಎಂದು ಕೇಳಿದರು. ಅದಕ್ಕೆ ಅವರು ಮೈಸೂರಿಗೆ ಎಂದು ಹೇಳಿದರು. ಆಗ ಕ್ಯಾತನಹಳ್ಳಿ ಶ್ರೀಗಳವರಿಗೆ ಅವರಿಗೆ ಬಸ್ ಛಾರ್ಜು ಕೊಟ್ಟು ಕಳುಹಿಸಿ ಎಂದು ಆಜ್ಞಾಪಿಸಿದರು. ಹೀಗೆ ಅವರು ಬಡಬಗ್ಗರನ್ನು ಕಂಡರೆ ಎಷ್ಟು ಉದಾರವಾಗಿ ನಡೆದುಕೊಳ್ಳುತ್ತಿದ್ದರು ಎಂಬುದನ್ನು ನಾವು ಪ್ರತ್ಯಕ್ಷ ನೋಡಿರುವೆವು.

ಅವರು ಮೈಸೂರು ಜಿಲ್ಲೆಯ ಮಠಾಧಿಪತಿಗಳ ಗೋಷ್ಠಿಯನ್ನು ಸ್ಥಾಪಿಸಿದರು. ಇದರಿಂದ ಪ್ರತಿಯೊಬ್ಬ ಮಠಾಧಿಪತಿಗಳು ತಮ್ಮ ಕುಂದುಕೊರತೆಗಳನ್ನು ಸಮಾಜಮುಖಿ ಕೆಲಸವನ್ನು ಪ್ರಸ್ತಾಪಿಸಲು ಅನುವುಮಾಡಿಕೊಟ್ಟರು. ಹಾಗೆಯೇ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತನ್ನು 1986ರಲ್ಲಿ ಸಂಸ್ಥಾಪಿಸಿ ಹರಸಿದರು. ಇದರಿಂದ ಮಾನವ ಧರ್ಮದ ಶಾಶ್ವತ ಮೌಲ್ಯಗಳನ್ನು ವಿಶಿಷ್ಟವಾದ ಶರಣ ಸಾಹಿತ್ಯ ಸಂಶೋಧನೆ ಸಂಪಾದನೆ, ಸಂರಕ್ಷಣೆ, ಪ್ರಕಾಶನ ನಡೆಯಬೇಕೆಂಬುದು ಅವರ ಉದ್ದಿಶ್ಯವಾಗಿತ್ತು. ಎರಡನೆಯದಾಗಿ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಇದೇ ಸಂದರ್ಭದಲ್ಲಿ ಸ್ಥಾಪಿಸಿದರು. ಕೆಲವು ಸಂದರ್ಭಗಳಲ್ಲಿ ಅಸ್ವಸ್ಥರಾದಾಗ ತಾವು ಒಪ್ಪಿಕೊಂಡಿದ್ದ ಕೆಲವು ಪೂಜಾ ಕಾರ್ಯಕ್ರಮಗಳಿಗೆ ಅಂದು ನಾವು ಹೋಗಿ ನೆರವೇರಿಸುವಂತೆ ಅಪ್ಪಣೆ ಕೊಡುತ್ತಿದ್ದರು. ಇದರಿಂದ ಎಲ್ಲರೊಡನೆ ಸಮಾನತೆಯನ್ನು ಕಂಡುಕೊಂಡಿದ್ದರು. ಸ್ಕೂಲು, ಕಾಲೇಜು, ತಾಂತ್ರಿಕ ವಿಜ್ಞಾನ, ವೈದ್ಯಕೀಯ ಹೀಗೆ ಹೇಳುತ್ತಾ ಹೋದರೆ ನೂರಾರು. ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ವಿದ್ಯಾಸಂಸ್ಥೆಯು ಎಷ್ಟು ಬೆಳೆದಿದೆ ಎಂದರೆ ಊಹಿಸಲು ಸಾಧ್ಯವೇ ಇಲ್ಲ. ಅಲ್ಲದೆ ಇಂದಿನ ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರು ತುಂಬಾ ವಿಶಾಲವಾದ ದೃಷ್ಟಿಕೋನವನ್ನು ಹೊಂದಿರುವವರು. ಇಂದು ವಿಶ್ವವೇ ಅವರ ಮನೆ, ವಿಶ್ವಕುಟುಂಬಿ ಯಾಗಿದ್ದಾರೆ. ಆತ್ಮಜ್ಞಾನ, ವಿಜ್ಞಾನ ಎರಡನ್ನೂ ಸಹ ಜೊತೆಯಲ್ಲಿಯೇ ಬೆಳೆಸುತ್ತಾ ಬಂದಿದ್ದಾರೆ. ಸರ್ಕಾರ ಇವರಿಗೆ ಪರಿಗಣಿತ ವಿಶ್ವವಿದ್ಯಾನಿಲಯ ಕೊಟ್ಟಿದ್ದು ಇವರ ಕಾಲದ ಒಂದು ಮಹತ್ವವಾದ ಸಾಧನೆ ಎಂದು ಹೇಳಬೇಕು.

**ಕೃಪೆ : 'ಘನ-ಮನ' (ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆ)**

# ಆದಿ ಜಗದ್ಗುರು ಭವ್ಯ ಬೆಳಕು ಸ್ಫೂರ್ತಿಯ ದೀಪ *

**ಶ್ರೀಮತಿ ದ್ರೌಪದಿ ಮುರ್ಮು, ರಾಷ್ಟ್ರಪತಿಗಳು**

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮೀಜಿಯವರ ಜಯಂತಿಯನ್ನು ಆಚರಿಸಲು ಇಲ್ಲಿ ನೆರೆದಿರುವ ಎಲ್ಲರಿಗೂ ನನ್ನ ಹೃತ್ಪೂರ್ವಕ ಶುಭಾಶಯಗಳು. ಮಹಾನ್ ಸಂತರನ್ನು ಗೌರವಿಸುತ್ತಿರುವ ಈ ಐತಿಹಾಸಿಕ ಸಂದರ್ಭದಲ್ಲಿ ಭಾಗವಹಿಸುತ್ತಿರುವುದು ನನಗೆ ಧನ್ಯತೆಯನ್ನು ನೀಡಿದೆ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮೀಜಿಯವರ ಜೀವನ, ದೃಷ್ಟಿಕೋನ ಮತ್ತು ಬೋಧನೆಗಳು ಸಾವಿರ ವರ್ಷಗಳಿಗೂ ಹೆಚ್ಚು ಕಾಲದ ನಂತರವೂ ಅಸಂಖ್ಯಾತ ಜನರಿಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡುತ್ತಲೇ ಇವೆ.

ಯುಗಗಳಾದ್ಯಂತ, ಸಂತರು ತಮ್ಮ ಜ್ಞಾನ ಮತ್ತು ಕರುಣೆಯ ಮೂಲಕ ಮಾನವೀಯತೆಯನ್ನು ಪ್ರಬುದ್ಧಗೊಳಿಸಿದ್ದಾರೆ. ನಿಜವಾದ ಶ್ರೇಷ್ಠತೆ ಎಂಬುದು ಅಧಿಕಾರ ಅಥವಾ ಸಂಪತ್ತಿನಲ್ಲಿ ಇಲ್ಲ. ಬದಲಾಗಿ ತ್ಯಾಗ, ಸೇವೆ ಮತ್ತು ಆಧ್ಯಾತ್ಮಿಕ ಬಲದಲ್ಲಿದೆ ಎಂಬುದನ್ನು ಸಂತರ ಜೀವನ ನಮಗೆ ನೆನಪಿಸುತ್ತದೆ. ಅಂತಹ ಶ್ರೇಷ್ಠ ಸಂತರ ಪೈಕಿ, ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮೀಜಿಯವರು ಭವ್ಯ ಬೆಳಕು ಮತ್ತು ಸ್ಫೂರ್ತಿಯ ದೀಪವಾಗಿ ಬೆಳಗುತ್ತಿದ್ದಾರೆ.

ಹತ್ತನೇ ಶತಮಾನದಲ್ಲಿಯೇ ಜಗದ್ಗುರುಗಳು ಸುತ್ತೂರಿನಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವನ್ನು ಸ್ಥಾಪಿಸಿದರು. ಈ ಪವಿತ್ರ ಆಧ್ಯಾತ್ಮಿಕ ಕೇಂದ್ರವು ಪ್ರಾರಂಭವಾದ ಬಳಿಕ ಸಾಮಾಜಿಕ ಪರಿವರ್ತನೆಗೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತ ಪ್ರಬಲ ಶಕ್ತಿಯಾಗಿ ರೂಪುಗೊಂಡಿದೆ. ಶಿಸ್ತು, ಭಕ್ತಿ ಮತ್ತು ಕರುಣೆಯ ಮೌಲ್ಯಗಳೊಂದಿಗೆ ಭವಿಷ್ಯದ ಪೀಳಿಗೆಯನ್ನು ಪೋಷಿಸುತ್ತಾ ಸರ್ವ ಜ್ಞಾನಮಂದಿರವಾಗಿ ಶ್ರೀಮಠ ಅತ್ಯುನ್ನತ ಕೊಡುಗೆ ನೀಡುತ್ತಿದೆ.

---

* ಭಾರತದ ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮುರವರು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವ ಉದ್ಘಾಟಿಸಿ ಮಾಡಿದ ಭಾಷಣ. 16 ಡಿಸೆಂಬರ್ 2025, ಮಳವಳ್ಳಿ, ಮಂಡ್ಯ ಜಿಲ್ಲೆ

ಸುತ್ತೂರಿನ ಅವಿಚ್ಛಿನ್ನ ಗುರುಪರಂಪರೆ ಒಂದು ಜೀವಂತ ಆತ್ಮಶಕ್ತಿ. ಇದು ತಲೆಮಾರುಗಳಿಂದ ನಡೆದುಬಂದಿರುವ ಆಧ್ಯಾತ್ಮಿಕ ಮೌಲ್ಯಗಳನ್ನು ಸಂರಕ್ಷಿಸಿ ಬಲಪಡಿಸಿದೆ. ಆದಿ ಜಗದ್ಗುರು ಮಹಾಸ್ವಾಮೀಜಿಯವರು ತೀವ್ರವಾದ ಆಧ್ಯಾತ್ಮಿಕ ಶಿಸ್ತು ಮತ್ತು ಆಳವಾದ ಅಂತಃಸತ್ವವನ್ನು ನಿರೂಪಿಸಿದ ಮಹಾಮಹಿಮರು. ಆದಿಜಗದ್ಗುರುಗಳು ಸ್ಥಾಪಿಸಿದ ಶ್ರೀಮಠದ ಪರಂಪರೆಯನ್ನು ಮತ್ತು ಧ್ಯೇಯೋದ್ದೇಶಗಳನ್ನು 23ನೆಯ ಪೀಠಾಧಿಪತಿಗಳಾದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರು ದಾರ್ಶನಿಕ ಮತ್ತು ಅಂತಃಕರಣದ ಸಾರ್ವಜನಿಕ ಸೇವೆಯ ಮೂಲಕ ಒಂದು ವಿಶಿಷ್ಟ ಘಟ್ಟಕ್ಕೆ ಮುಂದೊಯ್ದರು. ಧರ್ಮ, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು ನೀಡಿರುವ ಕೊಡುಗೆಗಳು ಲಕ್ಷಾಂತರ ಜನರಿಗೆ ಪ್ರಯೋಜನಕಾರಿಯಾಗಿವೆ ಎಂದು ನನಗೆ ತಿಳಿದುಬಂದಿದೆ.

ಕರ್ನಾಟಕವು ಸಂತ ಬಸವೇಶ್ವರರ ಪವಿತ್ರ ಭೂಮಿ. ಅವರ ಸಂದೇಶಗಳು ಪೀಳಿಗೆಯಿಂದ ಪೀಳಿಗೆಗೆ ಮಾನವೀಯತೆಯನ್ನು ಬೋಧಿಸುತ್ತಿವೆ. ಅವರ "ಕಾಯಕವೇ ಕೈಲಾಸ" – ಕೆಲಸವೇ ಪೂಜೆ – ಎಂಬ ಮೌಲಿಕ ಸಂದೇಶವು ಕೇವಲ ಒಂದು ಅಭಿವ್ಯಕ್ತಿಯಲ್ಲ, ಅದೊಂದು ಜೀವನವಿಧಾನ. ಈ ತತ್ವವು ಸುತ್ತೂರು ಮಠದ ಆದರ್ಶಗಳು ಮತ್ತು ಸಮಾಜದ ಬಲವರ್ಧನೆಗಾಗಿ ಅದು ನಡೆಸುತ್ತಿರುವ ಚಟುವಟಿಕೆಗಳಲ್ಲಿ ಪ್ರಕಟವಾಗಿರುವುದನ್ನು ತಿಳಿದು ನನಗೆ ಸಂತೋಷವಾಗಿದೆ. ಅದರ ಜೊತೆಜೊತೆಗೇ ಸಾಗುತ್ತಿರುವ ಆಧ್ಯಾತ್ಮಿಕ ಅನ್ವೇಷಣೆ ಮತ್ತು ಸಾಮಾಜಿಕ ಸೇವೆಗಳು ಮಾನವಕುಲದ ಬಗ್ಗೆ ಇರುವ ಶ್ರೀಮಠದ ಅಪಾರ ಕಾಳಜಿಯನ್ನು ಸೂಚಿಸುತ್ತವೆ.

ಶ್ರೀಮಠದ ಮಾರ್ಗದರ್ಶನ ಮತ್ತು ಪೋಷಣೆಯಡಿಯಲ್ಲಿ, ಜೆಎಸ್‌ಎಸ್ ಮಹಾವಿದ್ಯಾಪೀಠವು ಭಾರತದ ವಿಶಿಷ್ಟ ಸಂಸ್ಥೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಶಿಕ್ಷಣ ಮತ್ತು ಸಾಮಾಜಿಕ ಅಭಿವೃದ್ಧಿಯ ಪ್ರಗತಿಗೆ ಅದು ತನ್ನನ್ನು ಸಮರ್ಪಣೆಗೊಳಿಸಿಕೊಂಡಿರುವುದನ್ನು ಕಂಡು ನನಗೆ ಸಂತೋಷವಾಗಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠವು ಪ್ರಪಂಚದಾದ್ಯಂತ ಹಲವಾರು ವಿಭಿನ್ನ ಕಾರ್ಯಕ್ರಮಗಳನ್ನೊಳಗೊಂಡ ಸಂಸ್ಥೆಗಳನ್ನು ಸ್ಥಾಪಿಸಿ ಯುವ ಮನಸ್ಸುಗಳನ್ನು ಮೌಲ್ಯಾಧಾರಿತ ಸಂಪನ್ಮೂಲಶಕ್ತಿಗಳನ್ನಾಗಿ ರೂಪಿಸುವಲ್ಲಿ, ಆರೋಗ್ಯಸೇವೆಯನ್ನು ನೀಡುವಲ್ಲಿ, ಮಹಿಳೆಯರ ಸಬಲೀಕರಣದಲ್ಲಿ, ಗ್ರಾಮೀಣ ಸಮುದಾಯಗಳ ಉನ್ನತೀಕರಣದಲ್ಲಿ, ಸಂಸ್ಕೃತಿಯ ಸಂರಕ್ಷಣೆಯಲ್ಲಿ ಮತ್ತು ಎಲ್ಲರನ್ನೂ ಒಳಗೊಂಡ ಸಮಾಜದ ಅಡಿಪಾಯವನ್ನು ಸುಭದ್ರಗೊಳಿಸುವಲ್ಲಿ ತೊಡಗಿಸಿಕೊಂಡಿದೆ. ಈ ಕಾರ್ಯಕ್ರಮಗಳ ಮುಖಾಂತರ ಸುತ್ತೂರು ಶ್ರೀಮಠವು ಸಾಮಾಜಿಕ ಅಭಿವೃದ್ಧಿಯ ಆಧಾರಸ್ತಂಭಗಳಲ್ಲಿ ಒಂದಾಗಿ ಉನ್ನತ ಮಟ್ಟಕ್ಕೇರಿದೆ.

ತ್ವರಿತ ಬದಲಾವಣೆ ಮತ್ತು ಅನಿಶ್ಚಿತತೆಗಳ ಇಂದಿನ ಯುಗದಲ್ಲಿ, ಸಾಮಾಜಿಕ ಸಾಮರಸ್ಯ, ನೈತಿಕ ನಾಯಕತ್ವ, ಯುವಜನರ ಸಬಲೀಕರಣ ಮತ್ತು ಆಂತರಿಕ ಸ್ಥಿತಿಸ್ಥಾಪಕತ್ವವನ್ನು ಪೋಷಿಸಲು ಆಧ್ಯಾತ್ಮಿಕ ಮಾರ್ಗದರ್ಶನ ಅತ್ಯಗತ್ಯ. 2047ರ ವೇಳೆಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮುವ ದಿಕ್ಕಿನತ್ತ ಸಾಗುತ್ತಿರುವಾಗ, ನಮಗೆ ತಂತ್ರಜ್ಞಾನದ ಶಕ್ತಿ ಮತ್ತು ಮೌಲ್ಯಗಳ ಬಲ ಎರಡರ ಅಗತ್ಯವೂ ಇದೆ. ಅಭಿವೃದ್ಧಿ ಹೊಂದಿದ ಭಾರತಕ್ಕೆ ನೈತಿಕ ಬುದ್ಧಿವಂತಿಕೆಯೊಂದಿಗೆ ಆಧುನಿಕ ಶಿಕ್ಷಣ, ಪರಿಸರ ಸಂರಕ್ಷಣೆಯ ಜವಾಬ್ದಾರಿಯೊಂದಿಗೆ ನಾವೀನ್ಯತೆ, ಸಾಮಾಜಿಕ ಸೇರ್ಪಡೆಯೊಂದಿಗೆ ಆರ್ಥಿಕ ಬೆಳವಣಿಗೆ ಮತ್ತು ಸಹಾನುಭೂತಿಯೊಂದಿಗೆ ಪ್ರಗತಿಯ ಏಕೀಕರಣವಾಗಬೇಕಾದ ಅಗತ್ಯವಿದೆ. ಭಾರತ ಸರ್ಕಾರವು ಇಂಥದೊಂದು ಸಮಗ್ರ ದೃಷ್ಟಿಕೋನದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಸುತ್ತೂರು ಮಠದಂತಹ ಸಂಸ್ಥೆಗಳು ಈ ರಾಷ್ಟ್ರೀಯ ಪ್ರಯತ್ನದಲ್ಲಿ ಗಣನೀಯ ಪಾತ್ರವನ್ನು ವಹಿಸಬಹುದಾಗಿದೆ.

ನಮ್ಮ ಆಧ್ಯಾತ್ಮಿಕ ಸಂಸ್ಥೆಗಳು ಮಾನವೀಯತೆಯ ಬದ್ಧತೆ ಮತ್ತು ಮೌಲ್ಯಗಳನ್ನು ನಮಗೆ ಸದಾ ನೆನಪಿಸುತ್ತವೆ. ಸಹಾನುಭೂತಿ, ಸಹಿಷ್ಣುತೆ, ಪರಸ್ಪರ ಗೌರವ ಮತ್ತು ಸಾಮೂಹಿಕ ಜವಾಬ್ದಾರಿಯ ಮೌಲ್ಯಗಳು ನಮ್ಮ ಪಾಲಿಗೆ ಕೇವಲ ಪ್ರಾಚೀನ ಆದರ್ಶಗಳಲ್ಲ; ಅವು ಸುಭದ್ರ ಸಾಮರಸ್ಯದ ಆಧುನಿಕ ಜಗತ್ತಿಗೆ ಅಗತ್ಯವಾದ ಅಡಿಪಾಯದಂಥ ಅಂಶಗಳಾಗಿವೆ.

ಒಳಗೊಳ್ಳುವಿಕೆ, ಸೇವೆ ಮತ್ತು ಮಾನವ ಘನತೆಯಿಂದ ಮುನ್ನಡೆಸುವಂಥ ಭವಿಷ್ಯವನ್ನು ನಿರ್ಮಿಸಲು ಭಾರತ ಸರ್ಕಾರ ಬದ್ಧವಾಗಿದೆ. ನಮ್ಮ ದೊಡ್ಡ ಶಕ್ತಿ ಎಂದರೆ ನಮ್ಮ ದೇಶದ ಯುವ ಜನರು. ಭಾರತದ ಭವಿಷ್ಯವು ಯುವಕರ ಕೌಶಲ್ಯ, ಜ್ಞಾನದಿಂದ ಮಾತ್ರವಲ್ಲದೆ ಅವರ ಶಕ್ತಿ, ಸೃಜನಶೀಲತೆ, ಮೌಲ್ಯಗಳು, ಅವರು ನಿರ್ವಹಿಸುವ ಪಾತ್ರ, ಸಮಗ್ರತೆ ಮತ್ತು ಸದುದ್ದೇಶದ ಪ್ರಜ್ಞೆಯಿಂದ ರೂಪುಗೊಳ್ಳುತ್ತದೆ. ಸುತ್ತೂರು ಮಠದಂತಹ ಸಂಸ್ಥೆಗಳು ಇಂಥ ಯುವ ಮನಸ್ಸುಗಳನ್ನು ಪ್ರೇರೇಪಿಸುವಲ್ಲಿ, ಜವಾಬ್ದಾರಿಯುತ ನಾಗರಿಕರನ್ನು ಪೋಷಿಸುವಲ್ಲಿ ಮತ್ತು ನಾಳಿನ ಭಾರತದ ಶಿಲ್ಪಿಗಳಿಗೆ ಮಾರ್ಗದರ್ಶನ ನೀಡುವಲ್ಲಿ ಮುಂದುವರಿಯಬೇಕೆಂಬುದು ನನ್ನ ಅಭೀಪ್ಸೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮೀಜಿಯವರ ಜಯಂತಿಯ ಆಚರಣೆಯು ಧರ್ಮ, ಕರುಣೆ, ಸೇವೆ ಮತ್ತು ಐಕ್ಯತೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಸಾಮೂಹಿಕ ಬದ್ಧತೆಯ ಪುನರುಚ್ಚಾರವಾಗಿದೆ.

ಶಿವಯೋಗಿ ಮಹಾಸ್ವಾಮೀಜಿಯವರ ದೈವೀ ಅನುಗ್ರಹವು ಸಮಾಜವನ್ನು ಅಭಿವೃದ್ಧಿಪಡಿಸಲು, ರಾಷ್ಟ್ರೀಯ ಶಾಂತಿ, ಸಮೃದ್ಧಿ ಮತ್ತು ಆಧ್ಯಾತ್ಮಿಕ ಶಕ್ತಿಗಾಗಿ ಕೊಡುಗೆ ನೀಡಲು ಶ್ರೀಮಠವನ್ನು ಇನ್ನಷ್ಟು ಪ್ರೇರೇಪಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಧನ್ಯವಾದಗಳು.

ಜೈ ಹಿಂದ್! ಜೈ ಭಾರತ್!

□

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಕಂ॥ ತುದಿಗೊಳಿಸಿದನಂಘ್ರಿಯಿಳಿದೆ ।
ತ್ತಿದಭುಜದಿಂ ನಿಮಿರ್ದ ದೇಹದಿಂ ನೀಳ್ಕದಜೇ ॥
ತ್ವದವಂ ಮುಟ್ಟುವನೆಂದೋ ।
ವದೆ ನಿಮಿರ್ದೋರಂತೆ ನಿಂದ ಮಾಳ್ಕೆಯೊಳೆಸೆದಂ ॥ ೮೦ ॥

**ಟೀಕ ॥** ತುದಿಗೊಳಿಸಿದ – ಕೊನೆಯೂರಿದಂತೆ ಮಾಡಿದ, ಅಂಘ್ರಿಯಿಂದೆ – ಕಾಲಿನಿಂದಲೂ, ಎತ್ತಿದ ಭುಜದಿಂದಲೂ, ನಿಮಿರ್ದ – ನಿಮಿರಿದಂ, ಮುಟ್ಟುವೆನೆಂದು, ಹಿಡಿಯುವೆನೆಂದು, ಓದದೆ – ಯೋಚಿಸದೆ, ನಿಮಿರ್ದು – ನಿರ್ಮಿತವಾಗಿ, ಓರಂತೆ – ನೆಟ್ಟಗೆ ನಿಂದ, ಮಾಳ್ಕೆಯೋಳ್ – ಬಗೆಯಿಂದ, ಎಸೆದಂ – ಪ್ರಕಾಶಿಸಿದನು.

**ತಾ ॥** ಅವನು ಹಠಯೋಗದಿಂದ ಅಲಭ್ಯವಾದ ಶಿವತತ್ವವನ್ನು ಪಡೆಯಲೆಳಸಿದ್ದರಿಂದ ಕುಂಟನು ತಾ ನಿಟ್ಟಗೆದ ಮೇಲಣ ವಸ್ತುವನ್ನು ಮುಟ್ಟುವೆನೆಂದು ವಿಚಾರವಿಲ್ಲದೆ ಮೆಟ್ಟಂಗಾಲಿಟ್ಟು ನಿಗುರುವ ಹಾಗಿದ್ದನು (ಉಪಮಾಲಂಕಾರವು).

**ವ ॥** ಆಗಳಾ ಪೊಸ ತಪಸ್ವಿ ತಪಮಿರ್ದೊಡೆಯರಿದು ಪುರಂದರಂ ಧರಾಮರಾಕಾರಮಂ ತಾಳ್ದೆಳ್ತಂದು ಕಟ್ಟಿದಿರೋಳ್ನಿಂದು ನಿರೀಕ್ಷಿಸಿ ಘನಗಂಭೀರ ಧ್ವನಿಯಿಂತೆಂದಂ ॥ ೯ ॥

**ಟೀಕ ॥** ಆಗಳ್ – ಆ ಕಾಲದಲ್ಲಿ, ಪೊಸ ತಪಸ್ವಿ – ಹೊಸಮುನಿಯು, ತಪಮಿರ್ಪೊಡೆ – ತಪಮಂಗೈಯ್ಯುತ್ತಿರಲು, ಅರಿದು – ತಿಳಿದು, ಪುರಂದರಂ – ಇಂದ್ರನು, ಧರಾಮರಾಕಾರಮಂ – ಭೂಸುರವೇಷವನ್ನು, ತಾಳ್ದು – ಧರಿಸಿ, ಎಳ್ತಂದು – ಬಂದು, ಕಟ್ಟಿದಿರೋಳ್ – ಸಮ್ಮುಖದಲ್ಲಿ ನಿಂದು, ನಿರೀಕ್ಷಿಸಿ – ನೋಡಿ, ಘನಗಂಭೀರಧ್ವನಿಯಿಂದ – ಮೇಘದ ಹಾಗೆ ಗಂಭೀರವಾದ ಶಬ್ದದಿಂದ ಇಂತೆಂದನು ॥ ೯ ॥

ಕಂ॥ ಮೃಗಮದಕೆ ಕರ್ದಮಕೆ ಸಂ ।
ಪಗೆಯಲರ್ಗಳ ಸರಕೆ ಸರವಿಗೊಳ್ಮುತ್ತಿನ ಮಾ ॥
ಲೆಗೆ ಗಾಜುದೊಡಿಗೆ ಗಾವುದು ।
ಬಗೆವೊಡೆ ಸಂಪರ್ಕಮಾಂಪ ಭೂಷಣ ವಿಧಿಯೋಳ್ ॥ ೮೧ ॥

**ಟೀಕ ॥** ಮೃಗಮದಕೆ – ಕಸ್ತೂರಿಗೆ, ಕಲರ್ದಮಕೆ – ಕೆಸರಿಗೂ, ಸಂಪಿಗೆಯಲರ್ಗಳ, ಸರಕೆ – ಸಂಪಿಗೆ ಹೂವುಗಳ ದಂಡೆಗೂ, ಸರವಿಗೆ – ಹುಲ್ಲೊನೊಂದಿಗೆ, ಮುತ್ತಿನ

ಮಾಳಿಗೆ – ಮೌಕ್ತಿಕ ಹಾರಕ್ಕು, ಗಾಜುದೊಡಿಗೆಗೆ – ಗಾಜಿನ ಮಣಿಗಳ ವಡವೆಗು, ಬಗೆವೊಡೆ – ವಿಚಾರಿಸದೆ, ಆಂಪ – ಧರಿಸುವ, ಭೂಷಣವಿಧಿಯೋಳ್ – ಆಭರಣರಚನೆಯಲ್ಲಿ, ಸಂಪರ್ಕಂ – ಸಂಬಂಧವು, ಆಂಪ – ಆಗುವದು.

**ತಾ ॥** ಉತ್ತಮ ವಿಷಯಕ್ಕೂ ಅಧಮವಿಷಯಕ್ಕು ಒಂದೆಡೆಯೊಳಿರುವ ಸಂಬಂಧವಿಲ್ಲವು. ಕಸ್ತೂರಿಯತ್ತ ಕೆಸರೆತ್ತ – ಸಂಪಿಗೆದಂಡೆಯೆತ್ತ ಹುಲ್ಲ ಸರವಿಯೆತ್ತ ಮುತ್ತಿನಕಂಠಿಯೆತ್ತ ಗಾಜಿನಮಣಿಗಳೆತ್ತ ಎಂಬುವ ಲೋಕವಿರೋಧದರ್ಶನಂ ಪೇಳುವುದರಿಂದ ಶಾಂತಮತಿಯುಳ್ಳ ತಪಸ್ವಿಗಳ ಲಕ್ಷಣವೆತ್ತ ಕ್ರೋಧವೃತ್ತಿಯುಳ್ಳ ವೀರಕ್ಷತ್ರಿಯರ ಲಕ್ಷಣವೆತ್ತ ಎಂಬರ್ಥವು ಗಮ್ಯವಾಗುತ್ತದೆ. ನೀನು ತಪವಂ ಗಯ್ವಲ್ಲಿ ಆಯುಧವನೇಕೆ ಪಿಡಿದಿರುವಿ ಎಂಬ ಪ್ರಶ್ನಾ ಅಭಿಪ್ರಾಯವು ವಿವಕ್ಷಿತವಾಗಿರ್ಪುದು ॥ ೮೧ ॥

ಚಂ॥ ಕರಜಪಮಾಲೆಯೆತ್ತ ಪೊಸ ಕೂರಸಿಯೆತ್ತ ವಿಭೂತಿಲಿಪ್ತವಿ ।
ಸ್ಫುರಿತ ಶಿವಾಕ್ಷಮಾಲ್ಯ ವಪುವೆತ್ತ ನಿಬದ್ಧ ನಿಷಂಗಚಾಪವ ॥
ಲರಿ ಮಿಸುಪಂಗವೆತ್ತ ಘನಶಾಂತಿಸಮುನ್ನತಿಯೆತ್ತ ನಿಂನ ಭೀ ।
ಕರತರವೇಷಮೆತ್ತ ಪಿರಿದದ್ಭುತಮದ್ಭುತಮೇನನೆಂದಪೆಂ ॥ ೮೨ ॥

**ಟೀಕ ॥** ಕರ – ಕೈಲಿರುವ, ಜಪಮಾಲೆಯೆತ್ತ – ಯಾರ ಬಳಿಯಿರತಕ್ಕದ್ದು, ಪೊಸತಾದ ಕೂರಸಿ ಸಾಣೆ ಹಿಡಿದ ಕತ್ತಿಯು, ಎತ್ತ, ಯಾರ ಬಳಿಯಿರತಕ್ಕದ್ದು, ವಿಭೂತಿಲಿಪ್ತ – ಭಸ್ಮದಿಂದ ಲೇಪಿಸಲ್ಪಟ್ಟದ್ದು, ವಿಸ್ಫುರಿತ ಶಿವಾಕ್ಷಿಮಾಲ್ಯ – ಹೊಳೆಯುತ್ತಿರುವ ರುದ್ರಾಕ್ಷಿ ಹಾರಗಳುಳ್ಳ, ವಪುವೆತ್ತ – ಶರೀರವೆಲ್ಲಿ, ನಿಬದ್ಧ – ಕಟ್ಟಿಕೊಳ್ಳಲ್ಪಟ್ಟ, ನಿಷಂಗ – ಬತ್ತಳಿಕೆ, ಚಾಪವಲ್ಲರಿ – ಬಳ್ಳಿಯ ಹಾಗಿರುವಲ್ಲಿ, ಮಿಸುಪ – ಹೊಳೆಯುತ್ತಿರುವ, ಅಂಗವೆತ್ತ – ಶರೀರವೆಲ್ಲಿ, ಘನಗಂಭೀರವಾದ, ಶಾಂತಿ – ಸಮಾಧಾನದ, ಸಮುನ್ನತಿಯೆತ್ತ – ಹೆಚ್ಚಿಕೆಯೆಲ್ಲಿ, ಭೀಕರವಾದ – ಬಹಳ ಭಯವನ್ನುಂಟುಮಾಡುವ, ವೇಷವೆತ್ತ – ಅಲಂಕಾರವೆಲ್ಲಿ, ಪಿರಿದದ್ಭುತಮದ್ಭುತಂ – ದೊಡ್ಡ ಆಶ್ಚರ್ಯವು, ಆಶ್ಚರ್ಯವು, ಏನಂದಪೆಂ – ಏನು ಹೇಳಲಿ ॥ ೮೨ ॥

**ತಾ ॥** ವ್ಯಧಿಕರಣ ಧರ್ಮಗಳಿಗೆ ಸಮಾನಾಧಿಕರಣ್ಯವಿಲ್ಲವು, ಮುನಿಲಕ್ಷಣಕ್ಕೆ ವೀರಲಕ್ಷಣವು ನಿನ್ನಲ್ಲಿ ತೋರುವದು ಆಶ್ಚರ್ಯವಾಗಿದೆ ॥ ೮೨ ॥

ಕಂ॥ ತಪಮಿರ್ಪ ತಾಪಸರ ನಾ ।
ನಪರಿಮಿತರನರಿವೆನಭವ ವೇಷಾಂಕಿತರಂ ॥
ವಿಪರೀತವೇಷಧರ ನೀ ।
ನುಪಮೆಯ ಕಿತ್ತಡಿಯನೆಲ್ಲಿಯುಂ ಕಂಡರಿಯಂ ॥ ೮೩ ॥

**ಟೀಕ ॥** ಆಂ ಅಭವವೇಷಾಂಕಿತರಂ – ಶಿವಾಲಂಕಾರಮುದ್ರಿತರಾದ, ಅಪರಿಮಿತರಂ – ಅಸಂಖ್ಯಾತರಾದ, ತಪಮಿರ್ಪ – ತಪವಂಗೈಯ್ಯುತ್ತಿರುವ, ತಾಪಸರಂ – ತಪಸ್ವಿಗಳನ್ನು, ಅರಿವೆಂ – ಬಲ್ಲೆನು, ವಿಪರೀತವೇಷಧರ – ವಿರುದ್ಧಾಲಂಕಾರವನ್ನು ಧರಿಸಿದವನೇ, ನಿನ್ನ ಉಪಮೆಯ – ನಿನ್ನ ಹೋಲಿಕೆಯುಳ್ಳ, ಕಿತ್ತಡಿಯನು – ಕೃತ್ರಿಮನನ್ನು, ಕಿತ್ತಾಟಗಾರನನ್ನು,

ಎಲ್ಲಯುಂ – ಯಾವ ಸ್ಥಲದಲ್ಲಿಯೂ, ಕಂಡರಿಯಂ – ನೋಡಿ ತಿಳಿದದ್ದಿಲ್ಲವು.

**ತಾ ॥** ಋಷಿಗಳೆಲ್ಲರೂ ಭಸ್ಮರುದ್ರಾಕ್ಷಗಳಂ ಧರಿಸಿ ಶಿವನ ಹಾಗಿರ್ಪರು. ನಿನ್ನ ಹಾಗೆ ಇರುವವನನ್ನು ಎಲ್ಲಿಯೂ ಕಾಣೆನು ॥ ೮೩ ॥

**ವ ॥** ಎಂದು ನುಡಿದಾಖಟಡಂಲನ ತಪೋವಿಡಂಬನೋಕ್ತಿಯನವನಾಕರ್ಣಿಸಿ ಕಣ್ದೆರೆದು ವೀಕ್ಷಿಸಿ ॥

**ಟೀಕೆ ॥** ಎಂದು ನುಡಿದ – ಆಕ್ಷೇಪಿಸಿ ಹೇಳಿದ, ಆಖಂಡಲನ – ಇಂದ್ರನ, ತಪೋವಿಡಂಬನ – ತಪವನ್ನನುಸರಿಸಿದ, ಉಕ್ತಿಯಂ – ದೂಷಣದ ಮಾತನ್ನು, ಆಕರ್ಣಿಸಿ – ಕೇಳಿ, ಕಣ್ತೆರೆದು, ವೀಕ್ಷಿಸಿ – ನೋಡಿ ॥

ಕಂ॥ ಪೊರಮೈಯ್ಯವೇಷದಿರವೇ ।
ತೆರನಾದೊಡಮೇನೊ ಮಾನಸಾಬ್ಜಾಂತರದೋಳ್ ॥
ಕರೆಗೊರಲನಂಘ್ರಿದಳೆದ ।
ಳ್ಕರಿನಾಂ ಜಾನಿಸಿ ಮಹೇಶನಂ ಮೆಚ್ಚಿಸುವೆಂ ॥ ೮೪ ॥

**ಟೀಕ ॥** ಪೊರಮಯ್ಯ – ಹೊರಗಣ ಶರೀರದ, ವೇಷದ – ಅಲಂಕಾರದ, ಇರವು – ಸ್ಥಿತಿಯು, ಏತೆರನಾದೊಡಂ – ಯಾವ ಬಗೆಯಾದರೂ, ಏನೋ – ಏನು ಕೊರತೆಯು, ಮಾನಸಾಬ್ಜಾಂತರದೋಳ್ – ಹೃದಯಕಮಲದೊಳಗೆ, ಕರೆಗೊರಲನ – ನೀಲಕಂಠನ, ಅಂಘ್ರಿ – ಚರಣವನ್ನು, ತಳೆದ – ಧ್ಯಾನಯೋಗದಿಂದಧರಿಸಿದ, ಅಳ್ಕರಿಂ – ಅಕ್ಕರೆಯಿಂದ, ಆಂ – ನಾನು, ಜಾನಿಸಿ – ಧ್ಯಾನಿಸಿ, ಮಹೇಶಂ – ದೊಡ್ಡ ದೇವರಾದ ಶಿವನನ್ನು ಮೆಚ್ಚಿಸುವೆಂ ॥

**ತಾ ॥** ಹೊರಗಿನ ವೇಷ ಹೇಗಿದ್ದರೂ ಬಾಧಕವಲ್ಲ, ಮನಸ್ಸಿನೊಳಗೆ ಶಿವಚರಣವನ್ನು ಧ್ಯಾನಿಸಿ ವರಪ್ರಸಾದವಂ ಪಡೆಯುವೆನು ॥ ೮೪ ॥

ವ ॥ ಎನೆ ಮತ್ತಮಿಂದ್ರನಿಂತೆಂದಂ ॥

**ಟೀಕ ॥** ಎನೆ – ಎಂದು, ಪೊಸಮುನಿ ಪೇಳೆ, ಮತ್ತಂ – ಮತ್ತು, ಇಂದ್ರನು, ಇಂತು– ಮುಂದೆ ಹೇಳುವ ರೀತಿಯಾಗಿ, ಎಂದಂ – ಪೇಳಿದನು ॥ ೧೧ ॥

ವೃ॥ ಬಿಡದತ್ಯುಗ್ರ ತಪಂಗಳಂ ತಳೆದುಮತ್ಯಾಯಾಸದಿಂ ಯೋಗಿಗಾ ।
ಮೃಡಸಂದರ್ಶನಮಂ ವಲಂ ಪಡೆಯರೆಂದುಂ ಕಾಣವಾಮ್ನಾಯವಾ ॥
ವೆಡೆಯೋಳ್ದುರ್ಲಭನೀಶನಂತವನನೆಂತುಂ ಕಾಣ್ಬೆನೆಂತಿರ್ಪನೀಂ ।
ಗಡ ನಿನ್ನೀ ಪೃಥುಸಾಹಸಂಬಡೆದುದೆನ್ನೋಳ್ ಪೆರ್ಚಿದಾಶ್ಚರ್ಯಮಂ ॥ ೮೫ ॥

**ಟೀಕ ॥** ಯೋಗಿಗಳ್, ಅತ್ಯುಗ್ರತಪಂಗಳಂ – ಬಹು ಕ್ರೂರ ವ್ರತಂಗಳನ್ನು ಬಿಡದೆ, ಅತ್ಯಾಯಾಸದಿಂ – ಬಹು ಪ್ರಯಾಸದಿಂದ, ತಳೆದ – ಧರಿಸಿಯೂ ಕೂಡ, ಮೃಡಸಂದರ್ಶನಂ – ಶಿವವಪ್ರತ್ಯಕ್ಷವನ್ನು, ಪಡೆಯರ್ – ಹೊಂದರು, ವಲಂ – ನಿಶ್ಚಯವು, ಆಮ್ನಾಯವು – ವೇದವು, ಎಂದುಂ – ಯಾವಾಗಲೂ, ಕಾಣವು – ನೋಡವು, ಆವೆಡೆಯೋಳ್ – ಯಾವ

ಸ್ಥಲದಲ್ಲಿಯೂ, ಈಶಂ – ಶಿವನು, ದುರ್ಲಭಂ – ಲಭಿಸತಕ್ಕವನಲ್ಲವು, ಅಂತವನಂ ಎಂತು – ಹೇಗಾದರೂ, ಕಾಣ್ಬೆನೆಂದು ವೀಂ – ಇರ್ಪ್ಪಿಗಡ – ಇರುವೆಯಲ್ಲವೇ, ನಿನ್ನಿ – ಈ ಪೃಥುಸಾಹಸ – ಈ ದೊಡ್ಡ ಆತುರವು, ಎನ್ನೋಳ್ – ನನ್ನಲ್ಲಿ, ಪೆರ್ಚ್ಚಿದ ಆಶ್ಚರ್ಯಮಂ – ಹೇರಿದ ಅಚ್ಚರಿಯನ್ನು ಪಡೆದು.

**ತಾ ॥** ಯೋಗಿಗಳು ಎಷ್ಟು ಕಷ್ಟಪಟ್ಟು ತಪವಂಗೈದರೂ ಶಿವತತ್ವವು ಅವರಿಗೆ ಪ್ರತ್ಯಕ್ಷವಾಗಲಿಲ್ಲ. ವೇದಗಳು ಎಷ್ಟು ಬಣ್ಣಿಸಿದರೂ ಶಿವತತ್ತ್ವವು ಅದಕ್ಕೆ ಗೋಚರವಾಗಲಿಲ್ಲ. ಎಲ್ಲಿ ಹೋಗಿ ಎಷ್ಟು ಪ್ರಯಾಸಪಟ್ಟರೂ ಶಿವನು ದೊರೆಯತಕ್ಕವನಲ್ಲ. ಅಷ್ಟು ದುರ್ಲಭವಾದ ದೇವರನ್ನು ನಾನು ಹೇಗಾದರೂ ಕಾಣುವೆನೆಂದು ನೀನು ಆತುರದಿಂದ ಸಂಕಲ್ಪದಿಂದಿರುವ ನಿನ್ನ ಸಾಹಸವನ್ನು ನೋಡಿದರೆ ನನಗಾಶ್ಚರ್ಯವುಂಟಾಯಿತು ॥

ಕಂ॥ ಅತಿಸುಖಿ ನೀ ಸುಕುಮಾರಂ ।
ಪ್ರತಿದಿನಮಾಭೀಳತಪವನೆಂತೆಸಗುವೆ ಪೇಳ್ ॥
ಕೃತಿಯೆ ಶಿತಿಕಂಠನಲ್ಪ ।
ವ್ರತಕ್ಕೆ ತನುತರತಪಕ್ಕಮೇನೊಲ್ದಪನೇ ॥ ೮೬ ॥

**ಟೀಕ ॥** ನೀ – ನೀನು, ಅತಿಸುಖಿ – ಬಹಳ ಸುಖವುಳ್ಳವನು, ಸುಕುಮಾರ – ಕೋಮಲವಾದ ಹುಡುಗನು, ಪ್ರತಿದಿನಂ – ನಿತ್ಯದಲ್ಲಿಯೂ, ಆಭೀಳತಪವಂ – ಕಷ್ಟವಾದ ತಪವನ್ನು , ಎಂತೆಸೆಗುಂ – ಹೇಗೆ ಮಾಡುವೆ, ಪೇಳ್ – ಹೇಳು, ಕೃತಿಯೆ – ಬುದ್ಧಿವಂತಂ, ಶಿತಿಕಂಠನೆ – ನೀಲಗ್ರೀವನಾಥ ಶಿವನು, ಅಲ್ಪವ್ರತಕ್ಕೆ – ಸಣ್ಣ ನಿಯಮಕ್ಕು, ತನುತರತಪಕ್ಕಂ – ಬಹಳ ಕೊಂಚವಾದ ತಪಸ್ಸಿಗೆ, ಒಲ್ದಪನೇ ಯೇನ್ – ಪ್ರಸನ್ನನಾಗುವನೇನು – ಇಲ್ಲ ॥

**ತಾ ॥** ಎಲಾ ಕುಶಲನೇ, ನೀನು ಸುಖವಾದ ಹುಡುಗನು, ನಿತ್ಯವೂ ಮಾಡತಕ್ಕ ಕಷ್ಟವಾದ ತಪವನ್ನು ಹೇಗೆ ಮಾಡಲಾಪುವೆ? ಅಥವಾ ಮಾಡಿದರೂ ಶಿವನು ಇಂಥಾ ಬಡತಪಸ್ಸಿಗೆ ಮೆಚ್ಚುತ್ತಾನೋ ॥ ೮೬ ॥

ಕಂ॥ ಪೆಳವಂ ಮರದುದಿಯ ಮಹಾ ।
ಫಳವ ಮಿಗೆ ಬಯಸುವಂತೆ ತನಗಸದಳಮಂ ॥
ತಿಳಿಯದೆ ಕಜ್ಜಮನೆಸಗುವ ।
ಬಳರಹಿತಂ ಜಗದ ನಗೆಗೆ ಪಕ್ಕಾಗಿರನೇ ॥ ೮೭ ॥

**ಟೀಕ ॥** ಪೆಳವಂ – ಕೈಯಿಲ್ಲದ ಹೆಳವನು, ಮರದುದಿಯ – ಮರದ ತುದಿಯಲ್ಲಿರುವ, ಮಹಾಫಳವಂ – ದೊಡ್ಡ ಹಣ್ಣನ್ನು, ಮಿಗೆ – ಹೆಚ್ಚಾಗಿ, ಬಯಸುವಂತೆ – ಹಾರೈಸುವ ಹಾಗೆ, ತನಗೆ ಅಸದಳವಂ – ತನಗೆ ಅಸಾಧ್ಯವನ್ನು ತಿಳಿಯದೆ, ಕಜ್ಜಮಂ – ಕೆಲಸವನ್ನು, ಎಸಗುವ – ಮಾಡುವ, ಬಲರಹಿತಂ – ಬಲವಿಲ್ಲದ ಅಶಕ್ತನು, ಜಗದ – ಲೋಕದ, ನಗೆಗೆ – ಹಾಸ್ಯಕ್ಕೆ, ದಕ್ಕುವ ಪಾತ್ರನು – ಆಗಿರನೇ ಏಂ

**ತಾ ॥** ಕೈಕುಂಟನು ಗಿಡದ ಮೇಲಣ ಹಣ್ಣನ್ನು ಬಯಸಿ ವ್ಯರ್ಥನಾಗುವಂತೆ ಲೋಕದಲ್ಲಿ ತನಗೆ ಸಾಧ್ಯವಲ್ಲದ್ದನ್ನು– ತಿಳಿಯದೆ ಸಾಧಿಸುವದಕ್ಕೆ ಉದ್ಯೋಗಿಸುವ ಅಶಕ್ತನು ಹಾಸ್ಯಕ್ಕೆ ಗುರಿಯಾಗುತ್ತಾನೆ. ಉಪಮಾಗಭಿತಾರ್ಥಾಂತರನ್ಯಾಸಾಲಂಕಾರವು. ॥ ಇದರಿಂದ ನೀನು ಮಾಡುತ್ತಿರುವ ಕೆಲಸವು ಹಾಸ್ಯಾಸ್ಪದವಾಗುವುದೆಂದು ವಿವಕ್ಷಿತ ಧ್ವನ್ಯರ್ಥವು. ॥ ೮೭ ॥

ಕಂ॥ ಮುನ್ನೆಂದುಂ ತಪವರಿಯದ ।
ನಿನ್ನಿರವೆತ್ತಭವನೊಲ್ಮೆ ತಾನೆತ್ತ ಪೊದ ॥
ಳ್ದುನ್ನತಿಕೆ ಕೆಡದೆ ತಳರೆನೆ ।
ತನ್ನ ಗರಿಪು ನಗುತಮತ್ತಮವನಿಂತೆಂದಂ ॥ ೮೮ ॥

**ಟೀಕ ॥** ಮುನ್ನ – ಮುಂಚೆ, ಎಂದುಂ – ಯಾವಾಗಲೂ, ತಪವ – ತಪಸ್ಸನ್ನು, ಅರಿಯದ – ತಿಳಿಯದ, ನಿನ್ನ ಇರವು – ಸ್ಥಿತಿಯು, ಎತ್ತ – ಯಾವ ಕಡೆಯಲ್ಲಿ, ಅಭವನ – ಜನ್ಮವಿಲ್ಲದ ಶಿವನ, ಒಲ್ಮೆತಾಂ – ಸ್ವಯಂ ಪ್ರಸಾದವು, ಎತ್ತ –ಯಾವ ಕಡೆಯಲ್ಲಿ, ಪೊದಳ್ದ – ಉಂಟಾಗಿರುವ, ಉನ್ನತಿಕೆ – ಗೌರವವು, ಕೆಡದೆ, ತಳರ್ – ಹೊರಟುಹೋಗು ಎಂದು, ತನ್ನಗರಿಪು – ಆ (ಬೆಟ್ಟಗಳಿಗೆ ಹಗೆಯಾದ) ಇಂದ್ರನು, ಎನೆ – ಹೇಳಲಾಗಿ, ಅವಂ – ಆಯರ್ಜುನನು, ಮತ್ತಂ – ಇಂತು, ನಗುತ ಎಂದಂ ॥

ಶಾ॥ ನೀನೆಂದುಕ್ತಿಯ ಸತ್ಯಮಾಗಮಚಯಕ್ಕಂ ತಾಪಸರ್ಗಂಭವಾ ।
ನೀನಾಥಂ ಸಲೆ ದುರ್ಲಭಂ ಪರಿಕಿಸೆಂದಂತಾದೊಡಂ ಭಕ್ತಿಸಂ ॥
ಧಾನಕ್ಕಾತನಸಾಧ್ಯನಲ್ತು ದಿಟಮುದ್ಯದ್ಭಕ್ತಿಯಿಂತತ್ವದ ।
ಧ್ಯಾನಂಬೆತ್ತು ದಯಾಬ್ಧಿಯಂ ಘನತಪಂಗೆಯ್ದೊಚ್ಚತಂ ಮೆಚ್ಚಿಪೆಂ ॥

**ಟೀಕೆ ॥** ನೀನು ಎಂದಲ್ಲಿ ಹೇಳಿದ, ಉಕ್ತಿಯೆ – ಮಾತೇ, ಸತ್ಯಂ – ದಿಟವು, ಆಗಮಚಯಕ್ಕಂ – ವೇದರಾಶಿಗೂ, ತಾಪಸರ್ಗಂ – ಋಷಿಗಳಿಗೂ, ಭವಾನೀನಾಥಂ – ಪಾರ್ವತೀಪತಿಯು, ಸಲೆ – ಚನ್ನಾಗಿ, ದುರ್ಲಭಂ – ಪ್ರಯಾಸದಿಂದಲೂ ದೊರೆಯತಕ್ಕವನಲ್ಲವು, ಆಂತಾದೊಡಂ – ಹಾಗಾದರೂ, ಪರಿಕಿಸೆಂದು – ಪರೀಕ್ಷಿಸಿ ನೋಡುವಾಗ, ಆತಂ – ಆ ಶಿವನು, ಭಕ್ತಿಸಂಧಾನಕ್ಕೆ – ಭಜನಯೋಗಕ್ಕೆ, ಅಸಾಧ್ಯ – ದೊರೆಯತಕ್ಕವನಲ್ಲದವನು, ಅಲ್ತು – ಅಲ್ಲ, (ದೊರೆಯತಕ್ಕವನೇ) ದಿಟಂ – ಯಥಾರ್ಥವು, ಉದ್ಯದ್ಭಕ್ತಿಯಿಂ – ಹೆಚ್ಚಾದ ಪ್ರಿಯಸೇವೆಯಿಂದ, ತತ್ವದಧ್ಯಾನಂಬೆತ್ತ – ಆತನ ಅಡಿಗಳಂ ಭಾವಿಸಿ, ಘನತಪಂಗೆಯ್ದು – ದಯಾಬ್ಧಿಯಂ – ಕರುಣೆಗೆ ಕೆಡಲಾದ ಕಪರ್ದಿಯನ್ನು, ಒಚ್ಚತಂ – ಒಂದುಸಲ ಅಥವಾ ಶುದ್ಧವಾಗಿ, ಮೆಚ್ಚಿಪೆಂ – ಪ್ರಸನ್ನನಾಗಿ ಮಾಡಿಕೊಳ್ಳುವೆನು.

**ತಾ ॥** ನೀನು ಹೇಳಿದ್ದು ದಿಟವೇ ಆದರೂ ಶಿವನು ಭಕ್ತಿಗೆ ಸುಲಭನು, ಸಮುದ್ರದೊಳಗಪಾರವಾದ ಜಲವಿರ್ಪಂತೆ ಆತನ ದಯೆಯುಂಟು, ಆದ್ದರಿಂದ ಭಕ್ತಿಯಿಂದ ತಪವಂಗೆಯ್ದು ಆತನಂ ಮೆಚ್ಚಿಸುತ್ತೇನೆ ॥ ೮೯ ॥

(ಮುಂದುವರಿಯುವುದು)

# ಸಂಗೀತ ಸದಾ ಬೆಳೆಯಲಿ*

**ಡಾ. ಟಿ.ಎಸ್. ಸತ್ಯವತಿ**

> ಯೋಽನ್ತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
> ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।
> ಅನ್ಯಾಂಶ್ಚ ಹಸ್ತ–ಚರಣ–ಶ್ರವಣ–ತ್ವಗಾದೀನ್
> ಪ್ರಾಣಾನ್ ನಮೋ ಭಗವತೇ ಪುರುಷಾಯ ತುಭ್ಯಮ್ ॥

ಆತ್ಮೀಯ ಸಹೃದಯ ಬಂಧುಗಳೇ,

ನನ್ನ ಪ್ರಥಮ ಪ್ರಣಾಮಗಳನ್ನು ಪರೋಪಕಾರಪ್ರವೃತ್ತರಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರ ಪಾದಾರವಿಂದಗಳಲ್ಲಿ ಸಮರ್ಪಿಸಬಯಸುತ್ತೇನೆ. ಇಂದಿನ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಪರಿಸರವನ್ನು ಗಮನಿಸಿದಾಗ ಇಂಥ ಮಹನೀಯರ ಮಾರ್ಗದರ್ಶನದ ಮಹತ್ವದ ಅರಿವಾಗುತ್ತದೆ.

ಹಿರಿಯ ಜಗದ್ಗುರುಗಳಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಮೈತಳೆದ ಜೆಎಸ್‌ಎಸ್ ಕರ್ನಾಟಕದ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಭೂಪಟದಲ್ಲಿ ತನ್ನದೇ ಆದ ಸ್ಥಿರ ಸ್ಥಾನವನ್ನು ಪಡೆದುಕೊಂಡಿದೆ. ಈ ಉನ್ನತ ಮೌಲ್ಯಗಳ ಪ್ರತಿನಿಧಿಯಾದ ಸಂಸ್ಥೆಯು ನನ್ನ ಅತ್ಯಲ್ಪ ಸಾಧನೆಯನ್ನು ಗುರುತಿಸಿ ಶ್ರೀಗಳವರ ಸಂಸ್ಮರಣೆಯಲ್ಲಿ ನಡೆಯುವ ಈ ಸಾಲಿನ ರಾಷ್ಟ್ರೀಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ನೀಡಿರುವುದು ಹೆಮ್ಮೆಗಿಂತಲೂ ವಿನೀತಭಾವವನ್ನೇ ಹೆಚ್ಚಿಸಿದೆ. ಇದಕ್ಕೆ ಕಾರಣೀಭೂತರಾದ ಸರ್ವರಿಗೂ ನನ್ನ ಕೃತಜ್ಞತಾಪೂರ್ವಕವಾದ ನಮನಗಳು. ಮುಂದುವರಿದು, ನಮ್ಮ ನಾಡಿನ ಹೆಮ್ಮೆಯ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನ ಕಲಾಸುಗಂಧವನ್ನು ವಿಶ್ವದೆಲ್ಲೆಡೆ ಪ್ರಸರಿಸುತ್ತಿರುವ ವಿದ್ವದ್ಗಣಕ್ಕೂ, ಇಲ್ಲಿ ನೆರೆದಿರುವ

---

* 2 ರಿಂದ 6 ಡಿಸೆಂಬರ್ 2025ರ ವರೆಗೆ ಮೈಸೂರಿನಲ್ಲಿ ಜರುಗಿದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 30ನೆಯ ಸಂಗೀತ ಸಮ್ಮೇಳನದ ಅಧ್ಯಕ್ಷ ಭಾಷಣ

ಆಪ್ತವರ್ಗಕ್ಕೂ ಪ್ರೀತ್ಯಾದರಸಹಿತವಾದ ನಮಸ್ಕಾರಗಳನ್ನು ಅರ್ಪಿಸುತ್ತ ಕೆಲವು ವಿಚಾರಗಳನ್ನು ತಮ್ಮ ಮುಂದಿಡುತ್ತಿದ್ದೇನೆ.

ಹಳೆಯದೋ? ಹೊಸತೋ? ಸಂಪ್ರದಾಯವೋ? ಆಧುನಿಕತೆಯೋ? ಪರಂಪರೆಯೋ? ಸ್ವಂತಿಕೆಯೋ? ಶಾಸ್ತ್ರವೋ? ಪ್ರಯೋಗವೋ? ಮಾರ್ಗವೋ? ದೇಸಿಯೋ? ಬುದ್ಧಿಯೋ? ಭಾವವೋ? ಮೂಲವೋ? ವ್ಯಾಖ್ಯಾನವೋ? ಗತವೋ ಪ್ರಸ್ತುತವೋ? ನಮ್ಮ ಕಲಾಪ್ರಪಂಚ ಇಂತಹ ಗೊಂದಲಗಳ ಗೂಡಾಗಿದೆ.

ಹಾಗೆಂದ ಮಾತ್ರಕ್ಕೆ ಇದು ಇಂದಿನದೇ ಸಮಸ್ಯೆಯೆಂದು ಹೇಳುವಂತಿಲ್ಲ. "ನ ಕದಾಚಿದನೀದೃಶಂ ಜಗತ್" ಎಂಬ ಪ್ರಾಚೀನೋಕ್ತಿಯಂತೆ ಜಗತ್ತು ಎಂದೂ ಈಗಿನದಕ್ಕಿಂತ ಭಿನ್ನವಾಗಿರಲಿಲ್ಲ. ಈಗಿರುವಂತೆಯೇ ಇತ್ತು, ಇರುತ್ತದೆ ಕೂಡ. ಅಂದರೆ, ಎಲ್ಲ ಕಾಲಮಾನದಲ್ಲೂ ಈ ಗತ–ಆಗತ–ಅನಾಗತಗಳಲ್ಲಿ ಯಾವುದು ಗ್ರಾಹ್ಯ ಎನ್ನುವ ಪ್ರಶ್ನೆ ಇದ್ದೇ ಇದೆ.

ತನ್ನ ಮಾಲವಿಕಾಗ್ನಿಮಿತ್ರದಲ್ಲಿ ಕಾಳಿದಾಸನೇ "ಪುರಾಣಮಿತ್ಯೇವ ನ ಸಾಧು ಸರ್ವಂ" – ಹಳೆಯದೆಂದ ಮಾತ್ರಕ್ಕೆ ಎಲ್ಲವೂ ಸಾಧುವಲ್ಲ ಎಂದು ಹೇಳಿದ್ದಾನೆ. ಅದೇ ಈಗ "ಪುರಾಣಮಿತ್ಯೇವ ಅಸಾಧು –ಸರ್ವಂ" – ಹಳೆಯದೆಂದರೆ ಅದು ತ್ಯಾಜ್ಯ – ಎಂಬ ವಿಪರೀತಕ್ಕೆ ಹೋಗಿದೆ. ಡಿವಿಜಿ ಅವರು ಹೇಳಿದಂತೆ ಹಳೆಯ ಭಕ್ತಿ, ಶ್ರದ್ಧೆಗಳು ಮಾಸಿ ಹೋಗಿವೆ. ಹೊಸ ಬೆಳಕು ಕಂಡಂತಾದರೂ ಅದು ನಮಗೆ ಅನುಕೂಲಕರವಾಗಿ ಇದೆಯೆಂಬ ಔಚಿತ್ಯ ನಮಗಿಲ್ಲ. ಹಾಗೆಂದು ಧೈರ್ಯಗೆಟ್ಟರೆ ಸಮಸ್ಯೆಗೆ ಪರಿಹಾರ ಒದಗದು. ಯಾವುದೇ ಆದರೂ ಸತ್ತ್ವಭೂಯಿಷ್ಠವಾಗಿದ್ದಲ್ಲಿ ಅದು ಅವಿನಾಶಿಯೆನ್ನುವುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಈ ಸಂದರ್ಭದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಹೇಳಿದ ಒಂದು ಉದಾಹರಣೆ ನೆನಪಾಗುತ್ತದೆ. ಟಪಾಲಿನಲ್ಲಿ ಕಳುಹಿಸಿದ ಪತ್ರ ಅನೇಕ ಅಂಚೆ ಕಚೇರಿಗಳನ್ನು ಹಾದು ಹೋಗುವಾಗ, ಪ್ರತಿಯೊಂದು ಕಚೇರಿಯಲ್ಲಿಯೂ ಲಕೋಟೆಯ ಮೇಲೆ ಕಚೇರಿಯ ಮುದ್ರೆ ಬೀಳುತ್ತದೆ. ಆದರೆ, ಒಳಗಿನ ಪತ್ರಕ್ಕೆ ಅದರಿಂದ ಯಾವುದೇ ಹಾನಿಯಾಗುವುದಿಲ್ಲ. ಹಾಗೆಯೇ, ಬೇರೆ ಬೇರೆ ಪ್ರಭಾವಗಳಿಂದ ನಮ್ಮ ಸಂಸ್ಕೃತಿ ಬದಲಾದಂತೆ ಕಂಡರೂ ಅದರ ಸಾರವು ಅಳಿಯಲಾರದು ಎಂಬ ನಂಬಿಕೆ ಸಮಂಜಸವಾದುದೇ. ಆದರೆ, ಅದರ ಜೊತೆಗೆ, ವಿಶೇಷತಃ ಭಾರತೀಯ ಸಂಸ್ಕೃತಿಯ ಸಾರವನ್ನು ಹೀರಿಕೊಂಡು ಹಸನಾಗಿ ಹೊಮ್ಮಿ ಹಬ್ಬಿರುವ ನಮ್ಮ ಅಭಿಜಾತ ಕಲೆಗಳ ಅಸ್ಮಿತೆಯ ಹೆಗ್ಗುರುತುಗಳನ್ನು ಅರ್ಥೈಸಿಕೊಳ್ಳುವ ಗುರುತರವಾದ ಹೊಣೆಗಾರಿಕೆಯು ನಮ್ಮ ಮೇಲೆ ಇದೆಯೆನ್ನುವುದನ್ನು ಮರೆಯಲಾಗದು. ಕಾಳನ್ನು ಉಳಿಸಿಕೊಂಡು, ಜೊಳ್ಳನ್ನು ತೂರುವ ಮೂಲಕ ಸಾರತರವಾದುದನ್ನು ಮುಂದಿನ ಪೀಳಿಗೆಗಳಿಗೆ ಕಾಪಿಡುವ ಪ್ರಯತ್ನವನ್ನು ನಾವು ಮಾಡಬೇಕಿದೆ; ಬೇರುಗಳನ್ನು ಭದ್ರಗೊಳಿಸಬೇಕಿದೆ. ಇಲ್ಲವಾದಲ್ಲಿ

ಹೊರಗಿನ ಪ್ರಭಾವ, ಪ್ರಲೋಭನೆಗಳ ಪ್ರವಾಹದಲ್ಲಿ ಸಹಸ್ರಮಾನಗಳಿಂದ ಉಳಿದು, ಬೆಳೆದುಬಂದ ನಮ್ಮ ಕಲೆ, ನಮ್ಮತನ ಕೊಚ್ಚಿಹೋಗುವ ಸಂಭವವುಂಟು.

ಏಕೆಂದರೆ, ಕುಮಾರವ್ಯಾಸನೆನ್ನುವಂತೆ "ಬೇರು ನೀರುಂಡಾಗ ತಣಿಯವೆ ಭೂರುಹದ ಶಾಖೋಪಶಾಖೆಗಳ್". ಮರದ ಬೇರು ಭದ್ರವಾದಷ್ಟೂ ಅದು ಎತ್ತರಕ್ಕೆ ಬೆಳೆಯಲು ಸಾಧ್ಯ. ಬೇರಿನ ಶಕ್ತಿಯೇ ಮರದ ಶಕ್ತಿ. ಕಲೆಯೂ ಹಾಗೆಯೇ. ಕಲಿಯುವ ಸಂದರ್ಭದಲ್ಲಿ ತಾವು ಕಲಿಯುತ್ತಿರುವ ವಿಶೇಷವಾದ ಕಲಾಪ್ರಕಾರವನ್ನು ಆಳವಾಗಿ ಅಧ್ಯಯನ ಮಾಡಿ, ಅದರ ರುಚಿ, ದರ್ಶನ, ಗಮ್ಯಗಳು ಚೆನ್ನಾಗಿ ಮನದಟ್ಟಾದ ಮೇಲೆ (ಅಂದರೆ ಬೇರು ಭದ್ರವಾದ ಮೇಲೆ) ರೆಂಬೆಕೊಂಬೆಗಳನ್ನು, ಬೇರೆಯ ಕಲಾಪ್ರಕಾರಗಳ ಅಧ್ಯಯನದ ಮೂಲಕ, ಕಲಾಸೌಂದರ್ಯಕ್ಕೆ, ಕಲೆಯ ಗೌರವಕ್ಕೆ ಧಕ್ಕೆ ಬಾರದ ರೀತಿಯ ಪ್ರಯೋಗ, ಪ್ರಯತ್ನಗಳಿಂದ ಬೆಳೆಸಬೇಕು. ಇಂತಹ ಅಧ್ಯಯನವೂ ಪುನಃ ಬೇರಿಗೇ ತನ್ನ ಪುಷ್ಟಿಯನ್ನು ನೀಡುತ್ತದೆ.

**ಹಿರಿಯರ ಪಾತ್ರ**

ಇಂತಹ ಪ್ರಯತ್ನಗಳು ಯಶಸ್ಸನ್ನು ಕಾಣಬೇಕಾದರೆ ನಮ್ಮ ಹಿರಿಯರೂ, ಪರಂಪರೆಯನ್ನರಿತ ಪಂಡಿತರೂ ಆಧುನಿಕರಿಗೆ ಒತ್ತಾಸೆಯಾಗಿ ನಿಂತು ಮಾರ್ಗದರ್ಶನ ಮಾಡಿದರೆ ಕಲೆಯ ಬೇರಿಗೆ ಕೊಡಲಿ ಬೀಳುವ ಭಯ ತಪ್ಪುತ್ತದೆ. ಇವರು ಸಂಪ್ರದಾಯದ ವಿಷಯದಲ್ಲಿ ವಿವೇಕದಿಂದ, ಆಧುನಿಕತೆಯ ವಿಷಯದಲ್ಲಿ ಸಹಾನುಭೂತಿಯಿಂದ ವರ್ತಿಸಬೇಕಾಗುತ್ತದೆ. ಖ್ಯಾತ ಚಿಂತಕರೊಬ್ಬರು "ಸಂಪ್ರದಾಯಕ್ಕೆ ಜಿಗುಟುತನ, ಆಧುನಿಕತೆಗೆ ಅಹಂಕಾರ" ಎಂದು ಸಾಂಪ್ರದಾಯಿಕರಿಗೂ ಆಧುನಿಕರಿಗೂ ಏಕಕಾಲದಲ್ಲಿ ಕನ್ನಡಿ ಹಿಡಿಯುವಂತಹ ಮಾತನ್ನು ಹೇಳಿದ್ದರು. ಹಾಗಾಗಿ, ಹಿರಿಯರು ತಮ್ಮ ಬಿಗಿತನವನ್ನು ಬದಿಗೊತ್ತಿದರೆ ಆಧುನಿಕರು ಅವರನ್ನೂ, ಕಲೆಯ ಬಗೆಗಿನ ಅವರ ಕಳಕಳಿಯನ್ನೂ ಅರ್ಥ ಮಾಡಿಕೊಳ್ಳಲು ಸಮರ್ಥರಾದಾರು.

ಋಗ್ವೇದದಲ್ಲಿಯೇ "ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ" – "ಉತ್ತಮ ವಿಚಾರಗಳು ವಿಶ್ವದ ಎಲ್ಲೆಡೆಯಿಂದ ನಮ್ಮಲ್ಲಿಗೆ ಬರಲಿ" ಎಂಬ ಉದಾತ್ತ ಭಾವನೆ ವ್ಯಕ್ತವಾಗಿದೆ. ಅದಕ್ಕನುಗುಣವಾಗಿ, ಪರಂಪರೆಯ ಪ್ರತಿಮೆಗೆ ಆಧುನಿಕತೆಯ ಅಲಂಕಾರ ಮಾಡುವಂತಹ ಪ್ರಯೋಗಗಳು ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಪ್ರಕಾರಗಳಲ್ಲಿ ಹಿಂದೆಯೂ ಯಶಸ್ವಿಯಾಗಿ ನಡೆದಿವೆ. ಉದಾಹರಣೆಗೆ ಉತ್ತರಾದಿ ಸಂಗೀತದಿಂದ ಕರ್ನಾಟಕದ ಶಿಸ್ತಿಗೆ ಬಂದ ದ್ವಿಜಾವಂತಿ, ಬೇಹಾಗ್, ಹಮೀರ್ ಕಲ್ಯಾಣಿ, ಸಿಂಧುಭೈರವಿ, ಕಾಪಿ ಮುಂತಾದ ರಾಗಗಳಲ್ಲಿಯ ರಚನೆಗಳನ್ನೂ, ನೋಟ್ಟು ಸಾಹಿತ್ಯವನ್ನೂ (ಪಾಶ್ಚಾತ್ಯ ಸಂಗೀತದ ಸ್ವರಧಾತು) ನೋಡಿದರೆ ಇದು ಸ್ಪಷ್ಟವಾಗುತ್ತದೆ. ಆದರೆ, ಪ್ರಯೋಗಗಳ ಸಾಮಂಜಸ್ಯವನ್ನು ಕಂಡುಕೊಳ್ಳಲು ರಸಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಅವಶ್ಯಕ.

ಕಾಳಿದಾಸನ ಸೂಚನೆ ಇಲ್ಲಿ ಸ್ಮರಣೀಯ – "ಸಂತಃ ಪರೀಕ್ಷ್ಯ ಅನ್ಯತರದ್ಭಜಂತೇ" – "ಬಲ್ಲವರು ಯಾವುದನ್ನೇ ಆದರೂ ಒಪ್ಪಿಕೊಳ್ಳುವ ಮೊದಲು ಪರೀಕ್ಷೆಯ ಒರೆಗಲ್ಲಿಗೆ ಹಚ್ಚುತ್ತಾರೆ" ಎನ್ನುವುದು. ಹಾಗೆ ನೋಡಿದಾಗ, ಮೊದಲಿಗೆ ಪಟ್ಟಿ ಮಾಡಿದ ತೋರಿಕೆಯ ವೈರುಧ್ಯದ ವಿಷಯಗಳನ್ನು ಸಮನ್ವಯಗೊಳಿಸುವುದು ಅನಿವಾರ್ಯ. ಲಕ್ಷಣದೊಡನೆ ಲಕ್ಷ್ಯವನ್ನೂ, ಪ್ರಾಚೀನದೊಡನೆ ಅರ್ವಾಚೀನವನ್ನೂ, ಗಾನದೊಡನೆ ಗೇಯವನ್ನೂ (ಸಾಹಿತ್ಯ), ಹಳೆ ಬೇರಿನೊಡನೆ ಹೊಸ ಚಿಗುರನ್ನೂ ಹೊಂದಿಸಿ ಮಾರ್ಗ–ದೇಸಿಗಳ ಮೋಸದ ಪೈಪೋಟಿಯನ್ನು ಅಳಿಸಿ, ಸಾಮರಸ್ಯದ ರಸಪಾಕವನ್ನು ಸವಿಯಬೇಕು. ಇವೆಲ್ಲದರ ಸಮುಚಿತ ಪ್ರಯೋಗದಿಂದ ಮಾತ್ರವೇ ಕಲೆಯ ಪರಮ ಪ್ರಯೋಜನವಾದ ದಾಟುವಿಕೆ ಸಾಧ್ಯ. ಈ ಆಧ್ಯಾತ್ಮಿಕ ಉತ್ಥಾನಕ್ಕೆ ಅತ್ಯಂತ ಸಹಾಯಕವಾದ ಸಾಮಗ್ರಿ ಎಂದರೆ ಧಾತುವಿನ ಜೊತೆಜೊತೆಗೇ ಪದವಿಡುವ ಅರ್ಥಸಮೃದ್ಧವಾದ ಸಾಹಿತ್ಯ. ರಾಮಾಯಣ–ಮಹಾಭಾರತದಂತಹ ಮಹಾಗ್ರಂಥಗಳ ಬೆಳಕಿನಿಂದ ಕಾಂತಿಗೊಂಡ ಮಹಾ ವಾಗ್ಗೇಯಕಾರರ ಕೃತಿಗಳು ಮಾನವಜನಾಂಗಕ್ಕೆ ದಾರಿದೀಪ.

ಮಮ್ಮಟಾಚಾರ್ಯನು ಹೇಳುವ ಕಾವ್ಯಪ್ರಯೋಜನದ ಅನ್ವಯ ಸಂಗೀತಕಲೆಗೂ ಆಗುವುದಲ್ಲವೇ! 'ಕಾವ್ಯಂ' ಎಂಬುದರ ಬದಲು 'ಗಾನಂ' ಎಂದಿಟ್ಟುಕೊಂಡರೆ "ಗಾನಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ಸದ್ಯಃಪರನಿರ್ವೃತಯೇ..." – ಧನಾರ್ಜನೆ, ಕೀರ್ತಿ, ವ್ಯವಹಾರಜ್ಞಾನ, ಅನಿಷ್ಟನಿವಾರಣೆ, ಸದ್ಯಃಸಂತೃಪ್ತಿಯೇ ಮೊದಲಾದ – ಹೀಗೆ ಲೌಕಿಕ, ಪಾರಲೌಕಿಕ ಅರ್ಥವ್ಯಾಪ್ತಿಯನ್ನು ಪ್ರಪಂಚಿಸುವ ವೈಶಿಷ್ಟ್ಯವನ್ನು ಉಳಿಸಿಕೊಳ್ಳೋಣ, ಬೆಳೆಸಿಕೊಳ್ಳೋಣ, ಸಾರ್ಥಕ್ಯವನ್ನು ಗಳಿಸಿಕೊಳ್ಳೋಣ ಎಂದು ವಿನಂತಿಸಿಕೊಳ್ಳುತ್ತ ವಿರಮಿಸುತ್ತೇನೆ.

॥ ಜೀಯಾತ್ ಜೆಎಸ್ಎಸ್ ಸಂಗೀತ ಸಭಾ, ಜೀಯಾತ್ ಭಾರತೀಯ ಕಲಾಸಂತತಿಃ ॥

☐

ಸುಳುಹೆಂಬುದನರಿಯ, ಸೂಕ್ಷ್ಮವೆಂಬುದನರಿಯ
ಒಳಗೆಂಬುದನರಿಯ, ಹೊರಗೆಂಬುದನರಿಯ
ಇರ್ದುದು ಇರ್ದಂತೆ ಇರ್ದಿತ್ತು ಕಾಣಾ
ಸಿದ್ಧಸೋಮನಾಥನೆಂಬ ಲಿಂಗವು
ಶಬ್ದಮುಗ್ಧವಾದುದನೇನೆಂಬೆನಯ್ಯಾ!

**ಅಮುಗಿ ದೇವಯ್ಯ**

# ಮಾನವ ಬದುಕಿನ ಮಹಾದೀಪ *

ನಿತೇಶ್ ಪಾಟೀಲ್

ಜ್ಞಾನವಿಲ್ಲದ ಭಕ್ತಿ ಅಂಧಕಾರ
ಭಕ್ತಿಯಿಲ್ಲದ ಜ್ಞಾನ ಅಹಂಕಾರ;
ಜ್ಞಾನ–ಭಕ್ತಿ ಒಂದಾದಾಗಲೇ
ಮಾನವನ ಬದುಕು ಪಾವನವಾಗುತ್ತದೆ

ಇಂತಹ ಜ್ಞಾನ ಮತ್ತು ಭಕ್ತಿಯ ಸಮನ್ವಯವನ್ನು ಜೀವನದಲ್ಲಿ ಆಳವಡಿಸಿಕೊಂಡ ಮಹಾನ್ ಯೋಗಿ, ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದ ಈ ಪವಿತ್ರ ಸಂದರ್ಭದಲ್ಲಿ...

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳವರ ಪಾದಾರವಿಂದಗಳಿಗೆ ನನ್ನ ಶ್ರದ್ಧಾಭಕ್ತಿಯ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತಾ, ಅವರ ದಿವ್ಯ ಸಾನ್ನಿಧ್ಯ ಮತ್ತು ಆಶೀರ್ವಾದದೊಂದಿಗೆ,

ಇಂದು ನಾವು ಇಲ್ಲಿ ಸೇರಿರುವುದು ಕೇವಲ ಒಂದು ಜಯಂತಿಯನ್ನು ಆಚರಿಸಲು ಮಾತ್ರವಲ್ಲ: ಸಮಾಜಕ್ಕೆ ದಾರಿ ತೋರಿದ ಧರ್ಮಮಾನವೀಯ ಮೌಲ್ಯಗಳ ಸಂಯೋಜನೆಯಾಗಿದ್ದ ಮಹಾನ್ ಯೋಗಿಯೊಬ್ಬರನ್ನು ಸ್ಮರಿಸಲು. ಅವರು ಬೇರಾರೂ ಅಲ್ಲ, ಆದಿ ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು.

1066 ವರ್ಷಗಳ ಹಿಂದೆ ಜನಿಸಿದರೂ ಅವರ ವಿಚಾರಗಳು, ಆದರ್ಶಗಳು ಮತ್ತು ಸಂದೇಶಗಳು ಇಂದಿಗೂ ನಮ್ಮ ಜೀವನದಲ್ಲಿ ಜೀವಂತವಾಗಿವೆ. ಇದು ಸಾಮಾನ್ಯ ವ್ಯಕ್ತಿಗೆ ಸಾಧ್ಯವಿಲ್ಲ, ಇದು ಯುಗಪುರುಷರ ಲಕ್ಷಣ.

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಕೇವಲ ಒಬ್ಬ ಯೋಗಿ ಮಾತ್ರವಲ್ಲ. ಅವರು ಧರ್ಮದ ಬೆಳಕು, ಶಿಕ್ಷಣದ ದೀಪ ಮತ್ತು ಮಾನವೀಯತೆಯ ಪ್ರತೀಕ.

---

* ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೆಯ ಜಯಂತಿ ಮಹೋತ್ಸವ, ಮಳವಳ್ಳಿ, ಭಾಷಣ (19 ಡಿಸೆಂಬರ್ 2025)

ಅವರು ಸಾರಿದ ಮೂಲ ತತ್ವವೆಂದರೆ – "ಧರ್ಮಸಂರಕ್ಷಣೆ ಮತ್ತು ದೀನರ ಸೇವೆಯೇ ಸಮಾಜದ ಶ್ರೇಷ್ಠ ಸೇವೆ". ಜ್ಞಾನ ಮತ್ತು ಧರ್ಮಸಂರಕ್ಷಣೆಯ ದಾರಿ ದೀಪವಾಗಿ ಅವತರಿಸಿದ ಯೋಗಿಗಳವರು ಸಮಾಜದ ಸಕಲರಿಗೆ ಜ್ಞಾನದ ಅರಿವು ಮತ್ತು ಧರ್ಮಸಂರಕ್ಷಣೆಯ ಮಹತ್ವವನ್ನು ತಿಳಿಸಿಕೊಟ್ಟ ಮಹಾನ್ ಸಂತರಾಗಿದ್ದಾರೆ. ಹಾಗೆಯೇ, ನೂರಾರು ಜನರಿಗೆ 'ಅರಿವೇ ಗುರು' ಎಂದು ತಿಳಿಸಿಕೊಟ್ಟ ಸಾಕ್ಷಾತ್ ಶಿವನ ಅಂಶವೇ ಆಗಿದ್ದಾರೆ.

ಜ್ಞಾನವು ಯಾರ ಸ್ವತ್ತೂ ಅಲ್ಲ, ಅದು ಎಲ್ಲರ ಹಕ್ಕು ಎಂದು ಅವರು ನಂಬಿದ್ದರು. ಅವರ ಆಶ್ರಮಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರಲಿಲ್ಲ; ಅವು ಜ್ಞಾನಮಂದಿರಗಳು, ಸಂಸ್ಕಾರ ಕೇಂದ್ರಗಳು ಮತ್ತು ಸಮಾನತೆಯ ಪಾಠಶಾಲೆಗಳು ಆಗಿದ್ದವು.

ಶ್ರೀ ಶಿವಯೋಗಿಗಳು 10ನೇ ಶತಮಾನದಲ್ಲಿಯೇ ಧರ್ಮಸಂರಕ್ಷಣೆ, ಕಾಯಕ ಯೋಗ, ಭಕ್ತಿಯೋಗ, ಭಗವತ್ ಸಾಕ್ಷಾತ್ಕಾರ, ದೀನರ ಉದ್ಧಾರ ಇವುಗಳಿಗೆ ಒತ್ತು ಕೊಟ್ಟು ಸಮಾಜವನ್ನು ಸಂರಕ್ಷಿಸಿದವರು. ಸುತ್ತೂರಿನ ಗುರುಪರಂಪರೆಯನ್ನು ಆರಂಭಿಸಿ ಲಕ್ಷಾಂತರ ಜನರ ಆತ್ಮಸಾಕ್ಷಾತ್ಕಾರಕ್ಕೆ ನಾಂದಿ ಹಾಡಿದ ಪುಣ್ಯಪುರುಷರೂ, ಆಧ್ಯಾತ್ಮಿಕವಾಗಿ ಮಹಾನ್ ವ್ಯಕ್ತಿಯೂ ಆಗಿದ್ದಾರೆ.

ಕಾಯಕವೇ ಕೈಲಾಸ, ದಾಸೋಹವೇ ಧರ್ಮ, ದೀನರ ಉದ್ಧಾರವೇ ಸಾಕ್ಷಾತ್ ಶಿವನ ಸೇವೆ ಎಂಬ ತತ್ತ್ವಗಳನ್ನು ಅವರು ಕೇವಲ ಮಾತಿನಲ್ಲಿ ಅಲ್ಲ, ಕಾರ್ಯದಲ್ಲಿ ತೋರಿಸಿದರು.

ಅವರ ಜೀವನ ನಮಗೆ ಒಂದು ಮಹತ್ವದ ಪಾಠವನ್ನು ಕಲಿಸುತ್ತದೆ, ಸಾಧನೆ ಇಲ್ಲದೆ ಸಿದ್ಧಿ ಇಲ್ಲ. ಅವರು ತಪಸ್ಸಿನ ಮೂಲಕ ಆತ್ಮಶುದ್ಧಿಯನ್ನು ಸಾಧಿಸಿದರು. ಸೇವೆಯ ಮೂಲಕ ಸಮಾಜಶುದ್ಧಿಯನ್ನು ಮಾಡಿದರು. ಧರ್ಮಸಂರಕ್ಷಣೆಯ ಮೂಲಕ ಭವಿಷ್ಯದ ಪೀಳಿಗೆಯನ್ನು ರೂಪಿಸಿದರು.

ಇಂದು ನಾವು ಆಧುನಿಕ ಯುಗದಲ್ಲಿ ಬದುಕುತ್ತಿದ್ದರೂ, ಮೌಲ್ಯಗಳ ಕೊರತೆ, ಮಾನವೀಯತೆಯ ಶಿಥಿಲತೆ, ಸ್ವಾರ್ಥದ ಆಧಿಕ್ಯವನ್ನು ನೋಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಜೀವನ ನಮಗೆ ದಾರಿದೀಪವಾಗಿದೆ.

ವಿದ್ಯಾರ್ಥಿಗಳಾದ ನಾವು ಅವರಿಂದ ಶಿಸ್ತು, ಅಧ್ಯಯನ ಸಂಸ್ಕಾರ ಮತ್ತು ಧರ್ಮ ಸಂರಕ್ಷಣೆಯನ್ನು ಕಲಿಯಬೇಕು. ಯುವಕರಾದ ನಾವು ಅವರಿಂದ ಸೇವಾಭಾವ ಮತ್ತು ಸಮಾಜದ ಹೊಣೆಗಾರಿಕೆಯನ್ನು ಕಲಿಯಬೇಕು. ಹಿರಿಯರಾದ ಅವರಿಂದ ನಾವು ಸಹನೆ, ತ್ಯಾಗ ಮತ್ತು ಮಾರ್ಗದರ್ಶನವನ್ನು ಕಲಿಯಬೇಕು. ಅವರ ಸಂದೇಶ ಇಂದಿಗೂ ಒಂದೇ –ಒಳ್ಳೆಯ ಮನುಷ್ಯನಾಗು, ಜ್ಞಾನವಂತನಾಗು, ಮತ್ತು ಸಮಾಜಕ್ಕೆ ಉಪಯುಕ್ತನಾಗು. ಇದು ಕೇವಲ ಆಶ್ರಮದೊಳಗಿನ ತತ್ತ್ವವಲ್ಲ; ಇದು ಜೀವನದ ಸತ್ಯ.

1066ನೇ ಜಯಂತಿಯನ್ನು ಆಚರಿಸುವುದು ಎಂದರೆ ಹೂವಿನ ಅರ್ಚನೆ ಮಾತ್ರವಲ್ಲ; ಅವರ ವಿಚಾರಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದೇ ನಿಜವಾದ ಜಯಂತಿ.

ಇಂದು ಈ ಪವಿತ್ರ ಸಂದರ್ಭದಲ್ಲಿ, ನಾವು ಎಲ್ಲರೂ ಒಂದು ಸಂಕಲ್ಪ ಮಾಡೋಣ – ಶಿಕ್ಷಣಕ್ಕೆ ಗೌರವ ನೀಡೋಣ, ಮಾನವೀಯತೆಗೆ ಆದ್ಯತೆ ನೀಡೋಣ, ಮತ್ತು ಸಮಾಜದ ಒಳಿತಿಗಾಗಿ ಬದುಕೋಣ.

ಅಂತಿಮವಾಗಿ, ಆದಿ ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಪಾದಾರವಿಂದಗಳಿಗೆ ಮತ್ತೊಮ್ಮೆ ಭಕ್ತಿಪೂರ್ಣ ನಮನ ಸಲ್ಲಿಸುತ್ತಾ, ಜ್ಞಾನವಿಲ್ಲದೆ ಜೀವಜ್ಯೋತಿ ಇಲ್ಲ; ಗುರುವಿಲ್ಲದ ಜ್ಞಾನವಿಲ್ಲ, ಕಾಯಕವಿಲ್ಲದೆ ಕೈಲಾಸವಿಲ್ಲ, ದಾಸೋಹವಿಲ್ಲದೆ ಧರ್ಮವಿಲ್ಲ; ಗುರು–ಕಾಯಕ–ದಾಸೋಹವೇ ಮಾನವ ಬದುಕಿನ ಮಹಾದೀಪ.

ಈ ಜಯಂತಿ ಮಹೋತ್ಸವವು ನಮ್ಮ ಜೀವನದಲ್ಲಿ ಹೊಸ ಬೆಳಕು ಮೂಡಿಸಲಿ ಎಂದು ಪ್ರಾರ್ಥಿಸುತ್ತೇನೆ.

□

ಪಂಚೇಂದ್ರಿಯಂಗಳು ಲಿಂಗಮುಖವಾಗಿ ನಿಂದು
ಮನಸಹಿತ ಪಂಚವಿಷಯಂಗಳಂಶದ ಸಕಲ ಸುಖಂಗಳು
ಲಿಂಗಾರ್ಪಿತದಿಂದ ಚರಿಸುತ್ತ
ಬೇರೆ ಮತ್ತೊಂದು ದೆಸೆಯಿಲ್ಲದೆ ನಿಂದುವು
ಸೌರಾಷ್ಟ್ರ ಸೋಮೇಶ್ವರಲಿಂಗನಿವಾಸಿಯಾದ ಶರಣಂಗೆ

**ಆದಯ್ಯ**

# ತಿರುವಳ್ಳುವರ್ ಮತ್ತು ಸರ್ವಜ್ಞರ ಅನುಭಾವ

**ಡಾ. ಪಿ. ಮಣಿ**

ಧರಣಿ ಸೃಷ್ಟಿಗೊಂಡ ಹಲವು ಸಹಸ್ರಾರು ವರ್ಷಗಳ ತರುವಾಯ ಜೀವಿಗಳ ಉದಯವಾಯಿತು. ಹೀಗೆ ಎಲ್ಲಾ ಜೀವಜಂತುಗಳಂತೆ ಮನುಷ್ಯನೂ ರೂಪುಗೊಂಡ. ಡಾರ್ವಿನ್ನನ 'ವಿಕಾಸವಾದ' ಸಿದ್ಧಾಂತವನ್ನು ಇಲ್ಲಿ ಸ್ಮರಿಸಬೇಕು. 'ಮಂಗನಿಂದ ಮಾನವ'ನಾದ ಮೇಲೆ ಬದುಕಿನ ಚೌಕಟ್ಟಿನೊಳಗೆ ಆಚಾರ-ವಿಚಾರ, ಸಂಸ್ಕೃತಿ ಬೆಸೆದುಕೊಂಡವು. ಮೊದಮೊದಲು ಮಾನವನಿಗೆ ದೈವವಾಗಿ ಕಂಡದ್ದು ಪಂಚಭೂತಗಳು. ಅಂತೆಯೇ ಮುಂದುವರೆಯುತ್ತಾ ಸಾಗಿದ ನಂಬಿಕೆಗಳು ಬೇರೆ ಬೇರೆ ಸ್ವರೂಪವನ್ನು ಪಡೆದುಕೊಂಡವು. ಪ್ರಪಂಚದ ಎಲ್ಲಾ ದಿಕ್ಕುದೆಸೆಗಳಲ್ಲಿ ಮನುಷ್ಯನ ಸಾಮುದಾಯಿಕ ವಾಸ ಆರಂಭಗೊಂಡ ಮೇಲೆ ಅವರಲ್ಲಿಯೇ ಭಕ್ತಿ, ಭಾವ, ನಂಬಿಕೆ, ಆಚಾರಣೆಗಳು ರೂಢಿಯಾದವು. ಈ ಮಧ್ಯೆ ತತ್‌ಕ್ಷಣವೇ ದೈವ, ಧರ್ಮಗಳ ಕಲ್ಪನೆ ಮೂಡಿರಲಿಲ್ಲ. ಹಿಂದೆಯೇ ಹೇಳಿದಂತೆ ಪಂಚಭೂತಗಳು ಮನುಷ್ಯ ಜೀವಕ್ಕೆ ಆಧಾರವಾದವು. ಹೀಗೆ ಮಾನವನ ಅಭ್ಯುದಯಕ್ಕೆ ಕಾರಣವಾದ ಎಲ್ಲ ಶಕ್ತಿಗಳನ್ನೂ ದೈವವೆಂದು ಭಾವಿಸುವುದು ಸಹಜವಾಯಿತು. ದೈವದ ಆರಾಧನೆ, ಅತೀತ ಶಕ್ತಿಗೆ ಶರಣಾಗುವುದು ಸಾತ್ವಿಕ ಬದುಕಿನ ನಿರ್ವಹಣಾ ಮಾರ್ಗಗಳಿಗೆ ಧರ್ಮದ ಹೆಸರನ್ನು ಸ್ಪರ್ಶಿಸಲಾಯಿತು. ಹೀಗೆ ನಂಬಿಕೆ ಮತ್ತು ಆಚರಣೆಗಳನ್ನು ಧರ್ಮದ ವ್ಯಾಪ್ತಿಯಲ್ಲಿ ಕಾಣಬಹುದು.

'ಧರ್ಮ' ಎಂಬ ಪದಕ್ಕೆ ಇಂಗ್ಲಿಷ್‌ನಲ್ಲಿ ರಿಲಿಜನ್ (Religion) ಎಂದು ಕರೆಯಲಾಗುತ್ತದೆ. ಈ ಪದವು ಲ್ಯಾಟಿನ್ ಮೂಲವಾದ Religio, Religere ಪದದಿಂದ ನಿಷ್ಪನ್ನವಾದದ್ದು. ಹಾಗಾದರೆ Religere ಎಂದರೇನು? ಅಂದರೆ ಮತ್ತೆ ಓದು, ಒಟ್ಟಿಗೆ ಬಂಧಿಸು, ಒಟ್ಟಿಗೆ ಶ್ರದ್ಧೆಯಿಂದ ಆಚರಿಸು ಎಂದರ್ಥ. ಭಗವದ್ಗೀತೆಯೊಳಗೆ 'ಧರ್ಮೋ ರಕ್ಷತಿ ರಕ್ಷಿತಃ' ಎಂದು ನುಡಿಮುತ್ತಿದೆ. ಅಂದರೆ 'ಧರ್ಮವನ್ನು ನಾವು ಕಾಪಾಡಿದರೆ ಆ ಧರ್ಮವು ನಮ್ಮನ್ನು ಕಾಪಾಡುತ್ತದೆ' ಎಂದರ್ಥ. ಇಲ್ಲಿ ಧರ್ಮಕ್ಕೆ ಸಂಕುಚಿತ ಅರ್ಥವನ್ನು ಕೊಡಬಾರದು. ಯಾವುದೇ ಮತಗಳಿಗೆ ಧರ್ಮದ ಹೆಸರನ್ನು (ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ) ಸೀಮಿತಗೊಳಿಸಬಾರದು. ಧರ್ಮವೆಂಬುದು ಅತ್ಯಂತ ವಿಶಾಲವಾದ ಪರಿಕಲ್ಪನೆ; "ಧರ್ಮವು ಮಾನವನ ಅಂತರಂಗದ ಅವಶ್ಯಕತೆ. ಬಹಿರಂಗ ಬದುಕಿಗೆ ಧರ್ಮವು

ತೋರಿಕೆಯಂತೆ ಕಂಡರೂ ಒಳಗಣ ಶಕ್ತಿಗೆ ಸ್ಫೂರ್ತಿಯಂತೆ ಕೆಲಸ ಮಾಡುತ್ತದೆ. ಬೆಂಕಿಯ ಧರ್ಮ ಶಾಖ, ನೀರಿನ ಧರ್ಮ ಆರ್ದ್ರತೆ, ಗಾಳಿಯ ಧರ್ಮ ಚಲನಶೀಲತೆ, ಭೂಮಿಯ ಧರ್ಮ ಸೃಷ್ಟಿ. ಹೀಗೆ ಮನುಷ್ಯಜೀವದ ಧರ್ಮವು ಅಂತರ್ಮುಖತೆ. ಅರಿಷಡ್ವರ್ಗಗಳ ಮೋಹಕ್ಕೆ ಬಲಿಯಾಗುವ ಮನುಷ್ಯ ಯಾವಾಗಲಾದರೂ ಮಾನಸಿಕ ದುಃಖಗಳಿಗೆ ಬಲಿಯಾಗಬಹುದು. ಆಗ ಆತನ ಮನಸ್ಸು ಶಾಂತಿ, ಸಮಾಧಾನ ಮತ್ತು ಪ್ರೀತಿಯ ಹುಡುಕಾಟದಲ್ಲಿ ಅಲೆಯುತ್ತಿರುತ್ತದೆ. ಅವುಗಳು ದೊರೆತಾಗ ಮಾನಸಿಕ ನೆಮ್ಮದಿಯೊಂದು ಒಡಮೂಡುತ್ತದೆ. ಅದುವೇ ಧರ್ಮದ ಮೂಲಸ್ಥಾನ. ದುರ್ಗುಣಗಳ ಉಚ್ಚಾಟನೆ, ಆದರ್ಶ ಮೌಲ್ಯಗಳ ಪ್ರತಿಪಾದನೆ, ಧರ್ಮಾಚರಣೆಯ ರೀತಿ ಮುಂತಾದ ಭಾವನೆಗಳು ಯಾವಾಗ ಮನುಷ್ಯನಲ್ಲಿ ಪಡಿಮೂಡಿದವೋ ಅಲ್ಲಿಂದ ದೇವರ ಸ್ವರೂಪ, ಆಧ್ಯಾತ್ಮದ ಕಲ್ಪನೆ, ಸರ್ವಶಕ್ತಿಯ ವಾಸ್ತವತೆ ಕುರಿತ ಜಿಜ್ಞಾಸೆಗಳು ವಾದ, ಪ್ರತಿವಾದಗಳು ಉಂಟಾದವು. ಅವುಗಳನ್ನು ಕುರಿತದ್ದು ಉಪನಿಷತ್ತು. ಆಗಮಗಳಲ್ಲಿ ದೇವರ ಬಿಂಬ ಅಥವಾ ಪ್ರತಿಬಿಂಬದ ಚರ್ಚೆ ಇದೆ. ಅವುಗಳೊಂದಿಗಿನ ಅನುಸಂಧಾನವನ್ನು ಉಪನಿಷತ್ತುಗಳು ಬೆಸೆದಿವೆ. ಇಷ್ಟಿದ್ದರೂ ನಾಗರಿಕತೆ ಬೆಳೆದಂತೆ ಧರ್ಮದ ಹೆಸರಿನಲ್ಲಿ ಜಾತಿ, ಮತಗಳು, ದ್ವೇಷ–ವೈಷಮ್ಯಗಳು ಸೃಷ್ಟಿಗೊಂಡವು. ಇತ್ತೀಚೆಗಂತೂ ಧರ್ಮದ ಹೆಸರಿನಲ್ಲಿ ಜರುಗುತ್ತಿರುವ ಮತೀಯ ಸಂಘರ್ಷ, ಸಾವು–ನೋವು, ಜಾತಿ ಜಗಳ ಎಲ್ಲವೂ ಧರ್ಮದೊಂದಿಗೆ ತಳುಕು ಹಾಕಿಕೊಂಡಿರುವುದು ಸೋಜಿಗದ ಸಂಗತಿ. ವಾಸ್ತವದಲ್ಲಿ ನಿಜವಾದ ಧರ್ಮಕ್ಕೂ ಈಗ ಚಾಲ್ತಿಯಲ್ಲಿರುವ ಧರ್ಮದ ಪರಿಕಲ್ಪನೆಗೂ ಯಾವುದೇ ಸಂಬಂಧವಿಲ್ಲ. ಎಂದಿಗೂ 'ಧರ್ಮವೆಂಬುದು ತೋರುಂಬ ಲಾಭ'ವಾಗಬಾರದು! ಆದರೆ ಇಂತಹ ನಂಬಿಕೆಯನ್ನೇ ಬಂಡವಾಳವಾಗಿ ಮಾಡಿಕೊಂಡಿರುವ ವ್ಯಕ್ತಿಗಳು ಧರ್ಮೋದ್ಯಮಿಗಳಾಗಿ ಪರಿಕಲ್ಪನೆಗೊಂಡಿದ್ದಾರೆ. ಸಮಾಜದಲ್ಲಿ ಇಂದು ಧರ್ಮದ ಹೆಸರಿನಲ್ಲಿ ಹಲವಾರು ಕೆಡುಕುಗಳು ಸಂಭವಿಸುತ್ತಿರುವುದು ವಿಷಾದನೀಯ. ಇಂತಹ ಹಲವು ಪ್ರಶ್ನೆಗಳಿಗೆ ಪೂರ್ವಸೂರಿಗಳು ತಮ್ಮ ಅನುಭಾವಿಕ ಸತ್ಯದರ್ಶನವನ್ನು ತೋರುವ ಪ್ರಯತ್ನ ಮಾಡಿದ್ದಾರೆ. ಪ್ರಪಂಚದ ಆರಂಭಿಕ ಸಾಹಿತ್ಯಗಳೆಲ್ಲವೂ ಇದೇ ಅಂಶವನ್ನು ಪ್ರತಿಪಾದಿಸುತ್ತವೆ. ಭಾರತದ ಮಟ್ಟಿಗೆ ಸನಾತನ, ಬೌದ್ಧ, ಜೈನ, ಶೈವ, ಸಿಖ್ ಮೊದಲಾದ ಧರ್ಮಗಳು ಇದೇ ತತ್ವದಡಿಯಲ್ಲಿ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿವೆ. ಕನ್ನಡದ ಚಂಪೂ, ವಚನ, ಷಟ್ಪದಿ, ಸಾಂಗತ್ಯ, ರಗಳೆ ಮುಂತಾದ ಸಾಹಿತ್ಯ ಪ್ರಕಾರಗಳು ಮನುಷ್ಯನನ್ನು ತಾಮಸಗುಣಗಳಿಂದ ಬೇರ್ಪಡಿಸುವ ಉದ್ದೇಶದಿಂದಲೇ ರಚನೆಗೊಂಡವು. ಅರ್ಥಾತ್ ಧರ್ಮ ಕುರಿತ ಚಿಂತನೆಗಳು ಇದನ್ನೇ ತಮಿಳಿನ ವೆಣ್ಬಾ, ಆಸಿರಿಯಪ್ಪಾ, ಕಲಿಪ್ಪಾ, ವಂಜಿಪ್ಪಾ ಮೊದಲಾದ ಸಾಹಿತ್ಯ ಪ್ರಕಾರಗಳನ್ನು ರೂಪಿಸಿವೆ. ತಮಿಳಿನ ತಿರುವಳ್ಳೂವರ್ ಮತ್ತು ಕನ್ನಡದ ಸರ್ವಜ್ಞರು ವಚನಗಳ ಮೂಲಕ ತಮ್ಮ ಭಾವಾಭಿವ್ಯಕ್ತಿಯನ್ನು ಮಾಡಿದ್ದಾರೆ. ಕಾಲದ ದೃಷ್ಟಿಯಿಂದ ತಿರುವಳ್ಳುವರ್ ಮತ್ತು ಸರ್ವಜ್ಞರು ಭಿನ್ನ ಕಾಲಘಟ್ಟಕ್ಕೆ ಸೇರಿದವರು. ಆದರೆ ಅವರುಗಳ ಸಾಹಿತ್ಯದ ಮನೋಧರ್ಮ ಒಂದೇ. ಇವರ ವಚನಗಳಲ್ಲಿ

ಸಿದ್ಧಿಗೊಂಡಿರುವ ಧರ್ಮ, ದೇವರು, ಆಚರಣೆ, ಧ್ಯಾನ, ಅಹಿಂಸೆ, ಜ್ಞಾನ, ಪ್ರೀತಿ, ಕರುಣೆಗಳು ನಿಜವಾದ ಧರ್ಮ ಬೋಧನೆಯ ಪ್ರತಿಪಾದನೆಗಳಾಗಿ ಕಾಣುತ್ತವೆ. ಆ ಸಂಬಂಧದ ವಿವರಣೆಗಳೆಡೆಗೆ ಈಗ ತೆರಳೋಣ.

'ತಿರುಕ್ಕುರಳ್'ನಲ್ಲಿ ಧರ್ಮ, ಅರ್ಥ ಹಾಗೂ ಕಾಮ ಎಂಬ ಖಂಡತ್ರಯಗಳನ್ನು ಕಾಣುತ್ತೇವೆ. ಧರ್ಮಖಂಡವು ನಾವು ವಿವೇಚಿಸ ಬಯಸುವ 'ಧರ್ಮ'ದ ವಿಚಾರಗಳನ್ನು ತಿಳಿಸಿದೆ. ತಿರುವಳ್ಳುವರ್ ಈ ಖಂಡದೊಳಗೆ 38 ಧರ್ಮವಿಚಾರಗಳನ್ನು ಪ್ರತಿಪಾದಿಸಿದ್ದಾರೆ. ಅವುಗಳು ಇಂತಿವೆ: ದೈವ ನಮನ (In Praise of the Lord), ಮಳೆಯ ಮಹಿಮೆ (In Praise of Rain), ಸನ್ಯಾಸಿಯ ಮಹಿಮೆ (The Greatness of those who have renounced the world), ಧರ್ಮಬೋಧನೆ (The glorification of Righteousness), ಗೃಹಸ್ಥ ಜೀವನ (Family Life), ಸಹಧರ್ಮಿಣೀಯ ಗುಣ (The blessings of good helpmate), ಪುತ್ರಭಾಗ್ಯ (Offspring), ಪ್ರೇಮಭಾವ (Love), ಅತಿಥಿಸತ್ಕಾರ (Hospitality), ವಚನದಲ್ಲಿ ಮಾಧುರ್ಯ (Kindness of Speech), ಕೃತಜ್ಞತೆ (Gratitude), ನಿಷ್ಪಕ್ಷಪಾತ (Uprightness of heart), ಸದಾಚಾರಶೀಲತೆ (Purity of Conduct) ಪರಸ್ತ್ರೀಯರ ವ್ಯಾಮೋಹವಿಲ್ಲದಿರುವಿಕೆ (Non-Desiring of Another Man's wife), ಕ್ಷಮಾಶೀಲತೆ (Forgiveness), ಲೋಭತ್ಯಾಗ (Non-Coveting) ಮತ್ತು ಲೋಕೋಪಕಾರ (Complaisance) ಮೊದಲಾದವುಗಳನ್ನು ಕಾಣಬಹುದು. ಸರ್ವಜ್ಞನ ವಚನಗಳಲ್ಲಿಯೂ ಇದೇ ಮಾದರಿಯ ಅಂಶಗಳಿವೆ. ಅವುಗಳನ್ನು ತಿಳಿಯುವ ಮೊದಲು ಕವಿದ್ವಯರ ಕೊಂಚ ಪರಿಚಯವನ್ನು ಮಾಡಿಕೊಳ್ಳೋಣ.

ತಿರುವಳ್ಳೂವರ್ ದ್ರಾವಿಡ ದೇಶದ ಮಹತ್ವದ ಕವಿ. ಇವರ ಕಾಲ ನಿಖರವಾಗಿ ತಿಳಿದಿಲ್ಲ. ಆದರೂ 'ಶಿಲಪ್ಪದಿಗಾರಂ' ಮತ್ತು 'ಮಣಿಮೇಖಲೈ' ಮಹಾಕಾವ್ಯಗಳನ್ನು ಆಧರಿಸಿ ಇವರು ಕ್ರಿ.ಶ.2ನೆಯ ಶತಮಾನಕ್ಕೂ ಹಿಂದೆ ಇದ್ದರೆಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಇವರ ಜನ್ಮಸ್ಥಳವನ್ನು ಚೆನ್ನೈ ಸಮೀಪದ ಮೈಲಾಪುರವೆಂದು ಸ್ಪಷ್ಟವಾಗಿ ಗುರುತಿಸಲಾಗಿದೆ. ಇದಕ್ಕೆ ಆಧಾರವಾದರೂ ತಿರುವಳ್ಳುವರಿಗಾಗಿ ಕಟ್ಟಿಸಿದ ಪ್ರಾಚೀನ ದೇವಾಲಯ. ಸಮುದ್ರದ ತೀರದಲ್ಲಿರುವ ಈ ಊರು ಹಲವು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿತ್ತು. ಸಂಶೋಧಕರ ಪ್ರಕಾರ ಬೇರೆ ಬೇರೆ ಸ್ಥಳಗಳಿಂದ ಬಂದ ಧರ್ಮಪ್ರಚಾರಕರು, ತತ್ವಜ್ಞಾನಿಗಳೊಡನೆ ತಿರುವಳ್ಳುವರ್ ಚರ್ಚಿಸುತ್ತಾ ಕಾಲ ಕಳೆದಿರಬಹುದು. ಇವರ ದಾಂಪತ್ಯ ಜೀವನವು ಅತ್ಯಂತ ಸಂತೃಪ್ತಿದಾಯಕವಾಗಿತ್ತು. ವಾಸುಕಿ ಇವರ ಧರ್ಮಪತ್ನಿ; ಪತಿಗೆ ತಕ್ಕ ಸತಿಯಾಗಿ ದಾಂಪತ್ಯ ಬದುಕಿಗೆ ಅರ್ಥ ತುಂಬಿದವರು. ತಿರುವಳ್ಳುವರ್ ತಮಿಳುನಾಡಿನ 'ವಳ್ಳುವರ್' ಎಂಬ ವೃತ್ತಿಗೆ ಸೇರಿದವರು. 'ವಳ್ಳುವರ್' ಎಂಬ ಶಬ್ದಕ್ಕೆ 'ವಲ್ಲಭ', 'ಅಮಾತ್ಯ', 'ದಂಡನಾಯಕ' ಎಂಬ ಅರ್ಥವೂ ಇದೆ. ಸಾಮಾನ್ಯ ಅರ್ಥದಲ್ಲಿ 'ವಳ್ಳುವರ್' ಎಂದರೆ ನೇಕಾರ ವೃತ್ತಿಯನ್ನು ಮಾಡುವವರು ಎಂದು ಅರ್ಥ. ಕೌಟಿಲ್ಯನ 'ಅರ್ಥಶಾಸ್ತ್ರ' ಮತ್ತು 'ಮೃಚ್ಛಕಟಿಕ'ಗಳಲ್ಲಿ ರಾಜನ

ಆಸ್ಥಾನದೊಳಗೆ ಆದೇಶ, ಶಾಸನಗಳನ್ನು ಜನರೆದುರು ಸಾರುವ ವೃತ್ತಿ ನಿರ್ವಾಹಕ ಎಂದು ಇವರನ್ನು ಬಿಂಬಿಸಿದೆ. ಸಾಮಾನ್ಯವಾಗಿ ಅಂತಹ ವೃತ್ತಿಗೆ ತಳಸಮುದಾಯದವರನ್ನೇ ನೇಮಕ ಮಾಡಿಕೊಳ್ಳಲಾಗುತಿತ್ತು. ಈ ಹಿನ್ನೆಲೆಯಲ್ಲಿ ತಿರುವಳ್ಳುವರ್ ಸಮಾಜದ ತಳಸಮುದಾಯಕ್ಕೆ ಸೇರಿದ ವ್ಯಕ್ತಿ ಎಂದು ಭಾವಿಸಬಹುದು. ಇವರ ಜೀವನ ಮತ್ತು ದಾಂಪತ್ಯ ಕುರಿತಂತೆ ಹಲವು ಪವಾಡದಂಥ ಕಥೆಗಳಿವೆ. ಅವುಗಳ ಸತ್ಯಾಸತ್ಯತೆಯನ್ನು ನಾವು ಒರೆಗೆ ಹಚ್ಚುವ ಅವಶ್ಯಕತೆ ಇಲ್ಲ. ಏಕೆಂದರೆ, ಮಹಾಪುರುಷರ ಬದುಕಿನ ಸುತ್ತ ಇಂತಹ ಪವಾಡದ ಕಥೆಗಳನ್ನು ಜನರು ಹೆಣೆಯುವುದು ಸರ್ವೇಸಾಮಾನ್ಯ ಸಂಗತಿ. ಇವರು ರಚಿಸಿದ 'ತಿರುಕ್ಕುಱಳ್' ವಿಶ್ವಮಾನವ ಸಂದೇಶವನ್ನು ಸಾರುವ ಆದ್ಯಕೃತಿ. ಈ ಕೃತಿಯೊಳಗೆ 'ಕುಱಳ್‌ವೆಣ್ಬಾ' ಎಂಬ ಛಂದಸ್ಸಿನ ಪ್ರಯೋಗವಿದೆ. ದ್ರಾವಿಡ ಛಂದೋಜಾತಿಯೊಳಗೆ 'ಕುಱಳ್' ಅತ್ಯಂತ ಚಿಕ್ಕ ಗಾತ್ರದ್ದು. ವಿಶ್ವ ಸಂದೇಶವನ್ನು ಸಾರಬೇಕಾದರೆ ಚುಟುಕು ಮಾದರಿಯ ಪದ್ಯಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು. 'ತಿರುಕ್ಕುಱಳ್'ನ ಸಂದೇಶಗಳು ಇಂದು ಜನಪ್ರಿಯಗೊಳ್ಳಲು ಆ ಗ್ರಂಥದ ಸ್ವರೂಪವೇ ಮೂಲ ಕಾರಣ. ಈ ಮಹಾಕವಿಯನ್ನು ತಮಿಳಿನ ಹಲವು ಕವಿಗಳು ಮನದುಂಬಿ ಸ್ಮರಿಸಿ ವಂದಿಸಿದ್ದಾರೆ. ಸಂಬಪರಣರ್ ಎಂಬ ಜ್ಞಾನಿ ಕುಱಳ್‌ನ ಬಗ್ಗೆ ಹೇಳುವುದು ಹೀಗೆ: "ಮಹಾವಿಷ್ಣುವು ವಾಮನನಾಗಿ ಬಂದು ತನ್ನ ಎರಡು ಅಡಿಗಳಿಂದ ಲೋಕವನ್ನೆಲ್ಲ ಅಳೆದ; ಜ್ಞಾನಿ ತಿರುವಳ್ಳುವರ್ ತಮ್ಮ ಕುಱಳ್‌ವೆಣ್ಬಾ ಎಂಬ ದ್ವಿಪದಗಳಿಂದ ಲೋಕದ ಅಂತರಂಗವನ್ನೆಲ್ಲ ಸಮವಾಗಿ ಅಳೆದಿದ್ದಾರೆ. ಸಾಸಿವೆಯನ್ನು ಕೊರೆದು ಏಳು ಕಡಲನ್ನು ಹುದುಗಿಸುವ ಸಾಹಸ ತಿರುವಳ್ಳುವರ್ ಅವರದು". ಹೀಗೆ ನೀತಿಬೋಧನೆಯ ಮೂಲಕ ಜಗತ್‌ಪ್ರಸಿದ್ಧಿ ಕಂಡ 'ತಿರುಕ್ಕುಱಳ್' ವಿಶ್ವಸಾಹಿತ್ಯದಲ್ಲಿ ಅಗ್ರಮಾನ್ಯ ಸ್ಥಾನವನ್ನು ಅಲಂಕರಿಸಿದೆ.

ತಮಿಳು ಮತ್ತು ಕನ್ನಡ ಸಹೋದರ ಭಾಷೆಗಳು. ಪ್ರಾಚೀನ ಕಾಲದಿಂದಲೂ ಕೊಡುಕೊಳ್ಳುವಿಕೆ ಈ ಭಾಷೆಗಳೊಳಗೆ ಸಹಜವಾಗಿ ಆಗಿದೆ. ತಮಿಳಿನ ಕುಱಳ್‌ನಂತೆ ತ್ರಿಪದಿ, ವಚನ, ಗಾದೆ ಮೊದಲಾದ ಕನ್ನಡ ದೇಸೀ ಛಂದಸ್ಸು ಮಾನ್ಯತೆ ಗಳಿಸಿವೆ. ಈ ಹಿನ್ನೆಲೆಯಲ್ಲಿ ಸರ್ವಜ್ಞನ ತ್ರಿಪದಿಗಳು ಹಾಗೂ ತಿರುವಳ್ಳುವರು ಅವರ ಕುಱಳ್‌ಗಳು ಸಮಾನ ಅಂಶಗಳನ್ನು ಒಳಗೊಂಡಿವೆ. ಸರ್ವಜ್ಞನ ಕೆಲವು ವಿಚಾರಗಳನ್ನು ತಿಳಿದು ಮುಂದೆ ಸಾಗೋಣ. ಕನ್ನಡ ತ್ರಿಪದಿ ಎಂದೊಡನೆ ನಮಗೆ ಥಟ್ಟನೆ ನೆನಪಾಗುವುದು ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ. ಅನಂತರ ತ್ರಿಪದಿಗಳನ್ನು ಮುನ್ನೆಲೆಗೆ ತಂದವರು ಮಹಾದೇವಿ ಅಕ್ಕ. ಇವಳ 'ಯೋಗಾಂಗತ್ರಿವಿಧಿ' ತ್ರಿಪದಿಯ ಜಾಡನ್ನು ಮತ್ತಷ್ಟು ವಿಸ್ತರಿಸುವ ಕೆಲಸ ಮಾಡಿತು. ಆ ವೇಳೆಗಾಗಲೇ ನಾಗವರ್ಮ ಮೊದಲಾದ ಛಂದೋಕಾರರು ತ್ರಿಪದಿಯ ಗುಣಲಕ್ಷಣಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಅನಂತರದ ಅವಧಿಯಲ್ಲಿ ಬಂದ ಸರ್ವಜ್ಞನು ತ್ರಿಪದಿಗಳಿಗೆ ವಿಶೇಷ ಮನ್ನಣೆಯಿತ್ತು ತನ್ನ ಸಂದೇಶಗಳನ್ನೆಲ್ಲ ಈ ತ್ರಿಪದಿಯ ಮೂಲಕವೇ

ಸಾರಿದ. ಇಂದಿಗೂ ಸರ್ವಜ್ಞನ ವಚನಗಳಷ್ಟು ಖ್ಯಾತಿ ಪಡೆದ ಸಹಜ ಸಾಹಿತ್ಯ ಕನ್ನಡದಲ್ಲಿ ಮತ್ತೊಂದಿಲ್ಲ. ಈತನ ಕಾಲ, ದೇಶ, ವಿಚಾರಗಳ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಸರ್ವಜ್ಞನ ಹುಟ್ಟೂರು 'ಅಬ್ಬಲೂರು' ಎಂದು ಅಂದಾಜಿಸಲಾಗಿದೆ. ಈ ಹಿಂದೆ ಅಬ್ಬಲೂರು ಜೈನರ ಪ್ರಸಿದ್ಧ ಕ್ಷೇತ್ರವಾಗಿತ್ತು. ಏಕಾಂತ ರಾಮಯ್ಯನ 'ಅಬಲೂರು ಚರಿತೆ' ಜೈನರಿಗೂ ಶೈವರಿಗೂ ಉಂಟಾದ ಧರ್ಮ ಯುದ್ಧದ ಪ್ರಸಂಗವನ್ನು ಚಿತ್ರಿಸಿದೆ. ಇದೇ ಸರ್ವಜ್ಞನ ಹುಟ್ಟೂರು. ಅದೊಂದು ಧರ್ಮಜಾಗೃತಿಯ ಸ್ಥಳವೆಂದು ಇದರಿಂದ ಗೊತ್ತಾಗುತ್ತದೆ. ಇನ್ನೂ ಕೆಲವರು ಈತ ಧಾರವಾಡ ಸಮೀಪದ 'ಮಾಸೂರು' ಇವರ ಜನ್ಮಸ್ಥಳವೆಂದು ಭಾವಿಸುತ್ತಾರೆ. ಬಯಲುಸೀಮೆಯಲ್ಲಿ ಜನಿಸಿದ ಈತ ಕಾಲ ಕಳೆದಂತೆ ಮಲೆನಾಡ ಸೀಮೆಯಲ್ಲೂ ಸಂಚರಿಸಿ ಅನೇಕ ಅನುಭವಗಳನ್ನು ತನ್ನದಾಗಿಸಿಕೊಂಡನು. ಈತನ ಕಾಲವನ್ನು ಉತ್ತಂಗಿ ಚನ್ನಪ್ಪನವರು ಕ್ರಿ.ಶ. 1700ಕ್ಕೂ ಹಿಂದೆ ಎಂದು ಅಭಿಪ್ರಾಯ ಪಡುತ್ತಾರೆ. ಈತ ತನ್ನ ಆನುಭಾವಿಕ ಅಭಿವ್ಯಕ್ತಿಗಳನ್ನು ತ್ರಿಪದಿಗಳಲ್ಲಿ ಮೂಡಿಸಿರುವುದು ವಿಶೇಷ ಸಂಗತಿ. ಸರ್ವಜ್ಞನನ್ನು ತಮಿಳಿನ ತಿರುವಳ್ಳುವರಿಗೂ, ತೆಲುಗಿನ ವೇಮನನಿಗೂ ಹೋಲಿಸಿ ಹೇಳುವುದುಂಟು. ಭಾಷಾದೃಷ್ಟಿಯಿಂದ ಸರ್ವಜ್ಞನ ತ್ರಿಪದಿಗಳು ಹಳಗನ್ನಡದ ಪ್ರಯೋಗಗಳನ್ನು ಒಳಗೊಂಡಂತೆ ಕಾಣುವುದಿಲ್ಲ. ಮಧ್ಯಕಾಲೀನ ಕರ್ನಾಟಕದ ಸಹಜ ಆಡುನುಡಿ ಈತನ ತ್ರಿಪದಿಗಳಲ್ಲಿ ಪಡಿಮೂಡಿವೆ. 'ತಿರುಕ್ಕುಱಳ್'ನ 'ಕುಱಳ್'ಗಳು ಸಹಜ ಭಾಷೆಗೆ ಹತ್ತಿರವಿರುವುದರಿಂದ ಅದರಲ್ಲಿ ಸಾಹಿತ್ಯದ ಸೌರಭವನ್ನು ಸುಲಭವಾಗಿ ಗ್ರಹಿಸಬಹುದು. ಕವಿರಾಜಮಾರ್ಗಕಾರನು ಹೇಳುವಂತೆ "ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ಆ ನಾಡವರ್ಗಳ್" ಎಂಬ ಮಾತು ಈ ಇಬ್ಬರು ಕವಿಗಳ ಸಾಹಿತ್ಯದಿಂದ ಮತ್ತೊಮ್ಮೆ ಖಚಿತವಾಗುತ್ತದೆ. ಸರ್ವಜ್ಞನ ತ್ರಿಪದಿಗಳ ಸಂಖ್ಯೆ ಸುಮಾರು ಒಂದು ಸಾವಿರವೆಂದು ಅಂದಾಜಿದೆ. ಈ ಎಲ್ಲಾ ವಚನಗಳ ಕರ್ತೃ ಸರ್ವಜ್ಞನೇ ಎಂಬ ಅನುಮಾನ ಸಹಜವಾಗಿ ಮೂಡಿದೆ. ಈ ಸರ್ವಜ್ಞನು ತನ್ನ ವಚನಗಳನ್ನು 'ಪಾರಮಾರ್ಥ'ವೆಂದು ಹೆಸರಿಸಿರುವುದಲ್ಲದೆ 'ಪಾರಮಾರ್ಥಿಕೆ' ಎಂದು ತನ್ನ ಗ್ರಂಥಕ್ಕೂ ನಾಮಕರಣ ಮಾಡಿದ್ದಾನೆ. ಸರ್ವಜ್ಞನ ಮುಕ್ಕಾಲುಪಾಲು ವಚನಗಳು ಭಕ್ತಿ, ಜ್ಞಾನ, ವೈರಾಗ್ಯ ಮತ್ತು ನೀತಿಗಳಿಗೆ ಸಂಬಂಧಿಸಿವೆ.

ಸರ್ವಜ್ಞ ಮತ್ತು ತಿರುವಳ್ಳುವರರ ಕೃತಿಗಳನ್ನು ತುಲನೆ ಮಾಡಿ ನೋಡಿದಾಗ ಕೆಲವೊಂದು ಸಾಮರಸ್ಯದ ಅಂಶಗಳು ಗೋಚರಿಸುತ್ತವೆ. ಇವರ ಆನುಭಾವಿಕ ಚಿಂತನೆಗಳಲ್ಲಿ ಆಯಾ ಕಾಲದ ಅನುಭವ, ಹೊಸ ವಿಚಾರ, ಗಾದೆ ಮೊದಲಾದವುಗಳನ್ನು ಅಡಗಿಸಲಾಗಿದೆ. ಇನ್ನೊಂದು ಅಂಶ ಅನುಕೂಲ, ಅನುಕರಣ ಅಂದರೆ ಗುಣಸ್ವಭಾವಗಳಿಗೆ ವಿರೋಧವಿದ್ದರೂ ತಾವು ಮಾಡುವ ಕಾರ್ಯದಲ್ಲಿ ಪ್ರಾಮಾಣಿಕತೆ ಇದ್ದರೆ ಅಂತಹ ಹೇಳಿಕೆಗಳಿಗೆ ಒಪ್ಪಿಗೆಯ ಮುದ್ರೆಯನ್ನು ಇಬ್ಬರೂ ಕವಿಗಳು ಒತ್ತಿದ್ದಾರೆ. ತಾವು ಕಂಡದನ್ನು ಹಾಡಿ ಗುಣಾವಗುಣಗಳನ್ನು ಟೀಕಿಸದೆ ಕೇವಲ ಮತ, ಧರ್ಮ, ದ್ವೇಷಗಳನ್ನು ಹೊರಡಿಸುವ ಕಲ್ಪನೆಗೆ ಇವರು ಕಟು

ಟೀಕೆಯನ್ನು ಮಾಡಿದ್ದಾರೆ. ಇವರ ಎಲ್ಲ ಪದ್ಯಗಳನ್ನೂ ನೈತಿಕ, ಲೌಕಿಕ ಮತ್ತು ಪಾರಮಾರ್ಥಿಕವೆಂದು ಮೂರು ನೆಲೆಯಲ್ಲಿ ಕಾಣಬಹುದು. ಹಾಗೆಯೇ ಕುಱಳ್ ಮತ್ತು ತ್ರಿಪದಿಗಳನ್ನು ಅವಲೋಕಿಸಿದಾಗ ಅಲ್ಲಿ ಪ್ರಶ್ನಾ ಪದ್ಧತಿ, ಉದ್ಗಾರ, ನ್ಯಾಯಚಿಂತನೆ, ಗದ್ಯ ಹಾಗೂ ವಿವಿಧ ಪದ್ಧತಿಗಳೆಂಬ ಐದು ಭೇದಗಳನ್ನು ಗುರುತಿಸಲು ಅವಕಾಶಗಳಿವೆ. ಈ ಪಂಚರಾಶಿಗಳಿಗೆ ನಾನತ್ವ, ಲಘುತ್ವ, ತಿಳಿ, ಮಾಧುರ್ಯ, ಅವಲೋಕನಗಳೆಂಬ ಪಂಚ ಲಕ್ಷಣಗಳಿವೆ. ಪಂಚರಾಶಿಗಳ ಲಕ್ಷಣವನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು.

ಪ್ರಶ್ನಾ ಪದ್ಧತಿ ಎಂದರೆ, ಸತ್ಯಾರ್ಥವನ್ನು ಸ್ಪಷ್ಟಮಾಡಿಕೊಳ್ಳಲು ಇರುವ ಸಾಧಾರಣ ಪ್ರಯೋಗ. ಉದ್ಗಾರ ಪದ್ಧತಿ ಎಂದರೆ, ಬುದ್ಧಿವಾದ, ಭಿನ್ನ ಪ್ರೇರಣೆ ಮುಂತಾದ ಭಾವ ಸಂದರ್ಭಗಳಲ್ಲಿ ಪ್ರಯೋಗ ಆಗುವಂಥದ್ದು. ನ್ಯಾಯ ಪದ್ಧತಿ ಎಂದರೆ, ಯಾವುದೊಂದು ಸತ್ಯಾರ್ಥವನ್ನು ದೃಷ್ಟಾಂತದಿಂದ ಸಿದ್ಧಾಂತ ಪಡಿಸುವುದಕ್ಕೆ ಪ್ರಯೋಗವಾಗುವುದು. ಗದ್ಯ ಪದ್ಧತಿ ಎಂದರೆ, ಪದ್ಯ, ಪ್ರಾಸ, ಯತಿ ಮುಂತಾದವುಗಳನ್ನು ಬಿಟ್ಟು ಉಳಿದ ವಿಷಯಗಳಲ್ಲಿ ಗದ್ಯ ಭಾಷೆಯನ್ನೇ ಹೋಲುವವು. ವಿವಿಧ ಪದ್ಧತಿ ಎಂದರೆ, ಸಾಧಾರಣವಾಗಿ ಇತರ ಗುಂಪಿಗೆ ಸೇರದ ಪದ್ಯಗಳೆಲ್ಲ ಇದರೊಳಗೆ ಸಮಾವೇಶಗೊಳ್ಳುತ್ತವೆ. ಸತ್ಯಾರ್ಥವನ್ನು ಸುಲಭವಾಗಿ ಸ್ವೀಕರಿಸುವಂತೆ ಮನಸ್ಸನ್ನು ಪೂರ್ವಸಿದ್ಧತೆಗೊಳಿಸುವುದೇ ಇದರ ಮುಖ್ಯ ಉದ್ದೇಶ. ಚತುರೋಕ್ತಿ ಮತ್ತು ಅನುಭವೋಕ್ತಿಗಳೆಲ್ಲ ಇವರ ವಚನಗಳಲ್ಲಿ ಸೇರಿಕೊಂಡಿವೆ. ಇವರ ಸ್ಮರಣಶಕ್ತಿ, ಅವಲೋಕನಶಕ್ತಿ, ಸಂಗ್ರಹಶಕ್ತಿ, ನಿರ್ಣಯಶಕ್ತಿ ಮೊದಲಾದವುಗಳನ್ನು ಇವರ ಅಭಿವ್ಯಕ್ತಿಗಳಲ್ಲಿ ವಿಶೇಷವಾಗಿ ಕಾಣಬಹುದು. ಹೀಗೆ ಸರ್ವ ವಿಧಗಳಲ್ಲಿಯೂ ವಿಭಿನ್ನ ರೀತಿಯಲ್ಲಿ ಬಿಂಬಿಸಿಕೊಳ್ಳುವ ಕುಱಳ್ ಮತ್ತು ತ್ರಿಪದಿಗಳು ಎಲ್ಲರ ಆಸಕ್ತಿಗೆ ಕಾರಣವಾಗಿವೆ. ಪ್ರಸ್ತುತ ತಿರುವಳ್ಳುವರ್ ಮತ್ತು ಸರ್ವಜ್ಞನ ಆನುಭಾವಿಕ ನುಡಿಗಳಲ್ಲಿ ಧರ್ಮ ಸಂಬಂಧಿ ಚಿಂತನೆಗಳನ್ನು ನೋಡೋಣ. ಧರ್ಮ ಎಂದರೇನು? ಯಾವುದು ಧಾರ್ಮಿಕ ಆಚರಣೆ? ಮನುಷ್ಯ ಸಂಬಂಧ ಮತ್ತು ಧಾರ್ಮಿಕ ಅಭಿವ್ಯಕ್ತಿಗಳ ಫಲಶ್ರುತಿ ಎಂತಹದ್ದು ಎಂಬುದನ್ನು ಈ ಚೇತನಗಳ ಮಾತಿನ ಹಿನ್ನೆಲೆಯಲ್ಲಿ ಪರಿಶೀಲಿಸೋಣ.

**ಧರ್ಮ** : ಧರ್ಮ ಎಂಬುದಕ್ಕೆ ವಿಶಾಲ ಅರ್ಥವಿದೆ. ಪ್ರಸ್ತುತ 'ಮತ' ಎಂಬ ಸಂಕ್ಷಿಪ್ತ ವ್ಯಾಪ್ತಿಗೆ ಧರ್ಮವನ್ನು ಅಂಟಿಸಲಾಗಿದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮ ಎಂಬ ಸಾಮಾನ್ಯ ಹೇಳಿಕೆಯ ಹಿನ್ನೆಲೆಯಲ್ಲಿ ಇದರ ಅರ್ಥವ್ಯಾಪ್ತಿಯನ್ನು ಗುರುತಿಸುತ್ತಿದ್ದೇವೆ. ವಾಸ್ತವದಲ್ಲಿ ಅದು ಹಾಗಲ್ಲ! ಧರ್ಮ ಎಂಬ ಪದವು ಶ್ರದ್ಧೆಯಿಂದ ಆಚರಿಸು, ಒಟ್ಟಿಗೆ ಬಂಧಿಸು, ಒಂದೆಡೆ ಸೇರು ಎಂಬಿತ್ಯಾದಿ ವಿಶಾಲ ಅರ್ಥವನ್ನು ಸ್ಫುರಿಸುತ್ತದೆ. ಹಾಗಾದರೆ ಬಂಧಿಸುವುದು, ಸೇರಿಸುವುದಾದರೂ ಏನನ್ನು? ಇಲ್ಲಿ ಧರ್ಮ ಎಂಬುದನ್ನು ಮಾನಸಿಕ ಅಭಿವ್ಯಕ್ತಿ ಎಂದು ಭಾವಿಸಬೇಕು. ಆ ಅಭಿವ್ಯಕ್ತಿಯು ಉದಾತ್ತ ಚಿಂತನೆಗಳನ್ನು ಒಳಗೊಂಡಿರಬೇಕು. ಅಂಥ ಹಿನ್ನೆಲೆಯ ಕಲ್ಪನೆಗಳೇ 'ಧರ್ಮ' ಎಂದು ಕರೆಯಿಸಿಕೊಳ್ಳುತ್ತವೆ.

ತಿರುವಳ್ಳುವರ್ ಮತ್ತು ಸರ್ವಜ್ಞರು ಇಂಥದ್ದೇ ಧರ್ಮಕ್ಕೆ ಸಂಬಂಧಿಸಿದವರೆಂದು ಬೇಲಿ ಹಾಕಿ ನಿರ್ದಿಷ್ಟಪಡಿಸುವಂತಿಲ್ಲ. ಈ ಹಿಂದೆ ಸೂಚಿಸಿದಂತೆ ಅವರು ಉದಾತ್ತ ಕಲ್ಪನೆ ಚಿಂತನೆಗಳನ್ನು ವ್ಯಕ್ತಪಡಿಸುವ ವಿಶ್ವಧರ್ಮದ ಬೋಧಕರು. ಈ ಹಿನ್ನೆಲೆಯಲ್ಲಿ ತಿರಿವಳ್ಳುವರ್ ಮತ್ತು ಸರ್ವಜ್ಞರು ಬಹು ಎತ್ತರದ ಸ್ಥಾನವನ್ನು ಅಲಂಕರಿಸಿದ್ದಾರೆ. ಜಾಗತಿಕ ಸ್ತರದಲ್ಲಿ ಸ್ವತಂತ್ರ ಚಿಂತನೆಯ ಅಭಿವ್ಯಕ್ತಿಗಳು ಸಾಮಾನ್ಯ ಸಂಗತಿ. ಆದರೆ ಧರ್ಮದ ಹೆಸರಿನಲ್ಲಿ ಸ್ವಾತಂತ್ರ್ಯವನ್ನು ಬೋಧಿಸಿದ ಕೀರ್ತಿ ತಿರುವಳ್ಳುವರಿಗೆ ಸಲ್ಲುತ್ತದೆ. ಕ್ರಿ.ಶ.ದ ಆರಂಭದಲ್ಲಿಯೇ ತಿರುವಳ್ಳೂವರ್ ಸ್ವಾತಂತ್ರ್ಯವೇ ಧರ್ಮ, ಪರೋಪಕಾರವೇ ಧರ್ಮ, ನೆಮ್ಮದಿ, ಶಾಂತಿಯ ಜೀವನವೇ ಧರ್ಮ, ಅಹಿಂಸೆಯೇ ಧರ್ಮ ಎಂಬ ತಾತ್ವಿಕ ಸಂದೇಶಗಳನ್ನು ತಮ್ಮ ಕುಱಳ್‌ಗಳಲ್ಲಿ ಸಾರಿದ್ದಾರೆ. ಸರ್ವಜ್ಞನ ವಚನಗಳಲ್ಲಿಯೂ ಇದೇ ರೀತಿಯ ಚಿಂತನೆಗಳು ಪಡಿಮೂಡಿವೆ. ನಾವಿಲ್ಲಿ ಒಂದು ಅಂಶವನ್ನು ಗಮನಿಸಬೇಕು. ತಿರುವಳ್ಳುವರ್ ಕ್ರಿ.ಶ.2ನೇ ಶತಮಾನದಲ್ಲಿಯೇ ಉದಾತ್ತ ಕಲ್ಪನೆಗಳ ಸ್ವಾತಂತ್ರ್ಯದ ಆಶಯವನ್ನು ಸಾರಿದರೆ, 17ನೆಯ ಶತಮಾನದ ಸರ್ವಜ್ಞನೂ ಇದೇ ಆಶಯಗಳನ್ನು ವ್ಯಕ್ತಪಡಿಸಿದ್ದಾನೆ. ಅಂದರೆ, ಅಷ್ಟು ಶತಮಾನಗಳಲ್ಲಿಯೂ ನಿಜವಾದ ಧರ್ಮ ಅಥವಾ ಸ್ವಾತಂತ್ರ್ಯದ ಚಿಂತನೆ ಉದ್ಭವಿಸಿತೇ? ಇಲ್ಲ. ಒಂದು ವೇಳೆ ಆ ಚಿಂತನೆಗಳು ಸಾಕಾರಗೊಂಡಿದ್ದರೆ, ಈ ಕವಿಗಳು ಅದನ್ನು ಮತ್ತೆ ಮತ್ತೆ ಹುಡುಕುವ ಅವಶ್ಯಕತೆ ಇರಲಿಲ್ಲ. ಇಂದಿಗಾದರೂ ಆ ಇಬ್ಬರೂ ಕವಿಗಳು ಹೇಳುವ ಧರ್ಮ ಚಿಂತನೆಯ ಸಾರ ಸಿದ್ಧಿಸಿದೆಯೇ? ಇಲ್ಲ. ಅಂದ ಮೇಲೆ ಆ ಇಬ್ಬರೂ ಕವಿಗಳು ಹೇಳುವ ತತ್ವಚಿಂತನೆಗಳನ್ನು ನಾವು ಮರುಮನನ ಮತ್ತು ಮರು ಆಚರಣೆ ಮಾಡಬೇಕೆಂಬುದು ಸ್ಪಷ್ಟವಾಗುತ್ತದೆ. ಧರ್ಮದಲ್ಲಿ ಮೊದಲ ಸ್ಥಾನವನ್ನು ಅಲಂಕರಿಸುವುದು ದೇವರು. ಆ ದೇವತಾ ಪರಿಕಲ್ಪನೆಯನ್ನು ಈ ಕವಿಗಳ ಮಾತಿನ ಹಿನ್ನೆಲೆಯಲ್ಲಿ ತಿಳಿಯೋಣ.

'ದೇವರು' ಎಂಬುದು ಅವ್ಯಕ್ತ, ಅಗೋಚರ ಶಕ್ತಿ. ನಂಬಿದವರಿಗೆ ಗೋಚರ, ನಂಬದವರಿಗೆ ಭ್ರಮೆ. ಹೀಗೆ ಜಗತ್ತಿನ ಜನರ ಪಾಲಿಗೆ ಇದೊಂದು ದೊಡ್ಡ ಪ್ರೇರಕಶಕ್ತಿ. ಈ ಬ್ರಹ್ಮಾಂಡದ ಕರ್ತ. ಈ ಶಕ್ತಿಯ ಉಪಾಸನೆ ಎಷ್ಟು ಪುರಾತನ ಎಂದು ಹೇಳುವುದು ಕಷ್ಟ. ಭಾರತೀಯರಾದರೂ ಕಲ್ಲು, ಮರ, ಗಾಳಿ, ಬೆಳಕುಗಳೆಂಬ ಪ್ರಾಕೃತಿಕ ಶಕ್ತಿಗಳನ್ನು ದೈವವೆಂದು ನಂಬಿದ್ದಾರೆ. ತಿರುವಳ್ಳುವರ್ ತಮ್ಮ ಕೃತಿಯ ಮೊದಲನೆಯ ಅಧ್ಯಾಯವನ್ನು 'ಕಡವುಳ್ ವಾೞ್ತು' ಅಥವಾ ದೈವ ನಮನ ಎಂದು ಕರೆದಿದ್ದಾರೆ.

> ಅಕಾರವೇ ಮೊದಲು ಅಕ್ಷರದೊಳು ಆದಿ
> ಭಗವಂತನಿರುವಂತೆ ಮೊದಲ್ಗೆ ಧರಣಿಯೊಳು.

A is the starting point of the world of sound: Even so is the Ancient one Supreme the starting-point of all that exists.

ಅಂದರೆ ಅಕ್ಷರಗಳಲ್ಲಿ 'ಅ'ಕಾರವೇ ಮೊದಲಾದಂತೆ ಧರಣಿಯಲ್ಲಿ ದೈವವೇ ಮೊದಲು. ಈ ಮಾತುಗಳು ದೈವದ ಅಸ್ತಿತ್ವವನ್ನು ಕುರಿತಾಗಿದೆ. ಅಂದರೆ ತಿರುವಳ್ಳುವರ್ ಬ್ರಹ್ಮಾಂಡದ ಆದಿ, ಸೃಷ್ಟಿಯ ಆದಿ, ಸ್ಥಿತಿಯ ಆದಿಯೂ ದೈವವೇ ಎಂದು ಗುರುತಿಸಿದ್ದಾರೆ.

ಧರ್ಮಸ್ವರೂಪಿ ಭಗವಂತನ ಚರಣಯುಗಳವ ಗ್ರಹಿಸದೆ
ಕರ್ಮಸಾಗರದಲಿ ಈಸುವುದರಿದು.

The stormy seas of wealth and sense delights cannot be traversed except by those who cling to the feet of the Sage who is the Ocean of Righteousness.

ಅಂದರೆ ಧರ್ಮಸ್ವರೂಪಿಯಾದ ದೇವರ ಚರಣವನ್ನೂ ಅರಿಯದೆ ಭವದ ಜೀವಿಗಳಾದ ನಾವುಗಳು ಬದುಕನ್ನು ಸಾಗಿಸುವುದು ಕಷ್ಟಕರ ಎಂದರ್ಥ. ಕವಿ ಇಲ್ಲಿ ಮಾನವನ ಎಲ್ಲ ಕಾರ್ಯಗಳಿಗೂ ಕಾರಕನಾದುದು ದೈವವೇ ಎಂದು ಪ್ರತಿಪಾದಿಸಿದ್ದಾರೆ. ಕವಿಯ ದೃಷ್ಟಿಯಲ್ಲಿ ದೈವವು ಅಷ್ಟಗುಣಸಂಪನ್ನನಾಗಿರಬೇಕು. ಒಂದುವೇಳೆ ಆತನ ಚರಣಕಮಲಗಳಿಗೆ ಎರಗದಿದ್ದರೆ ನಮ್ಮ ಇಂದ್ರಿಯಗಳು ಇರುವುದೇ ವ್ಯರ್ಥ ಎಂದಿದ್ದಾರೆ. ಅಂದರೆ, ದೈವದ ಅನುಭವವು ನಮ್ಮ ಇಂದ್ರಿಯಗಳಿಗೆ ತಾಗುವಂತಿರಬೇಕು. ಪಂಚೇಂದ್ರಿಯಗಳ ಮೂಲಕ ದೈವತ್ವದ ಅರಿವು ಪಡೆಯುವುದು ನಿಜವಾದ ಭಕ್ತಿ, ಆಚರಣೆ ಎಂದು ತಿಳಿದು ಬರುತ್ತದೆ. ಯಾವಾಗ ಇಂದ್ರಿಯಗಮ್ಯ ದೈವದ ಅನುಭವವನ್ನು ಪಡೆಯುತ್ತೇವೆಯೋ ಆಗ ಮನಸ್ಸು ಸ್ವಾತಂತ್ರ್ಯವೆಂಬ ಉದ್ಯಾನದಲ್ಲಿ ಸ್ವಚ್ಛಂದ ಚಲಿಸುತ್ತಿರುತ್ತದೆ. ಅಲ್ಲಿ ಯಾವುದೇ ಅಡ್ಡಿ, ಆತಂಕ, ಸಂಕೋಲೆಗಳು ಇರಲಾರವು. ಮುಕ್ತ ಆಲೋಚನೆ ಮತ್ತು ಪಾರಮಾರ್ಥಿಕ ಸತ್ಯವೇ ಬದುಕಿನ ನಿಗೂಢ ರಹಸ್ಯವಾಗಿ ಕಾಣುತ್ತದೆ. ಈ ಕುರಿತ ಒಂದು ಕುಱಳ್ ಹೀಗಿದೆ;

ಅಂಟದು ಅಜ್ಞಾನವು ಜ್ಞಾನಿಯನು ಭಗವಂತನ
ಸುಜ್ಞಾನದಲಿ ಎಸಗಿದ ಕರ್ಮಫಲದಿ.

Behold the men who sing earnestly the praise of the Lord; they will be freed from the pain-engendering fruits of action both good and evil.

ಇಲ್ಲಿ ಜ್ಞಾನಿಗೆ ಅಜ್ಞಾನದ ಸ್ಪರ್ಶವಾಗಲಾರದು. ಭಗವಂತನ ಸುಜ್ಞಾನದ ತಿಳಿವಿನಿಂದ ಆತನಿಗೆ ಕರ್ಮಫಲದ ಅರಿವು ಉಂಟಾಗುತ್ತದೆ. ತಿರುವಳ್ಳುವರ್ ಆ ಮೂಲಕ ಕರ್ಮಸಿದ್ಧಾಂತದ ಪ್ರತಿಪಾದನೆಯನ್ನು ಮಾಡಿದ್ದಾನೆ. ಅಜ್ಞಾನವೇ ಪಾಪ, ಸುಜ್ಞಾನವೇ ಪುಣ್ಯ ಎಂಬುದು ಇಲ್ಲಿಯ ತಾತ್ಪರ್ಯ. ಆ ಸುಜ್ಞಾನವನ್ನು ಪಡೆಯುವ ಮಾರ್ಗವೇ ಧಾರ್ಮಿಕ ಆಚರಣೆ. ಸತ್ಯಮಾರ್ಗದಲ್ಲಿ ಪಡೆದ ಜ್ಞಾನ ನಿಜವಾದ ಸಂಪಾದನೆ. ಭಕ್ತಿ ಭಂಡಾರಿ ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಪರಿಕಲ್ಪನೆಯೂ ಇದೇ ಚಿಂತನೆಯಲ್ಲಿ ಮೂಡಿಬಂದದ್ದು. ರಾಗದ್ವೇಷ ರಹಿತನಾದ ಭಗವಂತನನ್ನು ಕಾಣಲು ರಾಗದ್ವೇಷದ ಹಾದಿಯೇ ಸುಗಮ. ಯಾವುದೇ ಧರ್ಮದಲ್ಲಿ ಭಗವಂತನೊಂದಿಗಿನ ಅನುಸಂಧಾನಕ್ಕೆ ಅದುವೇ ರಹದಾರಿಯಾಗಬೇಕು. ಆದರೆ ಇಂದು ವಿಶ್ವಮಟ್ಟದಲ್ಲಿ ದೈವವನ್ನು ಸಾವು, ನೋವು, ಸುಲಿಗೆಗಳ ಮೂಲಕ ತಲುಪಬಹುದು ಎಂದು ಬಿಂಬಿಸಲಾಗುತ್ತಿದೆ. ಭಯೋತ್ಪಾದಕರು, ಉಗ್ರಗಾಮಿಗಳು ಅನುಸರಿಸುತ್ತಿರುವ ಮಾರ್ಗವಾದರೂ ಇದೇ:

ಪಾದಾರವಿಂದವ ಸೇರಿದವಗೆ ಅವ ಧರಣಿಯಲಿ
ಕಾದಿರಿಸುವನು ನೀಳ್ಬಾಳ್ವೆಯ.

Behold the man who taketh refuge in the sacred feet of Him who walked on flowers: his days will be many upon the earth.

ಎಂಬಂತೆ ದೈವದ ಮನನದಿಂದ ಭಕ್ತನ ಹೃದಯವು ಎಲ್ಲ ಕಾಲಕ್ಕೂ ಪುಷ್ಪವಾಟಿಯಂತೆ ಮಧುರವೂ ಮೃದುವೂ ಆಗಿರುತ್ತದೆ. ಉಗ್ರತೆಯಿಂದ ಶಾಂತತೆಯೆಡೆಗೆ ಸಾಗಿಸುವ ಪರಿವರ್ತನಕಾರಕ ಶಕ್ತಿಯೇ ದೈವ ಎಂಬುದು ಈ ಮಾತಿನ ತಾತ್ಪರ್ಯ. ಅಂದ ಮೇಲೆ ವಿಶಾಲ ಮನೋಧರ್ಮದ ಸೃಷ್ಟಿ ದೇವರ ಆರಾಧನೆಗೆ ದಾರಿ ಮಾಡಿಕೊಡಬೇಕು. ಅದನ್ನು ಹೊರತುಪಡಿಸಿ ನಿರ್ದಿಷ್ಟವಾಗಿ ದೈವವನ್ನು ಯಾವುದೇ ಸ್ಥಳ, ವ್ಯಕ್ತಿ ಅಥವಾ ಮತಗಳಿಗೆ ಸೀಮಿತಗೊಳಿಸಬಾರದು ಎಂಬ ನಿರ್ಣಯ ತಿರುವಳ್ಳುವರಲ್ಲಿದೆ.

ಸರ್ವಜ್ಞನ ವಚನಗಳಲ್ಲಿ ನಾವು ನೇರವಾಗಿ ಶಿವನ ಸ್ತುತಿಯನ್ನು ಕಾಣಬಹುದು. ಸರ್ವಜ್ಞನ ವಚನಗಳ ಆರಂಭಿಕ ಪದ್ಯವೇ ಗಣೇಶನ ಸ್ತುತಿಯಿಂದ ಆರಂಭಗೊಳ್ಳುತ್ತದೆ. ಸರ್ವಜ್ಞನ ಕಾಲಕ್ಕಾಗಲೇ ಲಿಂಗಾಯತ ಪಂಥವು ಜನಮನವನ್ನು ಗೆದ್ದಿದ್ದರಿಂದ ಬಹುಪಾಲು ಜನರನ್ನು ಬಸವತತ್ತ್ವವು ಆಕರ್ಷಿಸಿತ್ತು. ಸರ್ವಜ್ಞ ತನ್ನ ಒಂದು ವಚನದಲ್ಲಿ ಹೀಗೆ ಹೇಳುತ್ತಾನೆ;

ಕುರುಹು ದೊರೆಯಿತು ದೇಹ ಅರಿವನ್ನರಿಯಿತು ಪ್ರಾಣ
ಹರುವಾಗಿ ಹೋಯ್ತು ಭವನಾಶ ಮುಕ್ತಿಯ
ಇರವು ನಿರವಯವು ಸರ್ವಜ್ಞ,

ಅಂದರೆ, ಭವಿಗಳಿಗೆ ಆತ್ಮಸಾಕ್ಷಾತ್ಕಾರ ಸಿದ್ಧಿಗೊಳ್ಳುವುದು ದೈವದ ಸ್ಪರ್ಶವಾದಾಗ ; ಅದು ಲಿಂಗದೀಕ್ಷೆಯ ಮೂಲಕ ತನಗೆ ಪ್ರಾಪ್ತವಾಯಿತೆಂದು ಕವಿ ಹೇಳಿಕೊಂಡಿದ್ದಾನೆ. ಯಾವಾಗ ದೈವದ ಅನುಗ್ರಹವು ಆಚರಣೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೋ ಆಗ–

ವರುಣದೇವಗೆ ಸಲ್ಲಿಸರು ಪೂಜೆ
ಅನಾವೃಷ್ಟಿಯಲಿ; ಬರಗಾಲ ಬರಲು

Sacrifice will not be offered to the Gods, nor feasts be celebrated on earth, if the heavens should be dried up.

ಇಂತಹ ಭಕ್ತಜ್ಞಾನಿಗೆ ಕುಲವೆಂಬುದು ಇಲ್ಲ. ಅರ್ಥಾತ್ ಯಾವುದೇ ಮತಗಳ ಆಚರಣೆ, ಜಾತಿ ಪರಿಪಾಲನೆ ಅವನ ಬಳಿ ಸುಳಿಯಕೂಡದು. ಹಾಗೆಯೇ ಒಂದು ಉತ್ತಮ ಧರ್ಮಾಚರಣೆಗೆ ಗುರುವಿನ ಅಗತ್ಯ ಖಂಡಿತವಾಗಿಯೂ ಇರುತ್ತದೆ.

(ಮುಂದುವರಿಯುವುದು)

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಸಾವಯವ ಕೃಷಿ ಪದ್ಧತಿಗೆ ಆದ್ಯತೆ ನೀಡಬೇಕು**

ಸಾವಯವ ಕೃಷಿ ಪದ್ಧತಿಗೆ ಆದ್ಯತೆ ನೀಡಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 7ರಂದು ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ವಿ.ಸಿ. ಫಾರಂನಲ್ಲಿ ಆಯೋಜಿಸಿದ್ದ ಕೃಷಿಮೇಳ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕೃಷಿ ಮೇಳದಲ್ಲಿ ಭಾಗಿಯಾಗಿ ರೈತರು ಕೃಷಿ ಕುರಿತಾಗಿ ಹೆಚ್ಚಿನ ಮಾಹಿತಿ ಪಡೆಯಬೇಕು. ದೇಶದಲ್ಲಿ ಕೃಷಿಭೂಮಿ ವಿಸ್ತಾರವಾಗಿದೆ. ರೈತರು ರಾಸಾಯನಿಕ ಗೊಬ್ಬರವನ್ನು ಬಳಸುವ ಕೃಷಿ ಪದ್ಧತಿ ಬಿಟ್ಟು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ಆಧುನಿಕ ತಂತ್ರಜ್ಞಾನಗಳ ಬಳಕೆಯಿಂದ ಹೆಚ್ಚು ಲಾಭ ಪಡೆಯಬಹುದು. ನೀರು ಮತ್ತು ಮಣ್ಣಿನ ಪೋಷಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಹೇಳಿದರು.

ಬೆಂಗಳೂರು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಡಾ. ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು ಕೃಷಿ ಸಂಶೋಧನ ಕೇಂದ್ರಕ್ಕೆ ವಿಶ್ವವಿದ್ಯಾಲಯದ ಮಾನ್ಯತೆ ನೀಡಿ ಕೃಷಿಕರೇ ಹೆಚ್ಚಾಗಿರುವ ಐದು ಜಿಲ್ಲೆಗಳಿಗೆ ಅನುಕೂಲ ಮಾಡಿಕೊಟ್ಟಿರುವ ಸರ್ಕಾರದ ಕೆಲಸ ಉತ್ತಮವಾದದ್ದು. ಈ ಪ್ರದೇಶದ ರೈತರು ಕೃಷಿಯಲ್ಲಿ ತೊಡಗಿದ್ದರೂ ಸಹ ಇಳುವರಿ ಕಡಿಮೆ. ಆದ್ದರಿಂದ ಪ್ರಗತಿಪರ ರೈತರ ಸಂಖ್ಯೆ ಹೆಚ್ಚಾಗಲು ಕೃಷಿ ಸಂಶೋಧಕರು ರೈತರೊಂದಿಗೆ ಸಂಪರ್ಕ ಇಟ್ಟುಕೊಂಡು ಅವರಿಗೆ ತಂತ್ರಜ್ಞಾನದ ಅರಿವು ಮೂಡಿಸಬೇಕು ಎಂದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪಿ.ಎಲ್. ಪಾಟೀಲ್‌ರವರು ಒಂದೇ ತರಹದ ಬೆಳೆ ಬೆಳೆಯುವ ಬದಲು ಏಕದಳ, ದ್ವಿದಳ ಬೆಳೆ ಬೆಳೆಯುವುದು ಸೂಕ್ತ. ಇದರಿಂದ ಮಣ್ಣಿನ ಆರೋಗ್ಯ ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ವಿಷಮುಕ್ತ ಆಹಾರ ಪೂರೈಕೆ ಮಾಡಬಹುದು ಎಂದು ತಿಳಿಸಿದರು.

ಕೃಷಿಗೆ ಸಂಬಧಿಸಿದ ಕಿರು ಹೊತ್ತಿಗೆಗಳನ್ನು ಬಿಡುಗಡೆಗೊಳಿಸಲಾಯಿತು. ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀಮತಿ ಆರ್. ನೆಹಲ್, ಶ್ರೀ ಉಮಾಪತಿ ಶ್ರೀನಿವಾಸಗೌಡ ಉಪಸ್ಥಿತರಿದ್ದರು. ಡಾ. ಜಿ.ಎಂ. ದೇವಗಿರಿ ಸ್ವಾಗತಿಸಿದರು. ಡಾ. ಸಿ. ರಾಮಚಂದ್ರ ಕೃಷಿಮೇಳದ ವರದಿ ಮಂಡಿಸಿದರು. ವಿಶೇಷಾಧಿಕಾರಿಗಳಾದ ಡಾ. ಕೆ.ಎಂ. ಹರಿಣಿಕುಮಾರ್ ವಂದಿಸಿದರು.

**ಹಿರಿಯ ಮುತ್ಸದ್ದಿ ಶ್ರೀ ಶಿವರಾಜ ಪಾಟೀಲ್ ಅಗಲುವಿಕೆಗೆ ಸಂತಾಪ**

ಕೇಂದ್ರದ ಮಾಜಿ ಸಚಿವರು ಹಾಗೂ ಕಾಂಗ್ರೆಸ್ಸಿನ ಹಿರಿಯ ರಾಜಕಾರಣಿಗಳು ಆಗಿದ್ದ ಶ್ರೀ ಶಿವರಾಜ ಪಾಟೀಲರವರು ಡಿಸೆಂಬರ್ 12ರಂದು ದೈವಾಧೀನರಾದುದು ವಿಷಾದದ ಸಂಗತಿ.

ಶ್ರೀ ಶಿವರಾಜ ಪಾಟೀಲರವರು ಮಹಾರಾಷ್ಟ್ರದ ಲಾತೂರ್ ಕ್ಷೇತ್ರದಿಂದ ಸತತವಾಗಿ ಏಳು ಬಾರಿ ವಿಜಯಿಗಳಾಗಿದ್ದ ಜನಪ್ರಿಯ ಧುರೀಣರು. ಲೋಕಸಭೆ ಮತ್ತು ರಾಜ್ಯಸಭೆ ಎರಡು ಕಡೆಗಳಲ್ಲೂ ಛಾಪು ಮೂಡಿಸಿದ್ದ ಪ್ರತಿಭಾನ್ವಿತರು. ಎರಡು ಬಾರಿ ಮಹಾರಾಷ್ಟ್ರದ ವಿಧಾನಸಭಾ ಸದಸ್ಯರೂ ಆಗಿದ್ದರು. ಮಧ್ಯಮ ವರ್ಗದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ದೀರ್ಘಕಾಲದ ರಾಜಕೀಯ ಜೀವನದಲ್ಲಿ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದರು. ಹಲವಾರು ಪ್ರತಿಷ್ಠಿತ ಹುದ್ದೆಗಳನ್ನು ಅಲಂಕರಿಸಿದವರು. 2008ರಲ್ಲಿ ಗೃಹಸಚಿವರಾಗಿದ್ದಾಗ ಕೆಲವು ಭದ್ರತಾಲೋಪಗಳಾದಾಗ ನೈತಿಕ ಹೊಣೆಗಾರಿಕೆಯಿಂದ ರಾಜೀನಾಮೆ ನೀಡಿದ ಸಂವೇದನಾಶೀಲರು. ರಕ್ಷಣಾ ಇಲಾಖೆಯ ರಾಜ್ಯ ಸಚಿವರಾಗಿ, ವಾಣಿಜ್ಯ, ನಾಗರಿಕ ವಿಮಾನಯಾನ, ಬಾಹ್ಯಾಕಾಶ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ಕೇಂದ್ರ ಸರ್ಕಾರದ ಹಲವಾರು ಉನ್ನತ ಸ್ಥಾಯೀಸಮಿತಿಗಳಲ್ಲಿ ಸದಸ್ಯರಾಗಿದ್ದರು. ಲೋಕಸಭೆಯ ಸಭಾಪತಿಗಳೂ ಆಗಿದ್ದರು. ಆಳವಾದ ಪರಿಜ್ಞಾನ, ಪರಿಣತಿ, ಮುನ್ನೋಟಗಳನ್ನು ಹೊಂದಿದ್ದರು; ಸದಾ ಅಧ್ಯಯನಶೀಲರಾಗಿದ್ದರು. ವಿನಯ, ವಿವೇಕಗಳ ಸಾಕಾರಮೂರ್ತಿ, ಅಜಾತಶತ್ರು. ಅತ್ಯುನ್ನತ ಸಂಸದರೆಂಬ ಪುರಸ್ಕಾರಕ್ಕೂ ಪಾತ್ರರಾಗಿದ್ದರು. ರಾಜಕೀಯ ಸೇವಾವಧಿಯ ಕೊನೆಯಲ್ಲಿ ಪಂಜಾಬಿನ ರಾಜ್ಯಪಾಲರೂ ಆಗಿದ್ದರು.

ಶ್ರೀ ಶಿವರಾಜ ಪಾಟೀಲರು ಬೆಂಗಳೂರಿನಲ್ಲಿ ನಡೆದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ ಹಾಗೂ ಸುತ್ತೂರಿನ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಮಠಮಾನ್ಯಗಳು ಹಾಗೂ ಗುರುಹಿರಿಯರ ಬಗೆಗೆ ಅಪಾರ ಗೌರವ ಹೊಂದಿದ್ದರು. ತುಂಬು ಜೀವನ ನಡೆಸಿದವರು. ರಾಜಕೀಯ ಸಜ್ಜನಿಕೆಯ ಅಪರೂಪದ ಉದಾಹರಣೆಯಂತಿದ್ದರು.

ದಿವಂಗತರ ಅಗಲುವಿಕೆಗೆ ಸಂತಾಪವನ್ನು ವ್ಯಕ್ತಪಡಿಸುತ್ತ, ಅವರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬವರ್ಗದವರು ಮತ್ತು ಬಂಧುಬಾಂಧವರಿಗೆ ಈ ಅಗಲಿಕೆಯ ದುಃಖವನ್ನು ಭರಿಸಲು ಭಗವಂತನು ಶಕ್ತಿಯನ್ನು ನೀಡಲೆಂದು ಪರಮಪೂಜ್ಯ ಜಗದ್ಗುರುಗಳವರು ಹಾರೈಸಿದ್ದಾರೆ.

**ಭಾರತ ಸಂತರ ಭವ್ಯ ಪರಂಪರೆ ಹೊಂದಿದ ದೇಶ**

ಭಾರತ ಸಾಧು ಸಂತರ ಭವ್ಯ ಪರಂಪರೆಯನ್ನು ಹೊಂದಿರುವ, ಅಧ್ಯಾತ್ಮಿಕತೆ ತುಂಬಿರುವ ದೇಶವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 13ರಂದು

ಹನೂರಿನಲ್ಲಿ ರಾಜೇಂದ್ರ ಶ್ರೀಗಳವರ 110ನೇ ಜಯಂತಿ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಈ ದೇಶದ ಪ್ರತಿಯೊಬ್ಬ ಪ್ರಜೆಯಲ್ಲೂ ಸಹ ಧಾರ್ಮಿಕತೆ ತುಂಬಿ ತುಳುಕುತ್ತಿದೆ. ಜಗತ್ತನ್ನು ಸೃಷ್ಟಿ ಮಾಡಿದ ಭಗವಂತನ ಮೇಲೆ ಅಪಾರವಾದ ಭಕ್ತಿ ಇದೆ. ಇಡೀ ದೇಶದಲ್ಲಿ ಕಣ್ಣಿಗೆ ಕಾಣುವ ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ವಿಜ್ಞಾನಿಗಳು ಮಾಡಿದರೆ ಅಂತರಂಗದ ಸಂಶೋಧನೆಯನ್ನು ಸಾಧು ಸಂತರು ಮಾಡಿದ್ದಾರೆ. ರಾಜೇಂದ್ರ ಶ್ರೀಗಳು ಲೋಕಕಲ್ಯಾಣಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಆಯಾಯ ಕಾಲಮಾನಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ನಾಡಿನುದ್ದಕ್ಕೂ ಮಠಮಾನ್ಯಗಳು ಮಾಡುತ್ತಲೇ ಬಂದಿವೆ. ಸುತ್ತೂರು ಮಠ, ಸಿದ್ದಗಂಗಾ ಮಠ ಹಾಗೂ ಇನ್ನಿತರ ಮಠಗಳು ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿರುವ ಮಠಗಳಾಗಿವೆ. ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ರಾಜೇಂದ್ರ ಶ್ರೀಗಳು ಸೌಲಭ್ಯಗಳೆ ಇಲ್ಲದಂತಹ ದಿನಮಾನಗಳಲ್ಲಿ ಪ್ರಸಾದನಿಲಯಗಳು ಮತ್ತು ಶಾಲೆಗಳನ್ನು ತೆರೆದು ಶಿಕ್ಷಣವನ್ನು ಕೊಟ್ಟಂತಹ ಮಹಾನ್ ತ್ಯಾಗಿಗಳು ಎಂದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮಹಾತ್ಮರು ತೋರಿಸಿರುವ ಮಾರ್ಗ ನಮ್ಮ ಬದುಕಿಗೆ ಯಾವಾಗಲು ಬೆಳಕಾಗಿದೆ ಎಂದರೆ ತಪ್ಪಾಗಲಾರದು. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ರಾಂತಿ ಉಂಟುಮಾಡಿದ ಸಂಸ್ಥೆಗಳಲ್ಲಿ ಜೆಎಸ್‌ಎಸ್ ಸಂಸ್ಥೆ ಮೊದಲ ಸಾಲಿನಲ್ಲಿ ಇರುತ್ತದೆ. ಶ್ರೀ ರಾಜೇಂದ್ರ ಮಹಾಸ್ವಾಮಿಗಳು ಅತ್ಯಂತ ಮೃದು ಸ್ವಭಾವಿಗಳಾಗಿದ್ದರು. ಅವರು ಈ ನಾಡಿಗೆ ಕಷ್ಟದ ಹಾದಿಯಲ್ಲಿ ನಡೆದು ಬೆಳಕನ್ನು ಕೊಟ್ಟವರು. ಪರೋಪಕಾರಕ್ಕಾಗಿ ಹುಟ್ಟಿದ ಮಹಾತ್ಮರು. ಅವರು ಹಾಕಿ ಕೊಟ್ಟಂತಹ ಮಾರ್ಗದಲ್ಲಿ ಎಲ್ಲರೂ ನಡೆದುಕೊಂಡು ಹೋಗಬೇಕಾಗಿದೆ ಎಂದರು.

ದೇವನೂರು, ಸಾಲೂರುಮಠ, ಮರಳೇಗವಿಮಠ ಹಾಗೂ ಶ್ರೀ ಭಗಿರಥ ಉಪ್ಪಾರ ಪೀಠದ ಶ್ರೀಗಳು, ಶ್ರೀ ಎಂ.ಆರ್. ಮಂಜುನಾಥ್, ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಬಾಲರಾಜು, ಶ್ರೀ ಎನ್. ಮಹೇಶ್, ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಆರ್. ನರೇಂದ್ರ, ಶ್ರೀ ಎಸ್. ನಿಶಾಂತ್, ಡಾ. ದತ್ತೇಶ್‌ಕುಮಾರ್, ಶ್ರೀ ಜನಧ್ವನಿ ವೆಂಕಟೇಶ್ ಮೊದಲಾದವರು ಉಪಸ್ಥಿತರಿದ್ದರು.

**ಶ್ರೀ ಶಾಮನೂರು ಶಿವಶಂಕರಪ್ಪನವರ ಅಗಲುವಿಕೆಗೆ ಸಂತಾಪ**

ಹಿರಿಯ ರಾಜಕೀಯ ಮುತ್ಸದ್ದಿಗಳು, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಶಾಮನೂರು ಶಿವಶಂಕರಪ್ಪನವರು ಡಿಸೆಂಬರ್ 14ರಂದು ದೈವಾಧೀನರಾದುದು ವಿಷಾದದ ಸಂಗತಿ.

ಸಜ್ಜನ ರಾಜಕಾರಣಿಗಳೆಂದೇ ಹೆಸರಾಗಿದ್ದರವರು. ದಾವಣಗೆರೆ ಜಿಲ್ಲೆ ಶಾಮನೂರು ಗ್ರಾಮದ ಕೃಷಿಕ ಕುಟುಂಬದಲ್ಲಿ ಜನಿಸಿದವರು. ಬಿಎಸ್ಸಿ ಪದವೀಧರರು. ಅಕ್ಕಿಯ ವ್ಯಾಪಾರೋದ್ಯಮವನ್ನು ಪ್ರಾರಂಭಿಸಿ ಅದರಲ್ಲಿ ಯಶಸ್ವಿಯಾಗಿದ್ದರು. ಹಿಂದೆ ಚಿತ್ರದುರ್ಗ

ಜಿಲ್ಲೆಯ ಭಾಗವಾಗಿದ್ದ ದಾವಣಗೆರೆ ನಗರಸಭೆಯ ಸದಸ್ಯರಾಗಿ ಆಯ್ಕೆಯಾಗಿ, ಬಳಿಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1994ರಲ್ಲಿ ಮೊದಲ ಬಾರಿಗೆ ದಾವಣಗೆರೆಯಿಂದ ವಿಧಾನಸಭೆಗೆ ಆಯ್ಕೆಯಾದರು. ಅನಂತರ ಸತತವಾಗಿ ಆರು ಬಾರಿ ಶಾಸಕರಾಗಿ ಆಯ್ಕೆಯಾದುದು ಅವರ ಜನಪ್ರಿಯತೆಗೆ ಹಿಡಿದ ಕೈಗನ್ನಡಿಯಾಗಿದೆ. 1998ರಲ್ಲಿ ಲೋಕಸಭೆಗೂ ಆಯ್ಕೆಯಾಗಿದ್ದರು. ಕಾಂಗ್ರೆಸ್ ಪಕ್ಷದಲ್ಲಿ ಐದು ದಶಕಗಳಿಂದ ರಾಜಕಾರಣದಲ್ಲಿದ್ದವರು. ದೇಶದ ಅತ್ಯಂತ ಹಿರಿಯ ಸಕ್ರಿಯ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದರು. ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿ ಇಳಿ ವಯಸ್ಸಿನಲ್ಲೂ ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರು. ಶಿಕ್ಷಣ ಪ್ರೇಮಿಗಳಾಗಿದ್ದರು. ಬಾಪೂಜಿ ಶಿಕ್ಷಣಸಂಸ್ಥೆಗಳ ಸಂಸ್ಥಾಪಕರಾಗಿ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಮಾಡಿದ್ದರು. ದಾವಣಗೆರೆಯನ್ನು ಶೈಕ್ಷಣಿಕ ಕೇಂದ್ರವಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದರು. ಡಾ. ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್ ಮೂಲಕ ಹಲವಾರು ಜನಪರ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು.

ದೈವಭಕ್ತರು, ಅಧ್ಯಾತ್ಮಜೀವಿಗಳೂ ಆಗಿದ್ದರು. ಮಠಮಾನ್ಯಗಳು ಹಾಗೂ ಧಾರ್ಮಿಕ ಕೇಂದ್ರಗಳ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು. ಶ್ರೀಮಠದೊಂದಿಗೆ ಅತ್ಯಂತ ಅವಿನಾಭಾವ ಸಂಬಂಧವನ್ನು ಹೊಂದಿದ್ದರು. ಜಾತ್ರೆ, ಜಯಂತಿ, ಶ್ರೀಮಠದ ಹಾಗೂ ಸಂಸ್ಥೆಗಳ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಶ್ರೀಮಠಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಅತಿಥಿಗೃಹವನ್ನು ನಿರ್ಮಿಸಿದ ಕೊಡುಗೈ ದಾನಿಗಳು.

ಸಾರ್ವಜನಿಕ ಜೀವನದಲ್ಲಿ ಸಜ್ಜನಿಕೆಯ ಮೂರ್ತಿಯಾಗಿದ್ದರು. ಸದಾ ಜನಪರ ನಿಲುವನ್ನು ಹೊಂದಿದ್ದರು. ಅವರ ರಾಜಕೀಯ ಜೀವನ ಒಂದು ತೆರೆದ ಪುಸ್ತಕವಾಗಿತ್ತು. ಅವರಿಗೆ ಎಲ್ಲ ಪಕ್ಷಗಳಲ್ಲಿಯೂ ಅಭಿಮಾನಿಗಳಿದ್ದರು. ಅವರೊಬ್ಬ ಅಜಾತಶತ್ರುಗಳಾಗಿದ್ದರು. ಅವರ ಅಗಲುವಿಕೆಯಿಂದ ಕರ್ನಾಟಕದ ಹಿರಿಯ ಚೇತನವೊಂದು ಅಸ್ತಂಗತವಾದಂತಾಗಿದೆ.

ದಿವಂಗತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರರು, ಬಂಧುಬಾಂಧವರು ಮತ್ತು ಅಪಾರ ಸಂಖ್ಯೆಯ ಅಭಿಮಾನಿಗಳಿಗೆ ಈ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪರಮಪೂಜ್ಯ ಜಗದ್ಗುರುಗಳವರು ಹಾರೈಸಿದ್ದಾರೆ.

**ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಸ್ಫೂರ್ತಿಯ ದೀಪ**

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಸ್ಫೂರ್ತಿಯ ದೀಪವಾಗಿ ಬೆಳಗುತ್ತಿದ್ದಾರೆ ಎಂದು ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರು ಡಿಸೆಂಬರ್ 16ರಂದು ಮಳವಳ್ಳಿಯಲ್ಲಿ ಆಯೋಜಿಸಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು.

ಯುಗಯುಗಾಂತರಗಳಲ್ಲಿ ಸಂತರು ಕರುಣೆಯ ಮೂಲಕ ಮಾನವೀಯತೆಯನ್ನು ಬೆಳಗಿಸಿದ್ದಾರೆ. ನಿಜವಾದ ಶ್ರೇಷ್ಠತೆ ಅಧಿಕಾರ ಅಥವಾ ಸಂಪತ್ತಿನಲ್ಲಿಲ್ಲ. ಬದಲಿಗೆ ತ್ಯಾಗ, ಸೇವೆ ಮತ್ತು ಆಧ್ಯಾತ್ಮಿಕ ಬಲದಲ್ಲಿದೆ ಎಂಬುದನ್ನು ಅವರ ಜೀವನವು ನಮಗೆ ನೆನಪಿಸುತ್ತದೆ. ಅಂತಹ ಶ್ರೇಷ್ಠ ಸಂತರಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಒಬ್ಬರು. ಶ್ರೀಮಠದ ಮಾರ್ಗದರ್ಶನ ಮತ್ತು ಪೋಷಣೆಯಡಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವು ಪ್ರಪಂಚಾದ್ಯಂತ ಇರುವ ಭಾರತದ ವಿಶಿಷ್ಟ ಸಂಸ್ಥೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಇದು ಆರೋಗ್ಯ ರಕ್ಷಣೆ, ಮಹಿಳೆಯರ ಸಬಲೀಕರಣ, ಗ್ರಾಮೀಣ ಸಮುದಾಯಗಳನ್ನು ಉನ್ನತೀಕರಿಸುವುದು, ಸಂಸ್ಕೃತಿಯನ್ನು ಸಂರಕ್ಷಿಸುವುದು ಮತ್ತು ಸಮಗ್ರ ಸಮಾಜದ ಅಡಿಪಾಯ ವನ್ನು ಬಲಪಡಿಸುವಲ್ಲಿ ಯುವ ಮನಸ್ಸುಗಳನ್ನು ರೂಪಿಸುವಲ್ಲಿ ತೊಡಗಿಸಿಕೊಂಡಿದೆ. ಭಾರತ ಸರ್ಕಾರವು ಈ ಸಮಗ್ರ ದೃಷ್ಟಿಕೋನದೊಂದಿಗೆ ಕಾರ್ಯನಿರ್ವಹಿಸುತ್ತಿವೆ. ಸುತ್ತೂರು ಮಠದಂತಹ ಸಂಸ್ಥೆಗಳು ಈ ರಾಷ್ಟ್ರೀಯ ಪ್ರಯತ್ನದಲ್ಲಿ ಗಣನೀಯ ಪಾತ್ರವನ್ನು ವಹಿಸಿದೆ. ಭಾರತದ ಭವಿಷ್ಯವು ಕೌಶಲ ಮತ್ತು ಜ್ಞಾನದಿಂದ ಮಾತ್ರವಲ್ಲದೆ ನೈತಿಕತೆಯ ಪ್ರಜ್ಞೆಯಿಂದ ರೂಪುಗೊಳ್ಳುತ್ತದೆ. ಧರ್ಮ, ಆರೋಗ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಸುತ್ತೂರು ಮಠ ಹಿಂದಿನಿಂದಲೂ ನಿರಂತರವಾಗಿ ಶ್ರಮಿಸುತ್ತಿದೆ. ಶ್ರೀಮಠದ ರಾಜೇಂದ್ರ ಶ್ರೀಗಳು ಶಿಕ್ಷಣದ ಬಗ್ಗೆ ಸಾಕಷ್ಟು ದೂರದೃಷ್ಟಿ ಇಟ್ಟುಕೊಂಡಿದ್ದರು. ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಅಂತಹ ಸೇವೆಯ ಪರಂಪರೆಯನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಜೆಎಸ್‌ಎಸ್ ಸಂಸ್ಥೆ ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲಿಯೂ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳನ್ನು ಆರಂಭಿಸಿದೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸೇವೆ ಅಪಾರವಾಗಿದೆ ಎಂದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಲೋಕ ಕಲ್ಯಾಣಕ್ಕಾಗಿ ಮಾಡಿದ ಕಾರ್ಯಗಳು ನಿರಂತರವಾಗಿ ನಡೆಯಬೇಕು. ಅವರ ಜಯಂತಿ ಮಹೋತ್ಸವ ನಾನಾ ಜಿಲ್ಲೆಗಳಲ್ಲಿ ನಡೆದುಕೊಂಡು ಬರುತ್ತಿದೆ. ಶಿವಯೋಗಿಗಳು ಸಾವಿರಾರು ವರ್ಷಗಳ ಹಿಂದೆ ಎರಡು ರಾಜ ಮನೆತನಗಳ ನಡುವೆ ಇದ್ದಂತಹ ವೈಷಮ್ಯವನ್ನು ಹೋಗಲಾಡಿಸಿ ಸಾಮರಸ್ಯ, ಪ್ರೀತಿ, ಸ್ನೇಹದ ಬೀಜವನ್ನು ಬಿತ್ತಿ ನಾಡಿಗೆ ಕಲ್ಯಾಣ ತಂದವರು. ಅವರ ಹಾದಿಯಲ್ಲಿಯೇ ಎಲ್ಲಾ ಗುರುಗಳು ಶ್ರೀಮಠವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಸುಮಾರು ಆರು ವರ್ಷಗಳ ಹಿಂದೆಯೇ ಜಯಂತ್ಯುತ್ಸವ ಮಳವಳ್ಳಿ ನಡೆಯಬೇಕಿತ್ತು. ಆದರೆ, ಕಾರಣಾಂತರಗಳಿಂದ ಸಾಧ್ಯವಾಗಿರಲಿಲ್ಲ. ಬಹುಶಃ ಆರು ವರ್ಷಗಳ ಹಿಂದೆ ಆಗಿದ್ದರೆ ರಾಷ್ಟ್ರಪತಿಗಳು ಕಾರ್ಯಕ್ರಮ ಉದ್ಘಾಟಿಸುತ್ತಿರಲಿಲ್ಲ. ಇದು ದೈವ ಸಂಕಲ್ಪ. ಮಳವಳ್ಳಿಯಲ್ಲಿ 1066ನೇ ಜಯಂತಿ ಮಹೋತ್ಸವ ಕಾರ್ಯಕ್ರಮ ನಡೆಯುವುದಕ್ಕೆ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರೇ ಕಾರಣ. ಜೊತೆಗೆ ರಾಷ್ಟ್ರಪತಿಗಳು ಸಮಾರಂಭಕ್ಕೆ ಬರುವುದಕ್ಕೂ ಅವರೇ ಕಾರಣ. ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಅವರ ಮನೆಯ

ಕಾರ್ಯಕ್ರಮದಂತೆ ಮುತುವರ್ಜಿ ವಹಿಸಿ ಅಚ್ಚುಕಟ್ಟಾಗಿ ರೂಪಿಸಿದ್ದಾರೆ. ಮಳವಳ್ಳಿಯ ಎಲ್ಲಾ ಸಂಘ ಸಂಸ್ಥೆಗಳು ಹಾಗೂ ಮುಖಂಡರು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಿದ್ದಾರೆ ಎಂದು ಹೇಳಿದರು.

ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್‌ರವರು ಸುತ್ತೂರು ಶ್ರೀಮಠವು ಧರ್ಮ ಮತ್ತು ಶಕ್ತಿಯ ತಾಣವಾಗಿದೆ. ದೇಶದ ಅತ್ಯಂತ ಪ್ರಸಿದ್ಧ ಮಠಗಳಲ್ಲಿ ಒಂದಾಗಿದೆ. ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಶ್ರೀಮಠವು ಸಾಮಾಜಿಕ ಮತ್ತು ಧಾರ್ಮಿಕ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಭಾರತೀಯ ಸಂತ ಪರಂಪರೆಯ ಪ್ರಕಾಶಮಾನವಾದ ಸ್ತಂಭವಾಗಿದ್ದರು. ಮಾನವೀಯತೆಯನ್ನು ಜಾಗೃತಗೊಳಿಸುವುದು ಅವರ ಮೂಲ ಉದ್ದೇಶವಾಗಿತ್ತು ಎಂದರು.

'ಮಳವಳ್ಳಿ ಶ್ರೀಪ್ರಭೆ' ಸಂಚಿಕೆಯನ್ನು ಬಿಡುಗಡೆ ಮಾಡಿದ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಸುತ್ತೂರು ಶ್ರೀಮಠಕ್ಕೂ ದೇವೇಗೌಡರ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ಹಿಂದಿನ ಪೂಜ್ಯರ ಕೃಪೆಯೂ ನಮ್ಮ ಕುಟುಂಬದ ಮೇಲೆ ಅಪಾರವಾಗಿತ್ತು. ದೇವೇಗೌಡರ ಆರಂಭಿಕ ರಾಜಕೀಯ ಬೆಳವಣಿಗೆಯಲ್ಲಿ ಹಿರಿಯ ಶ್ರೀಗಳ ಕೊಡುಗೆ ಅಪಾರವಾಗಿದೆ. ಈಗಿರುವ ಪೂಜ್ಯರ ಜೊತೆಗೆ ಹಿಂದಿನ ಪೂಜ್ಯರ ದಿವ್ಯಾಶೀರ್ವಾದ ನಮ್ಮ ಕುಟುಂಬದ ಮೇಲಿದೆ. ಅದಕ್ಕಾಗಿಯೇ ನಮ್ಮ ತಂದೆಯವರು ಸುತ್ತೂರು ಶ್ರೀಕ್ಷೇತ್ರವನ್ನು ಯಾವತ್ತೂ ಮರೆಯಬಾರದು ಎಂದು ನನಗೆ ನೂರಾರು ಬಾರಿ ಹೇಳಿದ್ದಾರೆ. ಈ ಮಾತನ್ನು ನನ್ನ ಹೃದಯದಿಂದ ಹೇಳುತ್ತಿದ್ದೇನೆ. ಸುತ್ತೂರು ಶ್ರೀಕ್ಷೇತ್ರವು ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಅಸಂಖ್ಯಾತ ಬಡಮಕ್ಕಳಿಗೆ ಬೆಳಕಾಗಿದೆ. ಇವತ್ತು ಶ್ರೀಮಠವು ರಾಜ್ಯ, ದೇಶ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿಯೂ ಅಗಾಧವಾಗಿ ಬೆಳೆದಿದೆ. ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ವಾಗಿ ಸೇವೆ ಮಾಡುತ್ತಿದೆ. ಈಗಿರುವ ಪೂಜ್ಯರು ಮಠದ ಪರಂಪರೆಯನ್ನು ಮುಂದುವರೆಸುತ್ತಾ ನಾಡಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಎಂದು ಬಣ್ಣಿಸಿದರು. ಮಳವಳ್ಳಿ ಪ್ರಕೃತಿಯ ಮಡಿಲಲ್ಲಿ ಇರುವ ಪುಣ್ಯಭೂಮಿ. ಪೂಜ್ಯರ ಜಯಂತಿ ಮಹೋತ್ಸವದಲ್ಲಿ ರಾಷ್ಟ್ರಪತಿಗಳು ಭಾಗಿಯಾಗಿರುವುದರಿಂದ ಮಳವಳ್ಳಿ ಪಟ್ಟಣವು ಇತಿಹಾಸದಲ್ಲಿ ಚಿರಸ್ಥಾಯಿ ಆಗಲಿದೆ ಎಂದರು.

ಕನಕಪುರ ಶ್ರೀ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿ ಉಪಸ್ಥಿತರಿದ್ದರು. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಕೆ.ಜಿ. ವಿನುತಾ, ಶ್ರೀಮತಿ ರೂಪಾ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಪ್ರೊ. ಎಸ್.ಎನ್. ಹೆಗ್ಡೆ ನಿಧನಕ್ಕೆ ಸಂತಾಪ**

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾಗಿದ್ದ ಪ್ರೊ. ಎಸ್.ಎನ್. ಹೆಗ್ಡೆಯವರು ಇದೇ ಡಿಸೆಂಬರ್ 17ರಂದು ಅಗಲಿರುವುದು ವಿಷಾದದ ಸಂಗತಿ.

ಪ್ರೊ. ಹೆಗ್ಡೆಯವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸುಮಾರು ಮೂರು ದಶಕಗಳ ಕಾಲ ಪ್ರಾಣಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಬಳಿಕ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ 1997ರಿಂದ 2003ರವರೆಗೆ ಎರಡು ಅವಧಿಗಳಿಗೆ ಸೇವೆ ಸಲ್ಲಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ವಾಯತ್ತ ಕಾಲೇಜುಗಳನ್ನು ರೂಪಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಪ್ರೊ. ಹೆಗ್ಡೆಯವರು ಸದಾ ಜನಪರ ಆಡಳಿತವನ್ನು ನಡೆಸುತ್ತಿದ್ದರು. ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇದ್ದವರು. ಗುಣಗ್ರಾಹಿಗಳು, ವಿನೋದಶೀಲರು ಆಗಿದ್ದರು. ಅವರ ಕಾಲದಲ್ಲಿ ವಿಶ್ವವಿದ್ಯಾನಿಲಯವು ತುಂಬ ಒಳ್ಳೆಯ ಸಾಧನೆಗಳನ್ನು ಮಾಡಿತು.

ಪ್ರೊ. ಹೆಗ್ಡೆಯವರು ಶ್ರೀಮಠದ ಸಭೆ, ಸಮಾರಂಭಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದರು. ಅವರ ಅಕಾಲಿಕ ಅಗಲುವಿಕೆಯಿಂದ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಕೊರತೆಯುಂಟಾಗಿದೆ. ದಿವಂಗತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪರಮಪೂಜ್ಯ ಜಗದ್ಗುರುಗಳವರು ಹಾರೈಸಿದ್ದಾರೆ.

**ಅಕ್ಷರ, ಅನ್ನ ದಾಸೋಹ ಭಾರತೀಯ ಸಂಸ್ಕೃತಿಯ ಪ್ರತೀಕ**

ಅಕ್ಷರ ಮತ್ತು ಅನ್ನ ದಾಸೋಹ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ ವಿಶ್ವವಾಣಿ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್‌ರವರು ಡಿಸೆಂಬರ್ 17ರಂದು ಮಳವಳ್ಳಿಯಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ಉಪನ್ಯಾಸ ನೀಡುತ್ತಾ ತಿಳಿಸಿದರು. ಅಕ್ಷರ ಮತ್ತು ಅನ್ನ ದಾಸೋಹವನ್ನು ನಮ್ಮ ದಾರ್ಶನಿಕರು ನೀಡುತ್ತಾ ಬಂದಿದ್ದಾರೆ. ಭಾರತೀಯ ಸಂಸ್ಕೃತಿಯು ಅತ್ಯಂತ ಆದರ್ಶಪ್ರಾಯವಾದುದು. ಸಂಸ್ಕೃತಿಯ ಮೂಲ ತಿರುಳು ನಮ್ಮ ವ್ಯಕ್ತಿತ್ವವನ್ನು ರೂಪಿಸಿದೆ. ಯಾವುದು ಒಳ್ಳೆಯ ಕಾರ್ಯವನ್ನು ಮಾಡುತ್ತೋ ಅದು ಸಂಸ್ಕೃತಿ ಎಂದು ಕರೆಸಿಕೊಳ್ಳುತ್ತದೆ. ಹಸಿವಾದಾಗ ಸ್ವಾಭಾವಿಕವಾಗಿ ಆಹಾರ ಸೇವನೆ ಮಾಡುತ್ತೇವೆ. ಇದು ಪ್ರಕೃತಿಯ ನಿಯಮ. ಒಬ್ಬರಿಗೆ ಹಸಿವಾದಾಗ ಇನ್ನೊಬ್ಬರ ತಟ್ಟೆಯಿಂದ ಕಿತ್ತುಕೊಳ್ಳುವುದು ವಿಕೃತಿ. ಹಸಿದ ವ್ಯಕ್ತಿಗೆ ಆಹಾರ ನೀಡುವ, ಜೊತೆಗೆ ಹಂಚಿಕೊಂಡು ಉಣ್ಣುವುದು ಸಂಸ್ಕೃತಿ ಎಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಡಾ. ಕುಮಾರ್‌ರವರು ಆದಿ ಜಗದ್ಗುರುಗಳ ಜಯಂತಿ ಮಹೋತ್ಸವ ಸರ್ವ ಸಮಾಜದ ಉತ್ಸವ ಎಂಬ ಆಶಯವನ್ನು ಇಟ್ಟುಕೊಂಡು ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ. ಸುತ್ತೂರು ಮಠವು ಅಧ್ಯಾತ್ಮದ ಕೇಂದ್ರವಾಗಿ ಸಮಾಜದ ಎಲ್ಲ ಮನಸ್ಸುಗಳನ್ನು ಶುದ್ಧೀಕರಿಸುವ ಕೆಲಸ ಮಾಡುತ್ತಿದೆ ಎಂದರು.

ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗವನ್ನು ಮಾಜಿ ಉಪಸಭಾಪತಿಗಳಾದ ಶ್ರೀ ಮರಿತಿಬ್ಬೇಗೌಡರವರು ಬಿಡುಗಡೆಗೊಳಿಸಿದರು. ದೇವನೂರು ಶ್ರೀಗಳು ಶ್ರೀ ಉರಿಲಿಂಗಪೆದ್ದಿ

ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮಿಗಳು, ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದ ಪುರಿ ಸ್ವಾಮಿಗಳು, ಲೋಕಪಾಲ್ ಸದಸ್ಯರಾದ ಗೌ.ನ್ಯಾ. ಶ್ರೀ ಎಲ್. ನಾರಾಯಣಸ್ವಾಮಿ, ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕರಾದ ಶ್ರೀ ಕೆ. ಅನ್ನದಾನಿ, ಜಿಲ್ಲಾ ಪಂಚಾಯತ್ ಸಿಇಓ ಶ್ರೀಮತಿ ಕೆ.ಆರ್. ನಂದಿನಿ, ಜಿಲ್ಲಾ ಎಸ್‌ಪಿ ಶ್ರೀ ಮಲ್ಲಿಕಾರ್ಜುನ್ ಬಾಲದಂಡಿ, ಶ್ರೀ ಎಂ. ರಾಮಕೃಷ್ಣ, ಶ್ರೀ ಜಿ. ಮುನಿರಾಜು ಉಪಸ್ಥಿತರಿದ್ದರು. ಶ್ರೀಮತಿ ಎಂ. ಲತಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಆರ್.ಪಿ. ಪುಟ್ಟಬುದ್ಧಿ ಸ್ವಾಗತಿಸಿದರು. ಶ್ರೀ ಎಂ.ವಿ.ಟಿ ಕುಮಾರ್ ವಂದಿಸಿದರು. ಶ್ರೀ ಹೆಚ್.ಎಂ. ಶಿವಣ್ಣ ಕಾರ್ಯಕ್ರಮ ನಿರೂಪಿಸಿದರು.

**ಧಾರ್ಮಿಕ ಕಾರ್ಯಕ್ರಮಗಳಿಂದ ಅಸಹಿಷ್ಣುತೆ ದೂರ**

ಮಠಮಾನ್ಯಗಳು ಹಮ್ಮಿಕೊಳ್ಳುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಜನರು ಪಾಲ್ಗೊಳ್ಳುವುದರಿಂದ ಸಮಾಜದಲ್ಲಿನ ಅಸಹಿಷ್ಣುತೆಯನ್ನು ಹೋಗಲಾಡಿಸಬಹುದು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್‌ರವರು ಡಿಸೆಂಬರ್ 18ರಂದು ಮಳವಳ್ಳಿಯಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು. ಇಂದಿನ ದಿನಮಾನಗಳಲ್ಲಿ ಜನರು ಏಕಾಂಗಿಯಾಗಿ ಬದುಕುವ ಜೀವನಶೈಲಿಯಲ್ಲಿದ್ದಾರೆ. ಶ್ರೀಮಠಗಳು ಹಮ್ಮಿಕೊಳ್ಳುತ್ತಿರುವ ಸತ್ಸಂಗ ಸಮಾರಂಭಗಳು ಜನರಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಸಹಕಾರಿಯಾಗುತ್ತವೆ. ಜನರ ಮನದಲ್ಲಿ ವಿಶಾಲ ಮನೋಭಾವ ಮೂಡಿ ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಉಳಿಸಲು ಸಾಧ್ಯವಾಗುತ್ತದೆ. ಜಗತ್ತಿನಾದ್ಯಂತ ಧಾರ್ಮಿಕ ಪರಂಪರೆ ಸಂಸ್ಕೃತಿಗಳ ಐತಿಹಾಸಿಕ ಹಿನ್ನೆಲೆಗಳಿರುವುದು ಭಾರತ ಮತ್ತು ಚೀನಾ ದೇಶಗಳಲ್ಲಿ ಮಾತ್ರ. ಇಂತಹ ಪ್ರಾಚೀನ ಪರಂಪರೆಯ ಭಾರತ ದೇಶದಲ್ಲಿ ಯುವ ಸಮೂಹ ಯಾಂತ್ರಿಕ ಜೀವನಶೈಲಿಯನ್ನು ರೂಢಿಸಿಕೊಂಡಿರುವುದು ವಿಪರ್ಯಾಸದ ಸಂಗತಿಯಾಗಿದೆ. ಇಂದಿನ ಕಾಲಘಟ್ಟದಲ್ಲಿ ಭಾವನಾತ್ಮಕ ಮೌಲ್ಯಗಳ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಧಾರ್ಮಿಕ ಸತ್ಸಂಗ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಹಲವು ಮಠಗಳು ಸಮಾಜಮುಖಿ ಕೆಲಸ ಮಾಡುತ್ತಿವೆ. ಸುತ್ತೂರು ಶ್ರೀಮಠವು ಎಲ್ಲಾ ಧರ್ಮಗಳನ್ನು ಒಂದುಗೂಡಿಸಿ ಭಾವೈಕ್ಯತೆಯನ್ನು ಸಾರುತ್ತಿದೆ. ವಿವಿಧ ಧರ್ಮ, ಸಮಾಜಗಳಿಗೆ ಸೇರಿದ ಸಮೂಹಗಳು ಶ್ರೀಮಠವನ್ನು ಗೌರವಿಸುತ್ತಿವೆ ಎಂದು ಹೇಳಿದರು.

ಉಡುಪಿ ಜಮಾತ್–ಎ–ಇಸ್ಲಾಮಿ ಹಿಂದ್ ಕಾರ್ಯದರ್ಶಿಗಳಾದ ಶ್ರೀ ಅಕ್ಬರ್ ಅಲಿಯವರು ಒಂದು ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡು ಎಲ್ಲಾ ಜಾತಿ, ಧರ್ಮಗಳ ಜೊತೆಗೂಡಿ ಸಾಮರಸ್ಯದಿಂದ ಬಾಳುವುದೇ ಭಾವೈಕ್ಯತೆಯ ಸಂಕೇತವಾಗಿದೆ. ನಾಡಿನಲ್ಲಿಂದು ಮಾನವೀಯತೆ ಮೌಲ್ಯ ಕುಸಿಯುತ್ತಿದೆ. ಅನೇಕ ಜನ ವೃದ್ಧಾಪ್ಯದಲ್ಲಿ ಹೆತ್ತ ತಂದೆ ತಾಯಿಯರನ್ನು ನೋಡಿಕೊಳ್ಳದೆ ಮೌಲ್ಯವನ್ನು ಹಾಳು ಮಾಡುತ್ತಿದ್ದಾರೆ. ಬಾಲ್ಯದಿಂದ

ತಮ್ಮನ್ನು ಪೋಷಿಸಿದವರನ್ನು ಕಾಪಾಡಿಕೊಳ್ಳಬೇಕಾದ ಜವಾಬ್ದಾರಿಯನ್ನು ಮಕ್ಕಳು ಅರಿತುಕೊಳ್ಳಬೇಕಾಗಿದೆ ಎಂದು ಹೇಳಿದರು.

ಜೆಡಿಎಸ್ ಯುವಘಟಕದ ಅಧ್ಯಕ್ಷರಾದ ಶ್ರೀ ನಿಖಿಲ್ ಕುಮಾರಸ್ವಾಮಿಯವರು ಲಕ್ಷಾಂತರ ಬಡ ಕುಟುಂಬದ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿ ಅವರ ಜೀವನವನ್ನು ರೂಪಿಸಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರೀ ಮಠಗಳ ಸೇವೆ ಅಪಾರವಾಗಿದೆ. ಲಕ್ಷಾಂತರ ಮಂದಿ ವಿದ್ಯಾರ್ಥಿಗಳಿಗೆ ಅಕ್ಷರ ಮತ್ತು ಅನ್ನ ದಾಸೋಹ ನೀಡುವುದರ ಜೊತೆಗೆ ಆರೋಗ್ಯ ಶಿಬಿರದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉತ್ತಮ ಸಮಾಜ ನಿರ್ಮಿಸುವಲ್ಲಿ ಸುತ್ತೂರು ಮಠ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ಕಲಾವಿದರಾದ ಶ್ರೀ ಶಿವರಾಜ್‌ಕುಮಾರ್‌ರವರು 'ವಿಚಾರ ಲಹರಿ' ಕೃತಿ ಬಿಡುಗಡೆಗೊಳಿಸಿದರು. ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಸಾಲೂರು ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಶಾಸಕರಾದ ಶ್ರೀ ಪಿ.ಎಂ ನರೇಂದ್ರಸ್ವಾಮಿ, ಮಾಜಿ ಸಚಿವರಾದ ಶ್ರೀ ಡಿ.ಸಿ. ತಮ್ಮಣ್ಣ, ಶ್ರೀ ಮುರುಗೇಶ್ ನಿರಾಣಿ, ಮಾಜಿ ಶಾಸಕರಾದ ಡಾ. ಕೆ. ಅನ್ನದಾನಿ, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ಡಿ.ಎಸ್. ವೀರಯ್ಯ, ಶ್ರೀ ತೋಂಟದಾರ್ಯ, ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷರಾದ ಶ್ರೀ ಎಂ. ರುದ್ರೇಶ್, ಉದ್ಯಮಿಗಳಾದ ಶ್ರೀ ಅಮರನಾಥಗೌಡ, ಶ್ರೀ ಎಸ್. ನಿಶಾಂತ್, ಕೆಪಿಎಸ್‌ಸಿ ಸದಸ್ಯರಾದ ಶ್ರೀ ಪ್ರಭುದೇವ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಸುಕನ್ಯಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಆರ್.ಎಂ. ಚಂದ್ರಶೇಖರಮೂರ್ತಿ ಸ್ವಾಗತಿಸಿದರು. ಶ್ರೀ ಆರ್.ಎಂ. ಹೇಮಂತ್‌ಕುಮಾರ್ ವಂದಿಸಿದರು. ಶ್ರೀ ಎಂ.ಕೆ. ಸುಂದ್ರಪ್ಪ ಕಾರ್ಯಕ್ರಮ ನಿರೂಪಿಸಿದರು.

### ಮನುಷ್ಯನ ಅಂತರಂಗದ ಸಮಸ್ಯೆ ಪರಿಹರಿಸಲು ಆಧ್ಯಾತ್ಮಿಕತೆ ಅಗತ್ಯ

ಮನುಷ್ಯನ ಅಂತರಂಗದ ಸಮಸ್ಯೆಗಳನ್ನು ಪರಿಹರಿಸಲು ಆಧ್ಯಾತ್ಮಿಕತೆ ಅಗತ್ಯವಿದೆ ಎಂದು ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಡಿಸೆಂಬರ್ 19ರಂದು ಮಳವಳ್ಳಿಯಲ್ಲಿ ಜರುಗಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು. ಆಧುನಿಕ ಯುಗದಲ್ಲಿ ಜ್ಞಾನವಿಲ್ಲವೆಂದಾದರೆ ದಿಕ್ಕು ತಪ್ಪುತ್ತೇವೆ. ವ್ಯಕ್ತಿ ವ್ಯಕ್ತಿಗಳ ಮನಸ್ಸುಗಳನ್ನು ಕೂಡಿಸಬೇಕಾದರೆ ಆಧ್ಯಾತ್ಮಿಕತೆಯ ಅಗತ್ಯವಿದೆ. ಸರ್ಕಾರದಿಂದ ಸಾಧ್ಯವಾಗದ ಮಾನಸಿಕ ಮಾಲಿನ್ಯ ತೊಳೆಯುವ ಕೆಲಸ ಸುತ್ತೂರು ಮಠದಿಂದ ಅದು ಸಾಧ್ಯವಾಗುತ್ತಿದೆ. ಭೌತ ಜಗತ್ತಿನ ಸಮಸ್ಯೆಗಳಿಗೆ ಹಲವು ಪರಿಹಾರಗಳಿವೆ. ಆದರೆ, ಅಂತರಂಗದ ಸಮಸ್ಯೆಗಳನ್ನು ಪರಿಹರಿಸಲು ಆಧ್ಯಾತ್ಮಿಕತೆ ಅಗತ್ಯವಾಗಿ ಬೇಕು. ಆಧ್ಯಾತ್ಮಿಕದ ಜೊತೆಗೆ ಆಧುನಿಕತೆಯನ್ನು ಅರಿತು ಸುತ್ತೂರು ಮಠ ವಿಶ್ವದೆಲ್ಲೆಡೆ ಸಂಸ್ಥೆಗಳನ್ನು ತೆರೆದು ಕೆಲಸ ಮಾಡುತ್ತಿದೆ ಎಂದರು.

ರಿಪಬ್ಲಿಕ್ ಕನ್ನಡ ಟಿವಿ ಸಂಪಾದಕರಾದ ಶ್ರೀಮತಿ ಶೋಭಾ ಮಳವಳ್ಳಿಯವರು ಇತ್ತೀಚಿನ ದಿನಗಳಲ್ಲಿ ಕೌಟುಂಬಿಕ ಮನಸ್ತಾಪ ಸಾಮಾಜಿಕ ಜಾಲತಾಣಗಳ ಮೂಲಕ ಬೀದಿಗೆ ಬರುತ್ತಿರುವುದು ಬೇಸರ ತರಿಸುತ್ತಿದೆ. ಮನೆಯಲ್ಲಿ ಅನೇಕ ವ್ಯತ್ಯಾಸಗಳು ಇರುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ಕುಟುಂಬದ ಸಾಮರಸ್ಯಕ್ಕೆ ಅದರ ಆದ ಮಹತ್ವ ಇದೆ. ರಾಮಾಯಣ, ಮಹಾಭಾರತಗಳು ಸಾಮರಸ್ಯ ಮೂಡಿಸುವ ಗ್ರಂಥಗಳಾಗಿ ಕುಟುಂಬಕ್ಕೆ ದೊಡ್ಡ ಬಲ ತಂದುಕೊಟ್ಟಿವೆ. ಪಾಂಡವರು ಒಗ್ಗಟ್ಟಿನಿಂದ ಇದ್ದುದರಿಂದ ಗೆಲುವು ಸಾಧಿಸಿದರು. ಅವರಲ್ಲಿ ನಾನೇ ಶ್ರೇಷ್ಠ ಎಂಬ ಭಾವನೆ ಇರಲಿಲ್ಲ. ಕುಟುಂಬದ ಬಲ ದೊಡ್ಡದು ಎಂಬುದನ್ನು ಕೃಷ್ಣ ತೋರಿಸುತ್ತಾನೆ. ಕುಟುಂಬ ಒಡೆಯುವುದಕ್ಕೆ ಶಕುನಿ ಬರುತ್ತಾನೆ. ಆದರೆ, ಪಾಂಡವರ ಪರ ನಿಂತ ಕೃಷ್ಣ ಕುಟುಂಬ ಒಡೆಯಲು ಬಿಡುವುದಿಲ್ಲ. ರಾಮಾಯಣವು ಕುಟುಂಬದ ಸಾಮರಸ್ಯವನ್ನು ತೋರಿಸುತ್ತದೆ. ರಾಮನ ದೇಗುಲದಲ್ಲಿ ರಾಮನ ವಿಗ್ರಹ ಮಾತ್ರ ಇರುವುದಿಲ್ಲ. ಅಲ್ಲಿ ಸೀತಾ, ಲಕ್ಷ್ಮಣ, ಆಂಜನೇಯರ ವಿಗ್ರಹಗಳನ್ನು ಕಾಣುತ್ತೇವೆ. ಶರಣರು ಕೂಡ ಕುಟುಂಬ ಸಾಮರಸ್ಯದ ಬಗ್ಗೆ ವಚನಗಳಲ್ಲಿ ಸಾರಿದ್ದಾರೆ. ಭಾರತದಲ್ಲಿ ಕುಟುಂಬಕ್ಕೆ ದೊಡ್ಡ ಮಹತ್ವ ಇದೆ. ಎಂತಹದೇ ಜಗಳ ಇದ್ದರೂ ಸಂದರ್ಭ ಬಂದಾಗ ಒಂದಾಗಿಬಿಡುತ್ತಾರೆ. ಆದರೆ, ಇತ್ತೀಚಿಗೆ ಕೆಲವು ಮಾಧ್ಯಮಗಳಲ್ಲಿ ಕುಟುಂಬಗಳ ವಿಷಯಗಳನ್ನು ವಿಪರಿತವಾಗಿ ಚರ್ಚೆ ಮಾಡುತ್ತಿರುವುದು ಸಮಾಜದಲ್ಲಿನ ವ್ಯವಸ್ಥೆಯನ್ನು ಎತ್ತಿ ತೋರಿಸುತ್ತಿದೆ. ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೌಟುಂಬಿಕ ಜಗಳಗಳಿಗೆ ಕಡಿವಾಣ ಹಾಕಬೇಕಿದೆ ಎಂದರು.

ಕನಕಪುರ ಮರಳೇಗವಿಮಠದ ಶ್ರೀಗಳು, ಲೋಕಾಯುಕ್ತರಾದ ಗೌ.ನ್ಯಾ. ಶ್ರೀ ಬಿ.ಎಸ್. ಪಾಟೀಲ್, ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಮಾಜಿ ಸಚಿವರಾದ ಶ್ರೀ ಬಿ. ಸೋಮಶೇಖರ್, ಆರಕ್ಷಕ ಪ್ರಾದೇಶಿಕ ಆಯುಕ್ತರಾದ ಶ್ರೀ ನಿತೇಶ್ ಪಾಟೀಲ್, ಉಪಮಹಾನಿರೀಕ್ಷಕರಾದ ಡಾ. ಎಂ.ಬಿ. ಬೋರಲಿಂಗಯ್ಯ, ಚಲನಚಿತ್ರ ಕಲಾವಿದರಾದ ಶ್ರೀ ನೀನಾಸಂ ಸತೀಶ್, ಶ್ರೀ ಎನ್.ಎಸ್. ನಾಗಭೂಷಣ, ಶ್ರೀ ಎಸ್. ಸಚ್ಚಿದಾನಂದ, ಡಾ. ಎನ್.ಎಸ್. ಇಂದ್ರೇಶ್ ಉಪಸ್ಥಿತರಿದ್ದರು. ಶ್ರೀಮತಿ ಪಂಕಜ ಪ್ರಾರ್ಥಿಸಿದರು. ಶ್ರೀಮತಿ ಯಶೋಧಮ್ಮ ಸ್ವಾಗತಿಸಿದರು. ಶ್ರೀ ಎಂ.ಎಸ್. ಶ್ರೀಕಂಠಸ್ವಾಮಿ ವಂದಿಸಿದರು. ಶ್ರೀ ಬಭ್ರುವಾಹನ ಕಾರ್ಯಕ್ರಮ ನಿರೂಪಿಸಿದರು.

**ಸತ್ಕಾರ್ಯಗಳನ್ನು ಮಾಡಬೇಕು**

ಭೂಮಿಯ ಮೇಲೆ ಇರುವಷ್ಟು ದಿನ ನಾವುಗಳು ಸಮಾಜಕ್ಕೆ ಒಳಿತಾಗುವ ಸತ್ಕಾರ್ಯಗಳನ್ನು ಮಾಡಬೇಕು ಎಂದು ಕೊಪ್ಪಳ ಶ್ರೀ ಗವಿಮಠದ ಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಡಿಸೆಂಬರ್ 20ರಂದು ಮಳವಳ್ಳಿಯಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತಿ ಮಹೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು. ಸಾವಿನ ನಂತರವೂ ನೆನಪು ಉಳಿದುಕೊಳ್ಳುವಂತಹ ಬದುಕು

ನಡೆಸಬೇಕು. ಭೂಮಿಯಲ್ಲಿ ಹುಟ್ಟಿದ ಯಾವುದೇ ವ್ಯಕ್ತಿಯ ಶರೀರ, ಸಿರಿ, ಸಂಪತ್ತು ಸೇರಿದಂತೆ ಯಾವುದೇ ಸಂಬಂಧಗಳು ಕ್ರಮೇಣ ಕರಗಿ ಹೋಗುತ್ತವೆ. ನಮ್ಮದು ಎಂಬುದು ಏನೂ ಉಳಿಯದು. ಜಗತ್ತಿನಲ್ಲಿ ನಮ್ಮ ಎಲ್ಲಾ ಇಚ್ಛೆಗಳು ನೆರವೇರುವುದಿಲ್ಲ. ದೈವೇಚ್ಛೆಯಿಂದ ಜೀವನ ಸಾಗಲಿದೆ. ಹಣ, ಆಸ್ತಿ, ಸಂಪತ್ತು ಎಷ್ಟೇ ಇದ್ದರೂ ಕೂಡ ಒಂದಲ್ಲಾ ಒಂದು ಚಿಂತೆಯಲ್ಲಿಯೇ ಮನುಷ್ಯರು ಬದುಕು ಸಾಗಿಸುತ್ತಿರುವ ಪ್ರಸ್ತುತ ದಿನಮಾನಗಳಲ್ಲಿ ಎದೆಯೊಳಗೆ ಸಂತೋಷ ಇರುವವನೇ ಯಶಸ್ವಿ ಪುರುಷ ಎನ್ನುವ ಸತ್ಯವನ್ನು ಅರಿತು ಬದುಕಬೇಕು. ಊರ ಮುಂದಿನ ಬಾವಿಯನ್ನು ಮುಚ್ಚಬಹುದು. ಆದರೆ, ಊರ ಮಂದಿಯ ಬಾಯಿ ಮುಚ್ಚಿಸಲು ಸಾಧ್ಯವಾಗದು. ಮಾನವ ಇಚ್ಛೆ ಪಡುವುದು ತಪ್ಪಲ್ಲ. ಇಚ್ಛಿಸಿದ್ದೆಲ್ಲ ಸಿಗಬೇಕೆಂಬುದು ಸರಿಯಲ್ಲ. ಹಾಗಾಗಿಯೇ ಕರ್ಮವನ್ನು ನೀನು ಮಾಡು, ಫಲಾಫಲ ನನಗೆ ಬಿಡು ಎಂದು ಶ್ರೀಕೃಷ್ಣ ಹೇಳಿರುವಂತೆ ನೀವು ಒಳ್ಳೆಯ ಕೆಲಸಗಳನ್ನು ಮಾಡಿ ಅದರ ಫಲಾಫಲಗಳನ್ನು ಭಗವಂತನಿಗೆ ಬಿಡಬೇಕು ಎಂದರು. ದೀಪವೇ ಇಲ್ಲದ ಗುಡಿಸಲಿನಲ್ಲಿ ವಿದ್ಯೆ ಎಂಬ ದೀಪ ಹಚ್ಚಿ ಬೆಳಕು ನೀಡುವುದರ ಜೊತೆಗೆ ಬಡವರ ಮಕ್ಕಳಿಗೆ ಅರಿವಿನ ಮನೆ ಕಟ್ಟಿದ ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಸಮಾಜದಲ್ಲಿ ಶಾಶ್ವತ ದೇವರಾಗಿ ಉಳಿದಿದ್ದಾರೆ. ಏನೂ ಮಾಡದ ಮನುಷ್ಯ ದೀಪ ಆರಿಸಿ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಾನೆ. ಆದರೆ, ಶತಶತಮಾನಗಳ ಹಿಂದೆ ಅಜ್ಞಾನವನ್ನು ಹೋಗಲಾಡಿಸಲು ಜ್ಞಾನ ನೀಡಿ ಹಸಿದ ಹೊಟ್ಟೆಗೆ ಅನ್ನ ನೀಡಿದ ಶ್ರೀಗಳವರ ಹುಟ್ಟುಹಬ್ಬವನ್ನು ನಿತ್ಯ ಕಾರ್ತಿಕೋತ್ಸವವಾಗಿ ಆಚರಿಸಲಾಗುತ್ತಿದೆ. ಪಂಚಭೂತಗಳಿಂದ ನಿರ್ಮಿತಗೊಂಡಿರುವ ದೇಹ ಬರುವುದು, ಬಡಿದಾಡುವುದು, ಹೋಗುವುದು ಆದರೆ ಬದುಕು ಮೂರು ದಿನಗಳ ಜಾತ್ರೆಯಷ್ಟೇ ಅಲ್ಲ. ಎನ್ನುವ ಸತ್ಯವನ್ನು ಎದೆಯೊಳಗೆ ಇಟ್ಟುಕೊಂಡು ಸಮಾಜಕ್ಕೆ ಕೊಡುಗೆ ನೀಡಿರುವ ಶ್ರೀ ಶಿವರಾತ್ರೀಶ್ವರ ಜಯಂತ್ಯುತ್ಸವನ್ನು ಮಳವಳ್ಳಿಯಲ್ಲಿ ಆಚರಿಸಲಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಜಗದ್ಗುರು ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು ಹತ್ತನೇ ಶತಮಾನದಲ್ಲಿ ಧಾರ್ಮಿಕ ಪ್ರಜ್ಞೆ ವಿಸ್ತರಿಸುವ ಮೂಲಕ ಭಾರತೀಯ ಸಂಸ್ಕೃತಿಯನ್ನು ಸುಧಾರಿಸುವಲ್ಲಿ ಸುತ್ತೂರು ಶ್ರೀಮಠ ಪ್ರಮುಖ ಪಾತ್ರ ವಹಿಸಿರುತ್ತದೆ. ಧರ್ಮ, ಸಂಸ್ಕೃತಿ, ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಅಧ್ಯಾತ್ಮಿಕ ಪ್ರಭಾವ ನಿರ್ಮಾಣ ಮಾಡಿ ಸುತ್ತೂರು ಶ್ರೀಮಠದ ಪರಂಪರೆಯ ಎಲ್ಲ ಗುರುಗಳು ಕಾರ್ಯನಿರ್ವಹಿಸಿದ್ದಾರೆ. ಈ ಪರಂಪರೆಯನ್ನು ಮತ್ತಷ್ಟು ಉಜ್ವಲವಾಗಿ ಬೆಳಗುವಂತೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರು ಮುನ್ನಡೆಸುತ್ತಾ ಬರುತ್ತಿದ್ದಾರೆ ಎಂದರು.

ಸಚಿವರಾದ ಶ್ರೀ ಈಶ್ವರ್ ಬಿ. ಖಂಡ್ರೆಯವರು ಮಠಗಳು ಹಾಗೂ ಸ್ವಾಮಿಗಳವರಿಂದ ಸಮಾಜ ಸುಸಂಸ್ಕೃತವಾಗಿದೆ. ನವಕರ್ನಾಟಕ ನಿರ್ಮಾಣದ ಕಾರ್ಯದಲ್ಲಿ ಎಲ್ಲ ಗುರುಗಳೂ ಅವರದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಕಳೆದ 33 ವರ್ಷಗಳಿಂದ ಬೇರೆ ಬೇರೆ

ಕಡೆಗಳಲ್ಲಿ ಶ್ರೀ ಶಿವರಾತ್ರೀಶ್ವರರ ಜಯಂತ್ಯುತ್ಸವ ನಡೆಯುತ್ತಿದೆ. ದೇಶಕ್ಕೆ ಮೊದಲು ಬೆಳಕು ನೀಡಿದ ಮಳವಳ್ಳಿ ಕ್ಷೇತ್ರದಲ್ಲಿ ಇದೊಂದು ಅದ್ಭುತ ಕಾರ್ಯಕ್ರಮವಾಗಿ ರೂಪುಗೊಂಡಿದೆ. ನಾಡಿನ ಯುವ ಸಮೂಹಕ್ಕೆ ಇತಿಹಾಸ ತಿಳಿಸುವ ನಿಟ್ಟಿನಲ್ಲಿ ಇಂಥ ಕಾರ್ಯಕ್ರಮಗಳಿಂದ ಪ್ರೇರಣೆ ಸಿಗಬೇಕು ಎನ್ನುವ ದೃಷ್ಟಿಯಿಂದ ಜಯಂತ್ಯುತ್ಸವ ನಡೆಯುತ್ತಿದೆ. ಸುತ್ತೂರು ಮಠಕ್ಕೆ ಅದರದೇ ಆದ ಇತಿಹಾಸ ಹಾಗೂ ಪರಂಪರೆ ಇದೆ. ಶ್ರೀಗಳು ಸಮಾಜಕ್ಕಾಗಿ ಮಾಡಿರುವ ಸೇವೆ ಅನನ್ಯ, ಶ್ರೀಮಠವು ನೊಂದ ಬೆಂದು ಬಸವಳಿದ ಅನೇಕರಿಗೆ ದಾರಿ ದೀಪವಾಗಿದೆ ಎಂದರು.

ಶಾಸಕರು ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ತಮ್ಮ ಜೀವಿತಾವಧಿಯಲ್ಲಿ ಸಮಾಜದ ಸುಧಾರಣೆಗೆ ಶ್ರಮಿಸಿದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಸೇವೆ ಅನನ್ಯ. ಸುತ್ತೂರು ಮಠ ಬಡವರಿಗೆ ಆಶ್ರಯ ನೀಡುವ ಕೆಲಸ ಮಾಡಿಕೊಂಡು ಬಂದಿದೆ. ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕಾರ್ಯವನ್ನು ಹಾಗೂ ಈ ಮಠದ ಮಹತ್ವವನ್ನು ಜಗತ್ತಿಗೆ ಪರಿಚಯಿಸುವ ಕೆಲಸವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮಾಡುತ್ತಿದ್ದಾರೆ ಎಂದರು.

ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಎಚ್.ಟಿ. ಮಂಜು, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷರಾದ ಶ್ರೀ ಶಂಕರ ಮಹದೇವ ಬಿದರಿ, ಮಾಜಿ ಶಾಸಕರಾದ ಡಾ. ಕೆ. ಅನ್ನದಾನಿ, ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಶ್ರೀಮತಿ ನಾಗಮಣಿ ನಾಗೇಗೌಡ ಉಪಸ್ಥಿತರಿದ್ದರು. ಶ್ರೀ ಡಿ.ಎಂ. ಮಹಂತದೇವರು ಪ್ರಾರ್ಥಿಸಿದರು. ಶ್ರೀ ಕೆ.ಎಸ್. ಆನಂದ ಸ್ವಾಗತಿಸಿದರು. ಶ್ರೀ ಜಯಶಂಕರ್ ವಂದಿಸಿದರು. ಶ್ರೀ ಅಂಬರೀಶ್ ಕಾರ್ಯಕ್ರಮ ನಿರೂಪಿಸಿದರು.

**ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು**

ಜೀವನದಲ್ಲಿ ಎಲ್ಲರೂ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 21ರಂದು ಮಳವಳ್ಳಿಯಲ್ಲಿ ನಡೆದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ ಮಹೋತ್ಸವದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಯಂತಿ ಬಹಳ ಅಭೂತಪೂರ್ವವಾಗಿ ನೆರವೇರಿದೆ. ಒಂದು ತಾಲೂಕು ಕೇಂದ್ರಕ್ಕೆ ದೇಶದ ಪ್ರಥಮ ಪ್ರಜೆಗಳಾದ ರಾಷ್ಟ್ರಪತಿಯವರೇ ಬಂದಿದ್ದು ಎಲ್ಲರಿಗೂ ಅತೀವ ಸಂತಸ ತಂದಿದೆ. ಹತ್ತನೇ ಶತಮಾನದಲ್ಲಿ ನಾಡಿನಲ್ಲಿ ಶಾಂತಿ, ಪ್ರೀತಿ, ಸೌಹಾರ್ದ ಸಾರಿದ ಮಹಾನ್ ಸಂತರು ಶ್ರೀ ಶಿವರಾತ್ರೀಶ್ವರರು. ಆದಿ ಜಗದ್ಗುರುಗಳು ನಾಡಿನ ಜನರ ಹಿತಕ್ಕಾಗಿ ಕ್ರಿಯಾಶೀಲವಾಗಿ ನಿರಂತರವಾಗಿ ಶ್ರಮಿಸಿದರು. ಇಂತಹ ಮಹನೀಯರು ಸಾರಿದ ಸದ್ಭಾವನೆ, ಚಿಂತನೆ, ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು. ಜಯಂತ್ಯುತ್ಸವದ ಎಲ್ಲ

ಕಾರ್ಯಕ್ರಮಗಳಿಗೆ ಆರಂಭದ ದಿನಗಳಿಂದ ಕೊನೆ ಕ್ಷಣದವರೆಗೂ ಭಕ್ತರು, ಸಾರ್ವಜನಿಕರು ಸಾಗರೋಪಾದಿಯಾಗಿ ಬಂದಿದ್ದು, ಮನಸ್ಸು ತುಂಬಿ ಬಂದಿದೆ ಎಂದರು.

ತುಮಕೂರು ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ನಾಡಿನಲ್ಲಿ ಶಾಂತಿ, ಸೌಹಾರ್ದದ ಸಂದೇಶ ಸಾರಿದ್ದರು. ತಂತ್ರಜ್ಞಾನ, ವಿಜ್ಞಾನ ಬೆಳೆದಂತೆ ಇಂದು ಶಾಂತಿ ನೆಮ್ಮದಿ ಇಲ್ಲದಂತಾಗಿದೆ. ಯುವಕರು ಮನಸ್ಸಿನೊಳಗೆ ಶಾಂತಿ ನೆಮ್ಮದಿ ಸೃಷ್ಟಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಸಂತರು ಕೆಲವೇ ವ್ಯಕ್ತಿಗಳಿಗೆ ಸೀಮಿತರಾಗದೇ ಎಲ್ಲರ ಬದುಕಿನ ಅಭಿವೃದ್ಧಿಗಾಗಿ ಶ್ರಮಿಸಿದರು. ಸಾವಿರಾರು ವರ್ಷಗಳಿಂದ ಶ್ರೇಷ್ಠ ಗುರು ಪರಂಪರೆಯನ್ನು ಸುತ್ತೂರು ಶ್ರೀಮಠ ಮುಂದುವರೆಸಿಕೊಂಡು ಬಂದಿದೆ. ಇಂತಹ ಪ್ರಕೃತಿಯ ಮಡಿಲಿನಲ್ಲಿ ಜಯಂತ್ಯುತ್ಸವ ನೆರವೇರಿದ್ದು ಶ್ಲಾಘನೀಯ ಎಂದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸೂಫಿಗಳು, ಸಮಾಜ ಸುಧಾರಕರು, ಶಿವಯೋಗಿಗಳು ಸಮಾಜ ಸುಧಾರಣೆಗಾಗಿ ಮುಖ್ಯವಾದ ಪಂಕ್ತಿಯಲ್ಲಿ ಕೆಲಸ ಮಾಡಿದ್ದಾರೆ. ಸಮಾಜದಲ್ಲಿ ಅನೇಕ ಧರ್ಮ ಜಾತಿಗಳಿದ್ದು, ಅಸಮಾನತೆಯಿಂದಾಗಿ ಶಾಂತಿ ನೆಲೆಸಲು ಸಾಧ್ಯವಾಗಿಲ್ಲ. ಧರ್ಮಗಳು ಪ್ರೀತಿ ಕರುಣೆ ತೋರಿಸಿ ಎಂದು ಹೇಳಿವೆಯೇ ಹೊರತು ದ್ವೇಷ ಮಾಡಿ ಎಂದು ಹೇಳಿಲ್ಲ. ನಿಜ ಶರಣರಾದ ಬಸವಣ್ಣನವರು ಸಾವಿರಾರು ವರ್ಷಗಳ ಹಿಂದೆ ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಎಂದರು. ಆದರೂ ಇಷ್ಟು ವರ್ಷಗಳು ಕಳೆದರೂ ಜಾತಿ ವ್ಯವಸ್ಥೆ ಕಡಿಮೆ ಆಗಿಲ್ಲ. ಕುವೆಂಪು ಅವರ ಕರೆಯಂತೆ  ನಾಡು ಸರ್ವಜನಾಂಗದ ಶಾಂತಿಯ ತೋಟವಾಗಬೇಕು. ಮನುಷ್ಯ ಧರ್ಮ ನಿರ್ಮಾಣವಾಗಬೇಕು. ನಾವುಗಳು ಪ್ರಾಣಿಗಳನ್ನು ಪ್ರೀತಿಸುತ್ತೇವೆ. ಆದರೆ, ನಮ್ಮ ಸುತ್ತಲೂ ವಾಸಿಸುವ ಮನುಷ್ಯನನ್ನು ದ್ವೇಷಿಸುವ ಪರಿಸ್ಥಿತಿ ಇದೆ. ಸಮಸಮಾಜ ನಿರ್ಮಾಣ ಆಗಬಾರದು ಎಂದು ದ್ವೇಷ ಬಿತ್ತುವ ದುಷ್ಟಶಕ್ತಿಗಳಿವೆ. ಅವುಗಳನ್ನು ಗುರುತಿಸಿ ದಮನಮಾಡಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಬೆಳ್ಳಿಪಲ್ಲಕ್ಕಿ ಉತ್ಸವವು ಶ್ರೀಮಠದ ಸಕಲ ಬಿರುದಾವಳಿಗಳು, ಮಂಗಳವಾದ್ಯ ಹಾಗೂ ಜನಪದ ಕಲಾತಂಡಗಳೊಂದಿಗೆ ಅನುಭವಮಂಟಪದಿಂದ ಹೊರಟು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜರುಗಿತು.

ಕನಕಪುರ ಶ್ರೀ ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳು, ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿ, ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಶ್ರೀ ಎ.ಬಿ. ರಮೇಶ್‌ಬಾಬು ಬಂಡಿಸಿದ್ದೇಗೌಡ, ಶ್ರೀ ಪಿ. ರವಿಕುಮಾರ್, ಶ್ರೀ ಕೆ.ಎಂ. ಉದಯ್, ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಶ್ರೀ ಮಧು

ಜಿ ಮಾದೇಗೌಡ, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಕೆ ವಿವೇಕಾನಂದ, ಮಾಜಿ ಉಪಸಭಾಪತಿಗಳಾದ ಶ್ರೀ ಮರಿತಿಬ್ಬೇಗೌಡ, ಮಾಜಿ ಶಾಸಕರಾದ ಶ್ರೀಮತಿ ಮಲ್ಲಾಜಮ್ಮ, ಮೈ ಶುಗರ್ ಸಕ್ಕರೆ ಕಾರ್ಖಾನೆ ಅಧ್ಯಕ್ಷರಾದ ಶ್ರೀ ಸಿ.ಡಿ. ಗಂಗಾಧರ್, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿ, ಮುಡಾ ಅಧ್ಯಕ್ಷರಾದ ಶ್ರೀ ಬಿ.ಪಿ. ಪ್ರಕಾಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಸ್. ಶಿವಣ್ಣ, ಮನ್‌ಮುಲ್ ಅಧ್ಯಕ್ಷರಾದ ಶ್ರೀ ಶಿವಕುಮಾರ್, ನಿರ್ದೇಶಕರಾದ ಶ್ರೀ ಡಿ. ಕೃಷ್ಣೇಗೌಡ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀ ಎಂ.ಎನ್. ಸುರೇಶ್ ಉಪಸ್ಥಿತರಿದ್ದರು. ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಕೆ.ಜಿ. ವಿನುತಾ ಮತ್ತು ಶ್ರೀಮತಿ ರೂಪಾ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ಆರ್.ಎನ್. ವಿಶ್ವಾಸ್ ಕಾರ್ಯಕ್ರಮ ನಿರೂಪಿಸಿದರು.

**ಗುರು–ಶಿಷ್ಯರ ಸಂಬಂಧ ಅನ್ಯೋನ್ಯವಾಗಿದ್ದರೆ ಏನಾದರೂ ಸಾಧಿಸಬಹುದು**

ಗುರು–ಶಿಷ್ಯರ ಸಂಬಂಧ ಅನ್ಯೋನ್ಯವಾಗಿದ್ದರೆ ಏನಾದರೂ ಸಾಧಿಸಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ಡಿಸೆಂಬರ್ 28ರಂದು ಹಾವೇರಿ ಶ್ರೀ ಹುಕ್ಕೇರಿಮಠದ ಶ್ರೀ ಶಿವಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳ ಸುವರ್ಣ ಮಹೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀಮಠದ ಶಿವಬಸವ ಶ್ರೀಗಳು ಹಾಗೂ ಶಿವಲಿಂಗ ಶ್ರೀಗಳ ತಪಃಶಕ್ತಿಯಿಂದ ಶ್ರೀ ಸದಾಶಿವ ಸ್ವಾಮಿಗಳವರು ಕ್ರಿಯಾಶೀಲರಾಗಿ ಸದ್‌ಚಿಂತನೆ ಮಾಡುತ್ತ ಭಕ್ತರನ್ನು ಉದ್ಧರಿಸುತ್ತಿದ್ದಾರೆ. ಎಲ್ಲರಲ್ಲಿಯೂ ಸದ್ಭಾವನೆ, ಸನ್ನಡತೆ ರೂಪಿಸುತ್ತ ಸಂಚಲನ ಮೂಡಿಸಿರುವರು. ವ್ಯಕ್ತಿಯ ಶ್ರೇಯಸ್ಸಿಗೆ ತೊಡಕಾಗುವ ಎಲ್ಲ ಸಂಗತಿಗಳನ್ನು ದೂರಮಾಡುವ ಕಾರ್ಯವನ್ನು ಮಾಡಿದ್ದಾರೆ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸದಾಶಿವ ಶ್ರೀಗಳು ಧರ್ಮಜಾಗೃತಿಯನ್ನು ಮೂಡಿಸುವ ಕಾರ್ಯವನ್ನು ಕೈಗೊಂಡಿದ್ದಾರೆ. ಮನುಷ್ಯ ಸ್ವಭಾವತಃ ಸುಖವನ್ನೇ ಬಯಸುತ್ತಾನೆ. ಜೀವನದಲ್ಲಿ ಯಾವುದೇ ಕಷ್ಟಗಳು ಬರಬಾರದೆಂದು ನಿರೀಕ್ಷೆ ಮಾಡುತ್ತಾನೆ. ಆದರೆ ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸುವವನು ಮಾತ್ರ ಸದಾ ಸುಖಿಯಾಗಿರುತ್ತಾನೆ. ಮನುಷ್ಯನನ್ನು ಯಾವುದೇ ಆಸ್ತಿ, ಅಂತಸ್ತುಗಳು ಕಾಪಾಡುವುದಿಲ್ಲ. ಆತ ಭಗವಂತನಲ್ಲಿ ಹೊಂದಿರುವ ಆತ್ಮನಿರೀಕ್ಷಣೆ ಮತ್ತು ಸದ್ಭಾವನೆಗಳು ಮಾತ್ರ ಆತನ ಕೈಹಿಡಿಯುತ್ತವೆ ಎಂದು ಹೇಳಿದರು.

ಕೊಪ್ಪಳ ಶ್ರೀ ಗವಿಮಠದ ಜಗದ್ಗುರು ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಅರಿಯದವರೊಡನೆ ಸಾವಿರ ಹೆಜ್ಜೆ ಹಾಕುವುದಕ್ಕಿಂತ ಅರಿತವರೊಡನೆ ನಾಲ್ಕು ಹೆಜ್ಜೆ ಹಾಕುತ್ತ ದುಶ್ಚಟ ಹಾಗೂ ದುರ್ಗುಣ ದೂರಗೊಳಿಸಿದರೆ ಸುಂದರ ಬದುಕು ಕಟ್ಟಿಕೊಳ್ಳಬಹುದು. ಹುಕ್ಕೇರಿಮಠದ ಸದಾಶಿವ ಶ್ರೀಗಳು ಸಹಜ ಪ್ರೇಮ ಉಳ್ಳವರು. ದೇವರು ನಮಗೆ ಸುಂದರ ಬದುಕು ಕೊಟ್ಟಿದ್ದಾನೆ. ಬದುಕೆಂಬುದು ಆರಾಧನೆ, ದಿಪೋತ್ಸವ. ದೇವರೇ ಖುಷಿಪಡುವಂತೆ ನಾವು ಬದುಕಬೇಕು. ಬದುಕಿನ ಬೆಲೆ ತಿಳಿದು ಉತ್ಸಾಹದಿಂದ ಬದುಕಬೇಕು. ಬದುಕನ್ನು

ಅನುಭವಿಸಲು ಒಳ್ಳೆಯ ಮಾತುಗಳನ್ನು ಆಲಿಸಬೇಕು. ಹುಕ್ಕೇರಿಮಠದ ಜಾತ್ರಾ ಮಹೋತ್ಸವ ಅಂಗವಾಗಿ ಜರುಗಿದ ಪ್ರವಚನದ ಸಂದೇಶಗಳು ತಮ್ಮೆಲ್ಲರ ಬದುಕಿಗೆ ಬೆಳಕಾಗಿರಲಿ ಎಂದರು.

ಹಾರನಹಳ್ಳಿ ಶ್ರೀ ಕೋಡಿಮಠ ಸಂಸ್ಥಾನದ ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಸ್ವಾಮಿಗಳು ಭಾರತೀಯ ಪರಂಪರೆ. ಸಂತರ ಸಹವಾಸ ಹಾಗೂ ಆಧ್ಯಾತ್ಮ ಚಿಂತನೆ ಜಗತ್ತನ್ನು ಬೆಳಗಿಸುತ್ತವೆ. ಶ್ರೀ ಶಿವಬಸವ ಹಾಗೂ ಶ್ರೀ ಶಿವಲಿಂಗ ಸ್ವಾಮಿಗಳ ತಪೋಬಲದಿಂದ ಶ್ರೀ ಸದಾಶಿವ ಸ್ವಾಮಿಗಳವರು ಉತ್ತಮ ಜನಕಲ್ಯಾಣ ಕಾರ್ಯ ಮಾಡುತ್ತಿರುವರು. ಅವರಿನ್ನೂ ಉತ್ತರೋತ್ತರವಾಗಿ ಬೆಳೆಯಲಿ ಎಂದು ಹಾರೈಸಿದರು.

ಸಂಸದರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ವಿಶ್ವಗುರು ಬಸವಣ್ಣನವರ ಬೋಧನೆ ಮತ್ತು ತತ್ತ್ವಗಳು ಸಮಸ್ತ ಕನ್ನಡಿಗರ ಆಸ್ತಿ. ಜನರಿಗೆ ಸುಲಭವಾಗಿ ಅರ್ಥವಾಗುವ ನಮ್ಮದೇ ಭಾಷೆಯ ವಚನ ಪರಂಪರೆ ನಮ್ಮ ರಾಜ್ಯದಲ್ಲಿದೆ. ಧಾರ್ಮಿಕವಾಗಿ ಅನೇಕ ಕೆಲಸಗಳನ್ನು ಮಾಡಿರುವ ನಮ್ಮ ರಾಜವಂಶದ ಏಳ್ಗೆಗೆ ಅನೇಕ ಸ್ವಾಮಿಗಳ ಆಶೀರ್ವಾದವಿದೆ. ಶ್ರೇಷ್ಠ ಕರ್ನಾಟಕ ಮತ್ತು ವಿಕಸಿತ ಭಾರತಕ್ಕಾಗಿ ಕೈಜೋಡಿಸೋಣ ಎಂದರು.

ಹುಬ್ಬಳ್ಳಿಯ ಶ್ರೀ ಮೂರುಸಾವಿರಮಠದ ಜಗದ್ಗುರು ಡಾ. ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು, ಮುಂಡರಗಿ ಜಗದ್ಗುರು ಡಾ. ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು, ಶಿರಹಟ್ಟಿ ಜಗದ್ಗುರು ಶ್ರೀ ಫಕೀರ ಸಿದ್ದರಾಮ ಮಹಾಸ್ವಾಮಿಗಳು, ಶ್ರೀ ಷಣ್ಮುಖಾರೂಢಮಠದ ಸದ್ಗುರು ಶ್ರೀ ಅಭಿನವ ಸಿದ್ಧಾರೂಢ ಸ್ವಾಮಿಗಳು, ಶೇಗುಣಿಸಿ ಶ್ರೀ ವಿರಕ್ತಮಠದ ಶ್ರೀ ಮಹಾಂತಪ್ರಭು ಸ್ವಾಮಿಗಳು, ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿ, ಶಾಸಕರಾದ ಶ್ರೀ ಬಿ.ಬಿ. ಚಿಮ್ಮನಕಟ್ಟಿ, ಶ್ರೀ ಬಸವರಾಜ ಶಿವಣ್ಣನವರ, ಶ್ರೀ ರುದ್ರಪ್ಪ ಲಮಾಣಿ, ಶ್ರೀ ಶ್ರೀನಿವಾಸ ಮಾನೆ, ಶ್ರೀ ಪ್ರಕಾಶ ಕೋಳಿವಾಡ, ಶ್ರೀ ಯಾಸೀರಖಾನ್ ಪಠಾಣ ಉಪಸ್ಥಿತರಿದ್ದರು.

**ಶರಣ ಸಾಹಿತ್ಯ ಜಗತ್ತಿಗೆ ನೀಡಿದ ಅಪ್ರತಿಮ ಕೊಡುಗೆ**

ಶರಣ ಸಾಹಿತ್ಯ ಕರ್ನಾಟಕ ಜಗತ್ತಿಗೆ ನೀಡಿದ ಅಪ್ರತಿಮ ಕೊಡುಗೆಯಾಗಿದೆ ಎಂದು ಪರಮಪೂಜ್ಯ ಜದಗ್ಗುರುಗಳವರು ಡಿಸೆಂಬರ್ 29ರಂದು ರಾಣಿಬೆನ್ನೂರಿನಲ್ಲಿ ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಹಾವೇರಿ ಜಿಲ್ಲಾ ಪ್ರಥಮ ಶರಣ ಸಾಹಿತ್ಯ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. 21ನೇ ಶತಮಾನದಲ್ಲಿ ಸಂವಿಧಾನದಡಿ ಕೈಗೊಂಡ ಸುಧಾರಣೆಗಳನ್ನು ಬಸವಾದಿ ಶರಣರು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಸಾಧಿಸಿ ತೋರಿಸಿರುವರು. ಶರಣರು ಸರಳ ಸುಂದರ ಸಂದೇಶಗಳನ್ನು ವಚನಗಳ ಮೂಲಕ ಪ್ರಚುರಪಡಿಸಿದರು. ವಚನಗಳಿಗೆ ಯಾವುದೇ ವ್ಯಾಖ್ಯಾನದ ಅಗತ್ಯವಿಲ್ಲ.

ಮನುಷ್ಯ ಭಗವಂತನಿಗೆ ಸಮರ್ಪಣೆ ಮಾಡಿದಾಗ ಅವನ ಒಲುಮೆ ಪ್ರಾಪ್ತಿಯಾಗುತ್ತದೆ ಎಂಬುದನ್ನು ವಚನಗಳು ತಿಳಿಸಿವೆ. ವಚನಗಳಲ್ಲಿ ಸಾಮಾಜಿಕ ಮೌಲ್ಯಗಳಿವೆ. ಅವುಗಳನ್ನು ಸಂರಕ್ಷಣೆ ಮಾಡುವುದು 12ನೇ ಶತಮಾನದಲ್ಲಿ ದೊಡ್ಡ ಸವಾಲಾಗಿತ್ತು. ಮನುಷ್ಯನಿಗೆ ಬೇಕಾದುದನ್ನು ನೀಡುವ ಶಕ್ತಿ ವಚನ ಸಾಹಿತ್ಯದಲ್ಲಿದೆ ಎಂದರು.

ಶಾಸಕರಾದ ಶ್ರೀ ಪ್ರಕಾಶ್ ಕೋಳಿವಾಡರವರು ವಚನ ಸಾಹಿತ್ಯ ಕೇವಲ ಕಾವ್ಯವಾಗಿರದೆ ಅದು ಪ್ರತಿ ಮನುಷ್ಯನಿಗೆ ದಾರಿ ತೋರುವ ಮಾರ್ಗಸೂಚಿಯಾಗಿದೆ. ಪ್ರಾಣಿ, ಪಕ್ಷಿಗಳಲ್ಲಿ ಇರುವ ಒಗ್ಗಟ್ಟು ಮನುಷ್ಯರಲ್ಲಿ ಇಲ್ಲ. 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಮಹಿಳೆಯರಿಗೆ ಸಮಾನತೆಯ ಗೌರವ ನೀಡಲಾಗಿತ್ತು. ನಾವೆಲ್ಲರೂ ಇಂತಹ ಧರ್ಮ ಸಭೆಗಳಲ್ಲಿ ಪಾಲ್ಗೊಂಡು ಶರಣರ ಸಂದೇಶ ಪಾಲನೆ ಮಾಡಬೇಕು ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಬಿ. ಸೋಮಶೇಖರ ರವರು ವಚನಗಳು ಕಾವ್ಯವಲ್ಲ, ನಾಟಕಗಳಲ್ಲ ಅವು ಅಂತರಂಗದ ಅಭಿಮಾನ, ನೋವು ನಲಿವುಗಳನ್ನು ಅರ್ಥಮಾಡಿಕೊಂಡು ರಚನೆ ಮಾಡಿದ ಅಪೂರ್ವ ಕಲಾಕೃತಿಗಳು. ವಚನ ಸಾಹಿತ್ಯದ ಬಗ್ಗೆ ಇಂದಿನ ಮಕ್ಕಳಿಗೆ ತಿಳಿಸಿದರೆ ವಿಶ್ವದಲ್ಲಿ ಶಾಂತಿ ನೆಲೆಸಲು ಸಾಧ್ಯವಿದೆ. ಬಸವಾದಿ ಶರಣರು ವಿಶ್ವಮಾನವತ್ವ ಮತ್ತು ಸ್ತ್ರೀ ಸಮಾನತೆಯನ್ನು ಸಾರಿದರು. ಜನರಿಗೆ ಕಾಯಕ ಸಿದ್ಧಾಂತವನ್ನು ನೀಡಿದರು. ಜಾತ್ಯತೀತ ಪ್ರಜ್ಞೆಯನ್ನು ಬೆಳೆಸಿದರು ಎಂದರು. ಮಾಜಿ ಶಾಸಕ ಶ್ರೀ ಅರುಣಕುಮಾರ ಪೂಜಾರ ಮಾತನಾಡಿದರು.

ಸಾಣೇಹಳ್ಳಿಯ ಶ್ರೀ ತರಳಬಾಳು ಶಾಖಾಮಠದ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದರು. ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮಿಗಳು, ಗುಡ್ಡದ ಆನ್ವೇರಿ ಶ್ರೀ ವಿರಕ್ತಮಠದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ದೊಡ್ಡಪೇಟೆ ಶ್ರೀ ವಿರಕ್ತಮಠದ ಶ್ರೀ ಗುರುಬಸವ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶ್ರೀ ಮಾರುತಿ ಶಿಡ್ಲಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪರಿಷತ್ತಿನ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಮಾಳಗಿ, ಶ್ರೀ ವಾಸಣ್ಣ ಕುಸಗೂರ, ಶ್ರೀ ಜಿ.ಬಿ. ಮಾಸಣಗಿ, ಶ್ರೀಮತಿ ರುಕ್ಮಿಣಿ ಸಾವಕಾರ, ಶ್ರೀ ಜಿ.ಜಿ. ಹೊಟ್ಟಿಗೌಡ್ರು, ಶ್ರೀ ಎಸ್.ಎಸ್. ರಾಮಲಿಂಗಣ್ಣನವರ, ಶ್ರೀಮತಿ ಭಾರತಿ ಜಂಬಗಿ, ಶ್ರೀ ವಿನೋದ ಜಂಬಗಿ ಉಪಸ್ಥಿತರಿದ್ದರು. ಕು. ರಜನಿ ಕರಿಗಾರ ವಚನ ಗಾಯನ ಪ್ರಸ್ತುತಪಡಿಸಿದರು. ಕು. ದಾನೇಶ್ವರಿ ಸೂರಣಗಿ ವಚನ ನೃತ್ಯ ಪ್ರದರ್ಶಿಸಿದರು. ಶ್ರೀಮತಿ ರಾಜೇಶ್ವರಿ ಪಾಟೀಲ ಸ್ವಾಗತಿಸಿದರು. ಶ್ರೀ ಎಸ್.ಎಚ್. ಪಾಟೀಲ ವಂದಿಸಿದರು. ಶ್ರೀಮತಿ ಜಯಶ್ರೀ ನೀರಲಗಿಮಠ ಮತ್ತು ಶ್ರೀ ಜಗದೀಶ ಮಳೇಮಠ ಕಾರ್ಯಕ್ರಮ ನಿರೂಪಿಸಿದರು.

□

# ಪ್ರಸಾದ



## ಕೃತಿ–ಸ್ವೀಕೃತಿ

**ದೇವನೂರು ಶ್ರೀ ಗುರುಮಲ್ಲೇಶ್ವರ ಲಿಂಗಲೀಲಾ ವಿಲಾಸ (ವಾರ್ಧಕ ಷಟ್ಪದಿ)**
ಪ್ರೊ. ಶಂಕರಗೌಡ್ರು ಮ. ಬಿರಾದಾರ (ಗುಂಡಕನಾಳ)
ಪ್ರ: ಶಂಕರಗೌಡ್ರು ಮ. ಬಿರಾದಾರ
ಪು : 192, ಬೆಲೆ : 150/–

**ಶ್ರೀ ಗುರು ಹಾಲಶಂಕರ ವಚನಾಮೃತ**
ಹಾಲಸ್ವಾಮಿ ಎಸ್.ಬಿ.
ಪ್ರ: ಅಮೃತಧಾರ ಕ್ರಿಯೇಷನ್ಸ್

**ಶಿವಶರಣೆಯರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ**
ಡಾ. ಸುಲೋಚನಾ ಸಂಗನ ಬಸವಮಟ್ಟಿ
ಪ್ರ: ಅವ್ವ–ಅಪ್ಪ ಪ್ರಕಾಶನ, ರಜತಗಿರಿ
ಪು : 264, ಬೆಲೆ : 300/–

**ಒಲವಿನ ಹಣತೆ (ಕವನ ಸಂಕಲನ)**
ಡಾ. ಸುಲೋಚನಾ ಸಂಗನ ಬಸವಮಟ್ಟಿ
ಪ್ರ: ಅವ್ವ–ಅಪ್ಪ ಪ್ರಕಾಶನ, ರಜತಗಿರಿ
ಪು : 94, ಬೆಲೆ : 100/–

**ಮಹಾಂತ ಮಾಣಿಕ್ಯ ಮಾಲೆ (ವಚನ ಸಂಕಲನ)**
ಬಸವರಾಜ ಹೂಗಾರ
ಪ್ರ: ಶತಾಯುಷಿ ಶಿಕ್ಷಕ ಸಿ.ಸಿ. ಗಣಾಚಾರಿ ಸೇವಾ ಸಂಸ್ಥೆ (ರಿ), ಇಳಕಲ್ಲ
ಪು : 160, ಬೆಲೆ : 250/–

**ಷಡ್ಗುಣ**
ಎಸ್. ರಾಮನಾಥ
ಪ್ರ: ಈಶ್ವರಿ ಪ್ರಕಾಶನ, ಮೈಸೂರು
ಪು : 500, ಬೆಲೆ : 625/–

**ವಚನ ಜೀವನ ಮಾರ್ಗದರ್ಶನ**
ಡಾ. ಶಶಿಧರ ಕುಂಬಾರ
ಡಾ. ಸಾಸ್ವೆಹಳ್ಳಿ ಸತೀಶ್
ಪ್ರ: ಮಾವಳಿ ಪಬ್ಲಿಕೇಷ್
ವಿಜಯನಗರ, ಬೆಂಗಳೂರು
ಪು : 148, ಬೆಲೆ : 180/–

**ಶ್ರೀ ಮಲೆ ಮಹದೇಶ್ವರ**
ನಗರ್ಲೆ ಶಿವಕುಮಾರ
ಪ್ರ: ಸಾಲೂರು ಸಿರಿ
ಶ್ರೀ ಸಾಲೂರು ಬೃಹನ್ಮಠ
ಶ್ರೀ ಮಲೆ ಮಹದೇಶ್ವರ ಬೆಟ್ಟ
ಪು : 78, ಬೆಲೆ : 75/–

**ಬಸವಣ್ಣನವರ ಸುತ್ತಮುತ್ತ (ಸಂಪುಟ–5)**
ಡಾ. ಆರ್.ಬಿ. ಚಿಲಮಿ
ಪ್ರಕಾಶ ಗಿರಿಮಲ್ಲನವರ
ಪ್ರ: ಆರತಿ ಪ್ರಕಾಶನ
ಶಿವನಗರ (ಉತ್ತರ) ಬೀದರ
ಪು : 594, ಬೆಲೆ : 500/–

**ಲಿಂಗಾಯತ ಧರ್ಮದ ಜಿಜ್ಞಾಸೆ**
ಡಾ. ಆರ್.ಬಿ. ಚಿಲಮಿ
ಪ್ರಕಾಶ ಗಿರಿಮಲ್ಲನವರ
ಪ್ರ: ಆರತಿ ಪ್ರಕಾಶನ
ಶಿವನಗರ (ಉತ್ತರ) ಬೀದರ
ಪು : 536, ಬೆಲೆ : 500/–

**ರಾಷ್ಟ್ರೀಯ ಬಸವ ಪುರಸ್ಕಾರ ಅವಾರ್ಡಿ ಎಸ್.ಆರ್. ಗುಂಜಾಳ**
ಪ್ರೊ. ಮಲ್ಲಿಕಾರ್ಜುನ ಪಾಟೀಲ್
ಪ್ರ: ಗ್ರಂಥಾಲಯ ವಿಜ್ಞಾನ ಪ್ರಕಾಶನ ಧಾರವಾಡ
ಪು : 154, ಬೆಲೆ : 200/–

**ದಾಕ್ಷಾಯಿಣಿ ವಚನಗಳು**
ದಾಕ್ಷಾಯಿಣಿ ಜಯದೇವಪ್ಪ
ಪ್ರ: ಅರಿವು ಪ್ರಕಾಶನ
ವೆಂಕಟೇಶನಗರ, ಶಿವಮೊಗ್ಗ
ಪು : 308, ಬೆಲೆ : 350/–

**ಡ್ರಾಮಾ ಕ್ಲಬ್**
ಎಸ್. ರಾಮನಾಥ ರಂಗಾಯಣ
ಪ್ರ: ಅನುಬುತ್ತಿ, ಮೈಸೂರು
ಪು : 196, ಬೆಲೆ : 230/–

**ಗಾಧೀಮರ (ಕವಿತೆಗಳು)**
ಡಾ. ನೀ.ಗೂ. ರಮೇಶ್
ಪ್ರ: ಶ್ರೀ ಬಸವೇಶ್ವರ ಪ್ರಕಾಶನ
ಕೆ.ಆರ್. ಮೊಹಲ್ಲಾ, ಮೈಸೂರು
ಪು : 164, ಬೆಲೆ : 205/–

## ಲೇಖಕರ ವಿಳಾಸ

**Smt. Droupadi Murmu**
Hon'ble President
Rashtrapathi Bhavan
President's Estate
New Delhi 110 004

**ಡಾ. ಟಿ.ಎಸ್. ಸತ್ಯವತಿ**
ನಂ.296, 5ನೇ ಮೇನ್ ರೋಡ್
ಮಹಾಲಕ್ಷ್ಮೀ ಲೇಔಟ್
ಬೆಂಗಳೂರು 560 086

**ಶ್ರೀ ನಿತೇಶ್ ಪಾಟೀಲ್**
ಪ್ರಾದೇಶಿಕ ಆಯುಕ್ತರು
ಹೈವೀವ್, ವಿನೋಭಾ ರಸ್ತೆ
ಕಲಾಮಂದಿರದ ಎದುರು
ಮೈಸೂರು 570 020

**ಡಾ. ಪಿ. ಮಣಿ**
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರಾಮುವಿ, ಮುಕ್ತಗಂಗೋತ್ರಿ
ಮೈಸೂರು 570 006

ಹಿಂಬದಿ ಪುಟದ ಚಿತ್ರ

ಮಳವಳ್ಳಿಯಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿದ ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರೊಂದಿಗೆ ಪರಮಪೂಜ್ಯ ಜಗದ್ಗುರುಗಳವರು ಹಾಗೂ ತಾಲ್ಲೂಕಿನ ಮಾಠಾಧೀಶರುಗಳು, ಶ್ರೀ ಎನ್. ಚಲುವರಾಯಸ್ವಾಮಿ, ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶ್ರೀ ಥಾವರ್ ಚಂದ್ ಗೆಹ್ಲೋತ್, ಕನಕಪುರ ಕಿರಿಯ ಶ್ರೀಗಳು ಹಾಗೂ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರುಗಳಿದ್ದಾರೆ (16 ಡಿಸೆಂಬರ್ 2025)



ಮಳವಳ್ಳಿಯಲ್ಲಿ ಜರುಗಿದ ಜಯಂತಿ ಮಹೋತ್ಸವದಲ್ಲಿ ಅದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಬೆಳ್ಳಿಪಲ್ಲಕ್ಕಿ ಉತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ವಿವಿಧ ಮಠಾಧೀಶರುಗಳಿದ್ದಾರೆ (21 ಡಿಸೆಂಬರ್ 2025)




ಮಳವಳ್ಳಿಯಲ್ಲಿ ಅದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ವಸ್ತುಪ್ರದರ್ಶನ, ಕೃತಿ ಮತ್ತು ಪಂಚಾಂಗಗಳ ಬಿಡುಗಡೆ ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಪಾಲ್ ಸದಸ್ಯರಾದ ಗೌ.ನ್ಯಾ. ಶ್ರೀ ಎಲ್. ನಾರಾಯಣಸ್ವಾಮಿಯವರು ಉದ್ಘಾಟಿಸಿದರು. ಶ್ರೀ ಕೆ.ಜಿ. ಪುಟ್ಟಹೊನ್ನಯ್ಯ, ಡಾ. ಕೆ. ಅನ್ನದಾನಿ, ಶ್ರೀ ಸಿ.ಎಸ್. ಪುಟ್ಟರಾಜು, ಶ್ರೀ ಎಂ. ಶ್ರೀನಿವಾಸ್, ಉರಿಲಿಂಗಿಪೆದ್ದಿ ಮಠ, ಕಾಗಿನೆಲೆ ಶಾಖಾಮಠ, ದೇವನೂರು ಮಠಗಳ ಶ್ರೀಗಳು, ಶ್ರೀ ವಿಶ್ವೇಶ್ವರ ಭಟ್, ಡಾ. ಕುಮಾರ್, ಶ್ರೀಮತಿ ಕೆ.ಆರ್. ನಂದಿನಿ, ಶ್ರೀ ಮರಿತಿಬ್ಬೇಗೌಡ, ಶ್ರೀ ರಾಮಕೃಷ್ಣ, ನೆಲ್ಲಿಗೆರೆ, ಧನಗೂರು ಮತ್ತು ಕುಂದೂರು ಮಠಗಳ ಶ್ರೀಗಳಿದ್ದಾರೆ (17 ಡಿಸೆಂಬರ್ 2025)



ಮಳವಳ್ಳಿಯಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ 'ಕೌಟುಂಬಿಕ ಸಾಮರಸ್ಯ' ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಲೋಕಾಯುಕ್ತರಾದ ಗೌ.ನ್ಯಾ. ಶ್ರೀ ಬಿ.ಎಸ್. ಪಾಟೀಲ್‌ರವರು ಉದ್ಘಾಟಿಸಿದರು. ಶ್ರೀಮತಿ ರಾಣಿ ಸತೀಶ್, ಶ್ರೀಮತಿ ಶೋಭಾ ಮಳವಳ್ಳಿ, ಶ್ರೀಮತಿ ಮಲ್ಲಾಜಮ್ಮ, ಶ್ರೀ ಬಿ. ಸೋಮಶೇಖರ್, ಮರಳೇಗವಿ ಮಠದ ಶ್ರೀಗಳು, ಶ್ರೀ ಆದಿಚುಂಚನಗಿರಿ ಜಗದ್ಗುರುಗಳವರು, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀಮತಿ ಶೋಭಾ ಪಾಟೀಲ್, ಶ್ರೀ ನಿತೇಶ್ ಪಾಟೀಲ್, ಡಾ. ಎಂ.ಬಿ. ಬೋರಲಿಂಗಯ್ಯ, ಶ್ರೀ ಎಸ್. ಸಚ್ಚಿದಾನಂದ, ಡಾ. ಎನ್.ಎಸ್. ಇಂದ್ರೇಶ್ ಹಾಗೂ ಪ್ರೊ. ಕೆ. ಆರ್. ಮಲ್ಲಿಕಾರ್ಜುನಪ್ಪನವರುಗಳಿದ್ದಾರೆ (19 ಡಿಸೆಂಬರ್ 2025)




ಮಳವಳ್ಳಿಯಲ್ಲಿ ಅದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ 'ಸಾಮಾಜಿಕ ಭಾವೈಕ್ಯತೆ' ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಬಿ.ಎಲ್. ಸಂತೋಷ್‌ರವರು ಉದ್ಘಾಟಿಸಿದರು. ಶ್ರೀ ತೋಂಟದಾರ್ಯ, ಶ್ರೀ ಡಿ.ಎಸ್. ವೀರಯ್ಯ, ಶ್ರೀ ಪ್ರಭುದೇವ್, ಶ್ರೀ ಮುರುಗೇಶ್ ನಿರಾಣಿ, ಸಾಲೂರು ಮಠ, ವಾಟಾಳು ಹಾಗೂ ಕನಕಪುರದ ಹಿರಿಯ ಶ್ರೀಗಳು, ಶ್ರೀ ಡಿ.ಸಿ. ತಮ್ಮಣ್ಣ, ಶ್ರೀ ಎಂ. ರುದ್ರೇಶ್, ಶ್ರೀ ಎಂ.ಆರ್. ಉಮಾಪತಿ, ಶ್ರೀ ಎಸ್. ನಿಶಾಂತ್, ಕುಂದೂರು ಸರ್ಪಭೂಷಣ ಮಠ, ಹೊಸಹಳ್ಳಿ, ಬೆಳಕವಾಡಿ ಮಠಗಳ ಶ್ರೀಗಳಿದ್ದಾರೆ (18 ಡಿಸೆಂಬರ್ 2025)




ಮೈಸೂರು ಸರಸ್ವತಿಪುರಂ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 30ನೆಯ ಸಂಗೀತ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಉದ್ಘಾಟಿಸಿದರು. ಶ್ರೀ ಟಿ.ಪಿ. ಪ್ರಭುಸ್ವಾಮಿ, ಡಾ. ಸಿ.ಜಿ. ಬೆಟಸೂರಮಠ, ವಿದ್ವಾನ್ ಮೈಸೂರು ಎಂ. ನಾಗರಾಜ್, ವಿದ್ವಾನ್ ಮೈಸೂರು ಎಂ. ಮಂಜುನಾಥ್, ಪ್ರೊ. ಕೆ. ರಾಮಮೂರ್ತಿರಾವ್, ವಿದುಷಿ ಟಿ.ಎಸ್. ಸತ್ಯವತಿ, ಶ್ರೀ ಟಿ. ಎಸ್. ಶ್ರೀವತ್ಸ ಹಾಗೂ ಶ್ರೀ ಎಸ್. ರಾಮಪ್ರಸಾದ್‌ರವರುಗಳಿದ್ದಾರೆ (2 ಡಿಸೆಂಬರ್ 2025)



ಮೈಸೂರು ಸರಸ್ವತಿಪುರಂ ನವಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣ 30ನೆಯ ಸಂಗೀತ ಸಮ್ಮೇಳನದ ಸಮಾರೋಪದಲ್ಲಿ ವಿದುಷಿ ಟಿ.ಎಸ್. ಸತ್ಯವತಿಯವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಡಾ. ಪೂರ್ಣಿಮಾ ಕೃಷ್ಣಮೂರ್ತಿ, ಶ್ರೀ ಟಿ.ಪಿ. ಪ್ರಭುಸ್ವಾಮಿ, ಶ್ರೀ ಎಸ್.ಎಸ್. ಅನಂತಮೂರ್ತಿ, ಶ್ರೀ ಎನ್. ರಾಘವನ್, ಡಾ. ಸಿ.ಎ. ಶ್ರೀಧರ್ ಹಾಗೂ ಪ್ರೊ. ಕೆ. ರಾಮಮೂರ್ತಿರಾವ್‌ರವರುಗಳಿದ್ದಾರೆ (6 ಡಿಸೆಂಬರ್ 2025)




ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ವತಿಯಿಂದ ಬೆಂಗಳೂರಿನಲ್ಲಿ ಪರಮಪೂಜ್ಯ ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು ಮತ್ತು ತರಳಬಾಳು ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಇತ್ತೀಚೆಗೆ ದೈವಾಧೀನರಾದ ಶ್ರೀ ಶಾಮನೂರು ಶಿವಶಂಕರಪ್ಪನವರಿಗೆ ನುಡಿನಮನ ಸಲ್ಲಿಸಲಾಯಿತು. ಡಾ. ಶರಣಪ್ರಕಾಶ್ ಆರ್. ಪಾಟೀಲ್, ಶ್ರೀ ಶಂಕರ ಎಂ. ಬಿದರಿ, ಶ್ರೀ ಅಶೋಕ್ ಪಟ್ಟಣ, ಶ್ರೀ ಶರಣಬಸಪ್ಪ ದರ್ಶನಾಪುರ ಹಾಗೂ ಶ್ರೀ ಈಶ್ವರ್ ಬಿ. ಖಂಡ್ರೆಯವರುಗಳಿದ್ದಾರೆ (24.12.2025)



ದಾವಣಗೆರೆಯಲ್ಲಿ ಶ್ರೀ ಶಾಮನೂರು ಶಿವಶಂಕರಪ್ಪನವರ ಶಿವಗಣಾರಾಧನೆ ಹಾಗೂ ನುಡಿನಮನ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಶ್ರೀ ಜಗದೀಶ್ ಶೆಟ್ಟರ್, ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಶ್ರೀ ಬಿ.ಎಸ್. ಯಡಿಯೂರಪ್ಪ, ರಂಭಾಪುರಿ, ಸುತ್ತೂರು, ತರಳಬಾಳು ಮತ್ತು ಆದಿಚುಂಚನಗಿರಿ ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು, ಶ್ರೀ ಸಮರ್ಥ ಶಾಮನೂರು, ಕಾಗಿನೆಲೆ ಶ್ರೀಗಳು, ಶ್ರೀ ಎಸ್.ಎಸ್. ಗಣೇಶ್, ಶ್ರೀ ಹೆಚ್.ಕೆ. ಪಾಟೀಲ್, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು ಮೊದಲಾದವರುಗಳಿದ್ದಾರೆ (26.12.2025)




ರಾಣೆಬೆನ್ನೂರಿನಲ್ಲಿ ಹಾವೇರಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಪ್ರಥಮ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಮಾರುತಿ ಶಿಡ್ಲಾಪುರ, ಶ್ರೀ ಬಸವರಾಜ ಪಾಟೀಲ್, ಡಾ. ಸಿ. ಸೋಮಶೇಖರ್, ವಚನಾನಂದ ಶ್ರೀಗಳು, ದೊಡ್ಡಪೇಟೆ ವಿರಕ್ತಮಠದ ಶ್ರೀಗಳು, ಶ್ರೀ ಪ್ರಕಾಶ್ ಕೋಳಿವಾಡ, ಸಾಣೇಹಳ್ಳಿ ಶ್ರೀಗಳು ಹಾಗೂ ಗುಡ್ಡದ ಆನ್ವೇರಿ ಶ್ರೀಗಳು ಮೊದಲಾದವರುಗಳಿದ್ದಾರೆ (29 ಡಿಸೆಂಬರ್ 2025)



ಹಾವೇರಿ ಶ್ರೀ ಹುಕ್ಕೇರಿಮಠದ ಶ್ರೀ ಶಿವಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳ ಸುವರ್ಣ ಮಹೋತ್ಸವ ಸಮಾರಂಭವನ್ನು ಮುಂಡರಗಿ, ಶಿರಹಟ್ಟಿ, ಹುಬ್ಬಳ್ಳಿ, ಸುತ್ತೂರು ಮತ್ತು ಕೋಡಿಮಠದ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಸದಾಶಿವ ಶ್ರೀಗಳು, ಶ್ರೀ ಶಿವರಾಜ ಸಜ್ಜನರ, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಬಸವರಾಜ ಶಿವಣ್ಣನವರ, ಶ್ರೀ ಶ್ರೀನಿವಾಸ್ ಮಾನೆ, ಶ್ರೀ ಬಿ.ಬಿ. ಚಿಮ್ಮನಕಟ್ಟಿ, ಶ್ರೀ ಪ್ರಕಾಶ್ ಕೋಳಿವಾಡ ಹಾಗೂ ಶ್ರೀ ಮುರಿಗೆಪ್ಪ ಶೆಟ್ಟರ್‌ರವರುಗಳಿದ್ದಾರೆ (28 ಡಿಸೆಂಬರ್ 2025)



ಹನೂರಿನಲ್ಲಿ ರಾಜೇಂದ್ರ ಶ್ರೀಗಳವರ ಶತೋತ್ತರ ದಶಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಿ.ಕೆ. ರವಿಕುಮಾರ್, ಶ್ರೀ ಸೈಯದ್ ಇಬ್ರಾಹಿಂ ಖಾಸ್ಮಿ ದಾಮರ್ ಬರುಕಾತುಹಂ, ಶ್ರೀ ಎಂ. ನಂಜುಂಡಸ್ವಾಮಿ, ಶ್ರೀ ಎಸ್. ಬಾಲರಾಜು, ಶ್ರೀ ಎಸ್. ನಿಶಾಂತ್, ಶ್ರೀ ಆರ್. ನರೇಂದ್ರ, ಶ್ರೀ ಪೊನ್ನಾಚಿ ಮಹದೇವಸ್ವಾಮಿ, ಸಿದ್ಧಗಂಗಾ ಶ್ರೀಗಳು, ದೇವನೂರು, ಸಾಲೂರು ಮಠ, ಮರಳೇಗವಿ ಮಠದ ಶ್ರೀಗಳು, ಹೊಸದುರ್ಗ ಭಗೀರಥ ಉಪ್ಪಾರ ಪೀಠದ ಶ್ರೀಗಳು, ಚಿಕ್ಕಿಂದುವಾಡಿ ಶ್ರೀಗಳು, ಶ್ರೀ ಎಂ.ಆರ್. ಮಂಜುನಾಥ್, ಶ್ರೀ ಎಸ್. ದತ್ತೇಶ್‌ಕುಮಾರ್, ಶ್ರೀ ಶಾಗ್ಯ ರವಿಕಮಾರ್, ಶ್ರೀ ಶಾಹುಲ್ ಅಹಮದ್‌ರವರುಗಳಿದ್ದಾರೆ. (13 ಡಿಸೆಂಬರ್ 2025)




ಇಂಡಿ ತಾಲ್ಲೂಕು ಖೇಡಗಿ ಶ್ರೀ ವಿರಕ್ತಮಠದ ಶ್ರೀ ಶಿವಬಸವರಾಜೇಂದ್ರ ಸ್ವಾಮಿಗಳವರ ಷಷ್ಟ್ಯಬ್ದಿ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರು ಶ್ರೀಗಳನ್ನು ಸನ್ಮಾನಿಸಿ ಅಭಿನಂದಿಸಿದರು. ಗಡಿಗೌಡಗಾಂವ್, ಮಸೂತಿ, ಅಮೀನಗಡ ಹಾಗೂ ಇಂಚಗೇರಿ ಶ್ರೀಗಳಿದ್ದಾರೆ (31 ಡಿಸೆಂಬರ್ 2025)



ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಗುರುನಮನ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಯರನಾಳ ಶ್ರೀಗಳು, ಶ್ರೀ ಸ್ವಾಮಿ ವಿರೇಶಾನಂದ ಸರಸ್ವತಿಯವರು, ಶ್ರೀ ಶಿವಶಂಕರಪ್ಪ ಸಾಹುಕಾರ್, ಡಾ. ಗುರುರಾಜ್ ಕರ್ಜಗಿ ಹಾಗೂ ಶ್ರೀ ಡಿ.ಆರ್. ಪಾಟೀಲ್‌ರವರುಗಳಿದ್ದಾರೆ (29 ಡಿಸೆಂಬರ್ 2025)



ಮಳವಳ್ಳಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವ ಸಮಾರೋಪದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸಮಾರೋಪ ಭಾಷಣ ಮಾಡುತ್ತಿರುವುದು. ಶ್ರೀ ಮರಿತಿಬ್ಬೇಗೌಡ, ಶ್ರೀಮತಿ ವಿಜಯಲಕ್ಷ್ಮೀ, ಶ್ರೀ ಮಧು ಜಿ. ಮಾದೇಗೌಡ, ಶ್ರೀಮತಿ ಮಲ್ಲಾಜಮ್ಮ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಕೆ.ಎಂ. ಉದಯ್, ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ವಾಲ್ಮೀಕಿ ಪೀಠದ ಜಗದ್ಗುರುಗಳು, ಕನಕಪುರದ ಉಭಯ ಶ್ರೀಗಳು, ಸಿದ್ಧಗಂಗಾ ಶ್ರೀಗಳಿದ್ದಾರೆ (21 ಡಿಸೆಂಬರ್ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 12, December 2025



ISSN 2583-7

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org